ದೇಸಿ ಕೃಷಿ ಜ್ಞಾನ

ಸಂಪುಟ 3

ಬೀಜ

ಕೃಷ್ಣಪ್ರಸಾದ್



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದೇಸಿ ಕೃಷಿ ಸಂಪುಟ

ಬೀಜ

. . . .

ನಾಡು ತಳಿಗಳ ಜಾಡಿನಲ್ಲಿ...

ಸಂಪಾದಕ

ಜಿ. ಕೃಷ್ಣಪ್ರಸಾದ್

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

BEEJA-Nadutaligala Jadinalli - by **G. Krishna Prasad,** Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

ಮೊದಲ ಮುದ್ರಣ: ೨೦೦೮
ಪುಟಗಳು : xvi + ೧೦೮
ಬೆಲೆ : **ರೂ. ೫೦/–**
ಪ್ರತಿಗಳು : ೧೦೦೦

Print : 2008
Page : xvi + 108
Price : **Rs. 50/-**
Copies : 1000
ISBN : 81-7713-251-2

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

ಮುಖಪುಟ ವಿನ್ಯಾಸ : **ಎಂ.ಎಸ್. ಮೂರ್ತಿ**
ರೇಖಾಚಿತ್ರಗಳು : **ಎಂ.ಎಲ್. ಸೋಮವರದ**
ಕರಡು ತಿದ್ದಿದವರು : **ಎ.ಆರ್. ಮಣಿಕಾಂತ್**

ಅಕ್ಷರ ಜೋಡಣೆ :
ಇಳಾ ಮುದ್ರಣ
ಬೆಂಗಳೂರು–೫೬೦ ೦೨೬, ದೂ: ೨೬೭೫೭೧೫೯

ಮುದ್ರಕರು :
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು–೫೬೦ ೦೨೭, ದೂ: ೨೨೨೩೪೦೬೬

ಪ್ರಧಾನ ಸಂಪಾದಕರು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಸಂಪಾದಕ ಸಲಹಾ ಮಂಡಳಿ

ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ನಾಗೇಶ್ ಹೆಗಡೆ
ಡಾ. ಕೆ. ಪುಟ್ಟಸ್ವಾಮಿ
ಡಾ. ಕೆ.ವೈ. ನಾರಾಯಣಸ್ವಾಮಿ
ಭರಮಗೌಡ
ಜಿ. ನಾರಾಯಣರೆಡ್ಡಿ

ಶ್ರೀ ಹೊರೆಯಾಲ ದೊರೆಸ್ವಾಮಿ
ಡಾ. ಕಾಶಿನಾಥ ಅಂಬಲಗಿ
ಡಾ. ಶರಣಮ್ಮ ಗೊರೆಬಾಳ
ಶ್ರೀಮತಿ ಶೀಲಾ ತಿವಾರಿ

ಪ್ರಕಾಶಕರು

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು

ಲೇಖಕರು

೧.	ಮಣ್ಣು ಮತ್ತು ನೀರು	ಶ್ರೀಪಡ್ರೆ
೨.	ಅರಣ್ಯ	ಶಿವಾನಂದ ಕಳವೆ
೩.	ಬೀಜ	ಕೃಷ್ಣಪ್ರಸಾದ್
೪.	ಆಹಾರ / ಆರೋಗ್ಯ	ಬಿ.ಎಸ್. ಸೋಮಶೇಖರ್
೫.	ಕೃಷಿ ಆಚರಣೆ	ಮಲ್ಲಿಕಾರ್ಜುನ ಹೊಸಪಾಳ್ಯ
೬.	ಕೃಷಿ ಉಪಕರಣಗಳು	ಗಾಣಧಾಳು ಶ್ರೀಕಂಠ
೭.	ನಿರ್ಮಾಣ ಕಲೆ	ಅನಂತತೀರ್ಥ ಪ್ಯಾಟಿ, ನರೇಂದ್ರ ರೈ ದೇರ್ಲ
೮.	ಕೀಟ / ರೋಗ	ವಿಜಯ ಅಂಗಡಿ
೯.	ಜಾನುವಾರು	ಡಾ. ಎಂ. ನಾರಾಯಣಸ್ವಾಮಿ
೧೦.	ಕುರಿಸಾಕಣೆ	ಡಾ. ಸಿ.ಎಸ್. ರಘುಪತಿ
೧೧.	ತೋಟಗಾರಿಕೆ	ಪೂರ್ಣಪ್ರಜ್ಞ ಬೇಳೂರು

ಅಧ್ಯಕ್ಷರ ಮಾತು

●

ಭಾರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದು ಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿಕಾಯಕವನ್ನೂ ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯ ಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆ ಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆ ಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿಕೈಗಾರಿಕೆಗಳು ನಾಶವಾದವು. ನೆಲದ ಜೀವಸತ್ವ ಹಾಳಾಯಿತು, ನಿಸರ್ಗದ ಜೀವಸರಪಳಿ ಸಾಕಷ್ಟು

ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆ ಕಟ್ಟೆ ಕುಂಟೆ ಬೆಂಚೆ ಪೆಂಚೆ ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿ ಗಳಾಗಿದ್ದವು. ಇದೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ. ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ ಕೃಷಿ ಒಂದು ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿ ಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು. ಬೃಹತ್ತಿನ ಭ್ರಮೆಯಲ್ಲಿ ಕನಸಿದ ನಮ್ಮ ರಾಜಕೀಯ ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆ ಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳ ರೈತನ ಭೂಮಿಕಾಣಿಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆ ಬಾಗಿಲಿಗೆ ಆಹ್ವಾನಿಸಿದ. ಸಾಲ ಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ, ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಗುಟ್ಕಾ ಸಾರಾಯಿಗಳ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕಾರಣ ಬಿಡುವಿಲ್ಲದ ದುಡಿತದ ನಡುವೆ ಅವರಿಗೆ ಬಿಡುಗಡೆ ಕೊಡುವ ಚಟಗಳು ಇವಾಗಿವೆ. ಇವುಗಳ ಜೊತೆಗೆ ಮಚ್ಚು ಲಾಂಗುಗಳ ಉಪ್ಪಿ ಶಿವು ನಾರಾಯಣರು ಅವರನ್ನು ಸಿನಿಮಾ ಎಂಬ ಭ್ರಾಮಕ ಲೋಕದಲ್ಲಿ ಉದ್ರೇಕಿಸುತ್ತಿದ್ದಾರೆ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿದೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ. ಆಧುನಿಕ ಕೃಷಿಗೆ ಹಂಬಲಿಸಿದರೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ

ಜೋತುಬಿದ್ದಿದ್ದಾರೆ. ಇವರ ನಡುವೆ ಆಧುನಿಕ ಪ್ರಯೋಗದ ಪ್ರಾತ್ಯಕ್ಷತೆಗೆ ಒಡ್ಡಿಕೊಂಡವರೂ ಸಾಗಿದ್ದಾರೆ. ಹೀಗಾಗಿ ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಇಂಥ ವಾತಾವರಣದಲ್ಲಿ ದೇಸಿ ಕೃಷಿ ಜ್ಞಾನದ ಹೆಸರು ಹೇಳುತ್ತಾ ಹಲವು ಜೈವಿಕ ಪದ್ಧತಿಯ ಹೊಸ ಪ್ರಯೋಗಗಳನ್ನು ನಡೆಸುವ ಅದನ್ನು ಎಲ್ಲ ಕಡೆಗೂ ಏಕ ಮಾದರಿಯಂತೆ ಪ್ರಚುರಪಡಿಸುವ ಜ್ಞಾನಿಗಳು ಹುಟ್ಟಿಕೊಂಡಿದ್ದಾರೆ. ಅದನ್ನು ಅಲ್ಲಗಳೆಯುತ್ತಾ ಮತ್ತೊಂದು ರೀತಿಯಲ್ಲಿ ಪ್ರಯೋಗಶೀಲರಾಗಿ ಇದೇ ನಿಜವಾದ ದೇಸಿ ಪದ್ಧತಿ ಎಂದು ತಮ್ಮದೇ ಆದ ಮಾದರಿಯೊಂದನ್ನು ಹೇಳುತ್ತಾ ಪ್ರಾತ್ಯಕ್ಷತೆಗಳನ್ನು ತೋರುತ್ತಿರುವ ನೆಲನಿಷ್ಠೆಯಲ್ಲಿ ಮಾತನಾಡುವವರೂ ಇದ್ದಾರೆ. ಈ ಎಲ್ಲ ಪ್ರಯೋಗಗಳೂ ವಸ್ತುಸ್ಥಿತಿಗಿಂತ ಹೆಚ್ಚಾಗಿ ಉತ್ಪ್ರೇಕ್ಷಿತ ಮಾತುಗಳ ಸೂಕತದಲ್ಲಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ ಎಂಬ ಅನುಮಾನ ದಟ್ಟವಾಗುತ್ತಿದೆ. ಏಕೆಂದರೆ ನೆಲಮೂಲ ವಿಜ್ಞಾನವೆಂಬುದು ಎಂದೂ ಏಕಮಾದರಿಯದಲ್ಲ. ಅದರ ಗುಣವೇ ಬಹುತ್ವ ಮೂಲದ್ದು. ಹಾಗೂ ಪ್ರದೇಶನಿಷ್ಠೆಯಲ್ಲಿ ಅನುಭವ ಜನ್ಯವಾದದ್ದು. ಈ ಹಿನ್ನೆಲೆಯಲ್ಲಿಯೇ ದೇಸಿ ಜ್ಞಾನ ಎನ್ನುವಾಗ 'ದೇಸಿ' ಪದವನ್ನು ವಿಶೇಷವಾಗಿ ಅರ್ಥೈಸಿಕೊಳ್ಳಬೇಕಾಗಿದೆ. ದೇಸಿ ಎಂಬುದು ಜನಪದಕ್ಕೆ ಸಮಾನಾರ್ಥಕವಾಗಿಯಾಗಲೀ ಪೂರಕವಾಗಿಯಾಗಲೀ ಪರ್ಯಾಯವಾಗಿಯಾಗಲೀ ಬಳಸುವ ಪದವಲ್ಲ. ಅದು ಮಾರ್ಗಕ್ಕೆ ವಿರುದ್ಧವಾಗಿ ಸಾಮಾನ್ಯೀಕರಿಸಿ ಪ್ರಯೋಗಿಸುವ ಪದವಾದರೂ ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಲೇ ಏಕ ಎಂಬುದನ್ನು ನಿರಾಕರಿಸುತ್ತ ಅನೇಕ ಎಂಬುದನ್ನು ತುಂಬಿಕೊಳ್ಳುತ್ತ ತನ್ನ ಅರ್ಥವ್ಯಾಪ್ತಿಯನ್ನು ಪ್ರತೀತಗೊಳಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಈ ಪದವನ್ನು ಪ್ರಯೋಗಿಸುವಾಗಲಂತೂ ಅದರ ಬಹುತ್ವದ ಶ್ರೀಮಂತಿಕೆ ಸಮೃದ್ಧವಾಗಿ ಕಾಣುವಂಥಾದ್ದು. ಉದಾಹರಣೆಗೆ ಕರ್ನಾಟಕವನ್ನು ಕೃಷಿಗೆ ಸಂಬಂಧಿಸಿ ನಾಲ್ಕು ನೆಲೆಗಳಲ್ಲಿ ವಿಂಗಡಿಸಬಹುದು. ಮಲೆನಾಡು, ಅರೆಮಲೆನಾಡು, ಬಯಲು ಸೀಮೆ, ಬೆಂಗಾಡುಸೀಮೆ. ಈ ನಾಲ್ಕು ಪ್ರದೇಶಗಳ ಭೂವೈಲಕ್ಷಣ್ಯ ಮಳೆ ಬಿಸಿಲಿನ ಹವಾಮಾನ ಪರಿಸ್ಥಿತಿ ತೀರ ವಿಭಿನ್ನವೂ ವಿಶಿಷ್ಟವೂ ಆದದ್ದು. ಆದರೆ ಮಲೆನಾಡು ಎಂದ ತಕ್ಷಣ ಅದನ್ನು ಏಕಮಾದರಿಯಲ್ಲಿ ಗ್ರಹಿಸುವುದು ತಪ್ಪು, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಈ ಪ್ರದೇಶಗಳು ಮಲೆನಾಡು ಪ್ರದೇಶಗಳಾದರೂ ಅವುಗಳ ವಿಭಿನ್ನತೆಗಳು ಆಯಾ ನೆಲದ ಗುಣವಿಶೇಷತೆಯ ಅಸ್ಮಿತೆಗಳು. ಹಾಗೆಯೇ ಬಯಲುಸೀಮೆಯೆಲ್ಲಾ ಒಂದೇ ಅಲ್ಲ, ಹೀಗಾಗಿ ದೇಸಿ ಎಂಬುದು ಐದು ಮೈಲಿಯ ಅಂತರದಲ್ಲಿ ತನ್ನ ವ್ಯತ್ಯಾಸವನ್ನು ಢಾಳಾಗಿ ಕಾಣಿಸುವ ಅನನ್ಯತೆಯಿಂದ ಕೂಡಿರುತ್ತದೆ. ಈ ಅನನ್ಯತೆಯ ಅರಿವೆಂಬುದು ಆಯಾ ನೆಲಮೂಲದ ಅನುಭವ ಮೂಸೆಯಲ್ಲಿ ಪರಿಪಾಕಗೊಂಡು ಮೂಡಿರುತ್ತದೆ. ಬಯಲುಸೀಮೆಯಲ್ಲಿ ಒಂದೇ ಪ್ರದೇಶದ ಕೆರೆ ಬಯಲಿಗೂ ಅಲ್ಲಿಂದ ಐದು ಮೈಲಿ ಆಚೆಗಿರುವ ಕುಂಟೆ, ಬೆಂಚೆ, ಕಟ್ಟೆಗಳನ್ನು ಮಾತ್ರ ಒಳಗೊಂಡ ಬಯಲಿಗೂ ವ್ಯತ್ಯಾಸವಿರುತ್ತದೆ, ಬಿತ್ತುವ ಬೀಜ, ಬಳಸುವ ಗೋಡುಗೊಬ್ಬರ ಉಪಕರಣ ಕೃಷಿ ಮಾಡುವ ವಿಧಾನ, ಕಾಲಮಾನ ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಪಕ್ವಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ. ಇದು ದೇಸಿವಿಜ್ಞಾನ. ಇಂಥ ಅರಿವನ್ನು ಗಂಭೀರವಾಗಿ ಸ್ವೀಕರಿಸಿ ಇದನ್ನು ಮೂಲ ಬೇರಾಗಿಸಿಕೊಂಡು ನಮ್ಮ ಹೊಸ ಸಂಶೋಧನೆಗಳು ಬೆಳೆಯಬೇಕಾಗಿದೆ. ಒಗ್ಗದ ನೆಲಕ್ಕೆ ವೆನಿಲಾ ಹಾಕುವುದು ಮಿಡಿ ಸೌತೆ, ಬೀಟಿ ಹತ್ತಿಯ ಭ್ರಮೆಗೆ ಸಿಲುಕಿ

ಹೊಂದಿಕೊಳ್ಳದ ಬೀಜ ಬಿತ್ತುವುದು ಆಗಬಾರದು. ನಿರ್ಬೀಜ ತಳಿಗಳನ್ನು ಮಾರುತ್ತಿರುವ ಬೀಜ ಗೊಬ್ಬರ ಔಷಧಿ ಕಂಪನಿಗಳ ಭ್ರಮಾತ್ಮಕ ಜಾಹೀರಾತಿನ ಮೋಸಜಾಲದಲ್ಲಿ ನಮ್ಮ ಬಡರೈತರು ಹಾಳಾಗಿರುವುದು ಹೀಗೆ. ನಮ್ಮ ಅಕ್ಷರ ಬುದ್ಧಿಯ ಕೃಷಿ ಪಂಡಿತರು ಇಂಥ ಹುನ್ನಾರಗಳಿಗೆ ಮುಖವಾಣಿಗಳಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ. ಇದು ತಪ್ಪಬೇಕು. ಜೊತೆಗೆ ಇವರ ದಂಧಾದುಂಧಿಯ ಆಕ್ರಮಣದಲ್ಲಿ ಹಾಳಾಗುತ್ತಿರುವ ಭೂಮಿ ಹಾಗೂ ಜೀವಜಗತ್ತು ರಕ್ಷಿತವಾಗಬೇಕು. ಭೂಮಿಯ ಧರ್ಮಕ್ಕೆ ಅಂದರೆ ಪಂಚಭೂತಗಳಿಗೆ ಎಂದೂ ವಂಚನೆಯೆಸಗದಂತೆ ರೂಪುಗೊಂಡ ದೇಸಿಜ್ಞಾನ ಪದ್ಧತಿ ಅಳಿದುಹೋಗಬಾರದು. ಅದನ್ನು ಪುನರುಜ್ಜೀವಿಸುತ್ತ ಆ ಪರಂಪರೆಯ ಮುಂದುವರಿಕೆಯಾಗಿ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೃಷಿ ಸಂಶೋಧನೆಗಳು ನಡೆಯಬೇಕು. ಆಧುನಿಕ ಕೃಷಿಪಂಡಿತರು ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ನೆಲಮೂಲ ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಬಲವರ್ಧನೆಯ ಕಡೆಗೆ ಆಸಕ್ತಿ ವಹಿಸಬೇಕು. ಹಾಗೆಯೇ ದೇಸಿಯ ಬಹುತ್ವವನ್ನು ಮನಗಂಡು ನೆಲನಿಷ್ಠೆಯ ಜ್ಞಾನವನ್ನು ಗೌರವಿಸುವ ವಿಸ್ತರಿಸುವ ತಿಳುವಳಿಕೆ ನೀಡುವ ಕಡೆ ತೊಡಗಿಸಿಕೊಳ್ಳಬೇಕು, ಇದು ತುರ್ತಾಗಿ ಆಗಬೇಕಾದ ಕೆಲಸ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿ ಪದ್ಧತಿ, ಸಹಜ ಕೃಷಿ ಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು

ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ, ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿ ಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿಕೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದಿಂದ ಈ ದೇಸಿಕೃಷಿ ಜ್ಞಾನ ಮಾಲಿಕೆಯನ್ನು ಪ್ರಾರಂಭಿಸಲಾಗಿದೆ.

ಈ ಮಾಲಿಕೆಯನ್ನು ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಾಗ ಹಲವು ರೀತಿಯ ಅಪಸ್ವರಗಳು ಕೇಳಿಬಂದವು. ಕೃಷಿಗೂ ಪುಸ್ತಕ ಪ್ರಾಧಿಕಾರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ? ಎಂದು ಪ್ರಶ್ನಿಸಿದವರೂ ಇದ್ದಾರೆ. ಪುಸ್ತಕ ಹಾಗೂ ಪುಸ್ತಕ ಸಂಸ್ಕೃತಿ ಎಂದರೆ ಕೇವಲ ಸಾಹಿತ್ಯ, ಸಂಶೋಧನೆ ವಿಜ್ಞಾನ, ವಿಚಾರ ಇತ್ಯಾದಿ ಅಕ್ಷರ ಜಗತ್ತಿನ ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನಂಬಿದವರಿಗೆ ಹಾಗನ್ನಿಸುವುದು ಸಹಜ. ನಮ್ಮ ಸಮಾಜದಲ್ಲಿ ಶ್ರಮಿಕ ಮೂಲಕ ಕಾಯಕ ಜೀವಿಗಳನ್ನು ಪುಸ್ತಕ ಸಂಸ್ಕೃತಿಯಿಂದ ದೂರವಿಟ್ಟು ಮಾತನಾಡುವ ಇಂಥ ಜಾಡ್ಯ ಇನ್ನೂ ಮುಂದುವರೆದಿದೆ. ಪುಸ್ತಕ ಚಿಂತನೆ ಇವರಿಗೆ ತಿಳಿಯಲಾರದ್ದು ಎನ್ನುವ ಮೇಲರಿಮೆಯ ಭಾವ ಅಕ್ಷರ ಜಗತ್ತಿನ ಜನರದ್ದಾದರೆ ಅದು ಸಮಾಜದ ಸ್ವಾಸ್ಥ್ಯ ಕೆಟ್ಟದ್ದರ ಸೂಚನೆ. ಸಂಸ್ಕೃತಿಯನ್ನು ವಿಸ್ತರಿಸುವ ಹೊಣೆಗಾರಿಕೆಯನ್ನು ಹೊತ್ತ ಅಕಾಡೆಮಿಗಳು, ಪ್ರಾಧಿಕಾರಗಳು, ಪ್ರಸಾರಾಂಗಗಳು ನಿರ್ದಿಷ್ಟ ವರ್ಗಗಳಿಗೆ ಸೀಮಿತಗೊಳಿಸಿಕೊಂಡ ಕಾರ್ಯಕ್ರಮಗಳಲ್ಲಿ ಪರ್ಯವಸಾನ ವಾಗುವ ಪರಿಪಾಠ ತಪ್ಪಬೇಕು. ಇವುಗಳು ನಮಗೆ ಏನು ಕೊಟ್ಟಿವೆ ಎಂದು ಪ್ರಶ್ನಿಸುವ ಶ್ರಮಿಕ ಸಮುದಾಯಗಳಿಗೆ ಉತ್ತರಿಸುವ ನೈತಿಕ ಹೊಣೆಗೆ ಇವುಗಳ ಭಾಜನವಾಗಬೇಕು. ಶ್ರಮಿಕ ಬಹುಸಮುದಾಯಗಳು ಈ ಎಲ್ಲ ಸಂಸ್ಥೆಗಳ ನೇರ ಫಲಾನುಭವಿಗಳಾಗಬೇಕು. ಜನರ ಬೆವರಿನ ಸಂಪತ್ತು ಸಾಮಾಜಿಕ ನ್ಯಾಯದ ನೈತಿಕ ಎಚ್ಚರದಲ್ಲಿ ವಿನಿಯೋಗವಾಗಬೇಕು. ಪುಸ್ತಕ ಪ್ರಾಧಿಕಾರ ಇದನ್ನು ಕರ್ತವ್ಯವೆಂಬ ಭಾವದಲ್ಲಿ ಸ್ವೀಕರಿಸಿ ಕಾರ್ಯಮುಖಿಯಾಗಿದೆ. ಈ ಕಾರ್ಯಯೋಜನೆಗೆ ಕೈಜೋಡಿಸಿದ ಮನಸ್ಸುಗಳು ನೂರಾರು. ಅವುಗಳನ್ನು ಇಲ್ಲಿ ನೆನೆಯುವುದು ಕರ್ತವ್ಯದ ಒಂದು ಭಾಗವೆಂದು ಭಾವಿಸಿದ್ದೇನೆ.

ದೇಸೀ ಕೃಷಿ ಜ್ಞಾನವನ್ನು ದಾಖಲಿಸುವ ಆಶಯಕ್ಕೆ ಪ್ರಾಧಿಕಾರದ ಎಲ್ಲ ಸದಸ್ಯ ಬಂಧುಗಳು ಒಕ್ಕೊರಲಿನ ಸಹಮತ ನೀಡಿದ್ದು ಈ ಯೋಜನೆ ಕಾರ್ಯರೂಪಕ್ಕಿಳಿಯಲು ಕಾರಣವಾದ ಮೊದಲ ಹಂತ. ಅದಾದ ಮೇಲೆ ತೇಜಸ್ವಿಯವರು ನೀಡಿದ ಮಾರ್ಗದರ್ಶನ ಮರೆಯಲಾರದ್ದು. ಅವರನ್ನು ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಲು ಮನವಿಮಾಡಿಕೊಂಡಾಗ ತಮ್ಮ ಸಹಜ ಒರಟು ಭಾಷೆಯಲ್ಲಿ ಬೈದು ನಿರಾಕರಿಸಿದ ಅವರ ಪ್ರೀತಿ ಅದು ತೋರಿದ ದಾರಿ

ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ ಮೊದಲಾದ ಸಾಧಕರ ಪರಿಚಯ ಮಾಡಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಜಿ.ಕೃಷ್ಣಪ್ರಸಾದರ ಆಸ್ಥೆ, ನೇತೃತ್ವ ಈ ಯೋಜನೆಯ ಸ್ವರೂಪಕ್ಕೆ ಚಾಲನೆ ನೀಡಿತು. ಗಾಣಧಾಳು, ಪ್ಯಾಟಿ, ಗೆಳೆಯರು ಈ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡು ಶಿಬಿರಗಳ ಹೊಣೆಹೊತ್ತು ಸಂಪರ್ಕ ಸೇತುಗಳಾಗಿ ಎಲ್ಲರನ್ನೂ ಕೂಡಿಸುವಲ್ಲಿ ನೆರವಾದರು. ಮೊದಲು ಶಿಬಿರವನ್ನು ಹಮ್ಮಿಕೊಳ್ಳಲು ಆಶ್ರಯ ಹಾಗೂ ನೈತಿಕ ಬೆಂಬಲವನ್ನು ನೀಡಿದವರು ಆತ್ಮೀಯ ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು. ಶಿಬಿರದಲ್ಲಿ ಚರ್ಚೆಯನ್ನು ಮಾಹಿತಿ ವಿಧಾನವನ್ನು ರೂಪುರೇಷೆ ಮಾಡಿದವರು ಶ್ರೀ ನಾಗೇಶ ಹೆಗಡೆ ಅವರು. ಇವರೆಲ್ಲರ ಜೊತೆಗೆ ಅನುಭವದ ಜ್ಞಾನ ಸಮೃದ್ಧಿಯನ್ನು ಧಾರೆ ಎರೆದು ಬೆಳೆಸಿದವರು ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ, ಕಳವೆ ಹಾಗೂ ನಾಡಿನ ರೈತಬಂಧುಗಳು. ಎರಡನೆಯ ಶಿಬಿರವನ್ನು ಹಮ್ಮಿಕೊಳ್ಳಲು ಸ್ಥಳ ನೀಡಿದವರು ಸೂರಶೆಟ್ಟಿ ಕೊಪ್ಪದ ಬೈಪ್ ಬಳಗ. ಆ ಶಿಬಿರದಲ್ಲಿ ಭಾಗವಹಿಸಿದ ಆ ಸುತ್ತಲಿನ ರೈತಬಂಧುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ರೈತಬಂಧುಗಳು ನೀಡಿದ ಮಾಹಿತಿಯನ್ನು ದಾಖಲಿಸುವಲ್ಲಿ ಶ್ರಮಿಸಿದವರು ಶ್ರೀಮತಿ ರೇಖಾ. ತಮ್ಮ ಜಾನಪದೀಯ ಅಧ್ಯಯನ ದೃಷ್ಟಿ ಸೂಕ್ಷ್ಮತೆಗಳಿಂದ ಚರ್ಚೆಗೆ ಹೊಸ ಆಯಾಮ ನೀಡುತ್ತಿದ್ದ ಗೆಳೆಯರು ಕೆ.ವೈ. ನಾರಾಯಣಸ್ವಾಮಿ, ಕೆ.ಪುಟ್ಟಸ್ವಾಮಿ, ಎಂ.ಎಸ್. ಮೂರ್ತಿ, ಬಿ. ಎಸ್. ಸೋಮಶೇಖರ್, ಡಾ. ರಘುಪತಿ, ಡಾ.ನಾರಾಯಣಸ್ವಾಮಿ, ಡಾ.ಮುರಳಿ, ಪೂರ್ಣಪ್ರಜ್ಞ, ದೇರ್ಲ, ಜಿ.ಎನ್. ಮೋಹನ್, ಬಸವರಾಜ ಸಂತೇಶಿವರ, ಶಿವನಹಳ್ಳಿ ರಮೇಶ್, ಪ್ರೊ. ಶಿವರಾಮಯ್ಯ, ಡಾ. ರಾಮಕೃಷ್ಣಯ್ಯ ಮೊದಲಾದ ಗೆಳೆಯರು. ಶಿಬಿರಗಳ ಮಾಹಿತಿಯನ್ನು, ಸಭೆಗಳ ನಡಾವಳಿಯನ್ನು ದಾಖಲಿಸಿ ಡಿ.ಟಿ.ಪಿ. ಮಾಡಿ ಒದಗಿಸುತ್ತಿದ್ದವರು ಶ್ರೀಮತಿ ಸತ್ಯವಾಣಿ, ವಿಜಯ, ಮಂಜು, ಶಂಕರ, ರಾಮಯ್ಯ ಮೊದಲಾದವರು. ಶಿಬಿರದ ಆಯೋಜನೆಯಿಂದ ಹಿಡಿದು ಸಂಪೂರ್ಣ ನಿರ್ವಹಣೆಯವರೆಗೆ ಬದ್ಧತೆಯಿಂದ ದುಡಿದವರು ಆಡಳಿತಾಧಿಕಾರಿಗಳಾದ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಅಶೋಕ ಎನ್. ಚಲವಾದಿ ಅವರು. ಲಕ್ಷ್ಮಿ ಮುದ್ರಣಾಲಯ ಮತ್ತು ಇಳಾ ಮುದ್ರಣದ ಶ್ರಮಿಕ ಮಿತ್ರರ ಕಾರ್ಯಶೀಲತೆ. ಇವೆಲ್ಲದರ ಜೊತೆಗೆ ಈ ಯೋಜನೆ ಕಾರ್ಯಗತವಾಗಲು ಅವಕಾಶ ಕಲ್ಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರು, ಮನು ಬಳಿಗಾರ್, ಕಾ.ತ. ಚಿಕ್ಕಣ್ಣ, ಜೆ.ಎನ್. ಶಾಮರಾವ್, ಎಸ್.ಐ.ಭಾವಿಕಟ್ಟಿ, ಮುಂತಾದವರು. ಹೀಗೆ ಈ ಕೃತಿಗಳ ರೂಪಣದ ಹಿಂದೆ ನೂರಾರು ಮನಸ್ಸುಗಳ ಸಂಕಲ್ಪ ಶಕ್ತಿ ಕೆಲಸ ಮಾಡಿದೆ. ಇವರೆಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಫೆಬ್ರವರಿ ೨೦೦೮
ಬೆಂಗಳೂರು

ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಅಧ್ಯಕ್ಷರು

ಸಂಪಾದಕರ ನುಡಿ

●

ಕನ್ನಡ ನಾಡು ಬೀಜ ವೈವಿಧ್ಯದ ತವರು. ಎಣಿಕೆಗೆ ದಕ್ಕದಷ್ಟು ತಳಿಗಳು ಇಲ್ಲಿನ ಹೊಲಗದ್ದೆಗಳಲ್ಲಿ ಮನೆಮಾಡಿಕೊಂಡಿವೆ. ಇಂಥ ಅಮೂಲ್ಯ ಸಂಪತ್ತನ್ನು ಹಳ್ಳಿಗಾಡಿನ ರೈತಾಪಿಗಳು ತಲೆಮಾರುಗಳಿಂದ ಕಾಪಾಡಿಕೊಂಡು ಬಂದಿದ್ದಾರೆ. ತಮ್ಮ ಅನುಭವ ಜ್ಞಾನವನ್ನು ಹಾಡು, ಆಚರಣೆ, ಪದ್ಧತಿಗಳ ಮೂಲಕ ಜೀವಂತವಾಗಿಟ್ಟಿದ್ದಾರೆ. ಆದರೆ ಜಾಗತೀಕರಣ ಮತ್ತು ಆಧುನಿಕ ತಾಂತ್ರಿಕತೆ ದೇಸಿಯ ಜ್ಞಾನ ಮತ್ತು ಬೀಜಕ್ಕೆ ಸವಾಲು ಒಡ್ಡುತ್ತಿವೆ ನಾಶಮಾಡಲು ಹೊಂಚುಹಾಕುತ್ತಿವೆ.

ದೇಸೀಯ ಬೀಜ ವೈವಿಧ್ಯವನ್ನು ಜೋಪಾನಮಾಡುವ ತುರ್ತು ಎಂದಿಗಿಂತ ಇಂದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ 'ದೇಸೀ ಕೃಷಿ ಸಂಪುಟ ಮಾಲಿಕೆ'ಗೆ ಬೀಜಗಳನ್ನು ಕುರಿತ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

'ಬೀಜ'ದ ಮೇಲಿನ ಪುಸ್ತಕ ಬರೆಯುವ ಜವಾಬ್ದಾರಿಯನ್ನು ನನಗೆ ಹೊರಿಸಿ, ದೇಸಿ ಜ್ಞಾನ ದಾಖಲಾತಿಯ ಪುಣ್ಯದ ಕೆಲಸವನ್ನ ಮಾಡಲು ಅನುವು ಮಾಡಿಕೊಟ್ಟ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರಿಗೆ ಅಭಾರಿಯಾಗಿದ್ದೇನೆ.

ಹಳ್ಳಿಗರ ಮನೆ ಮನಗಳಲ್ಲಿ ಸೇರಿಹೋಗಿರುವ ಬೀಜ ವೈವಿಧ್ಯ, ಜ್ಞಾನ ಮತ್ತು ಸಂಸ್ಕೃತಿಯ ದಾಖಲಾತಿ ವೈಯಕ್ತಿಕವಾಗಿ ಅಸಾಧ್ಯವೇ ಸರಿ. ನನಗೆ ಸಿಕ್ಕಿದ ಕಾಲಮಿತಿಯಲ್ಲಿ, ಸಾಧ್ಯವಿರುವಷ್ಟನ್ನು ಈ ಪುಸ್ತಕದ ಚೌಕಟ್ಟಿಗೆ ತಂದಿದ್ದೇನೆ. ದಾಖಲಾಗಬೇಕಾದ್ದು ತುಂಬಾ ಇದೆ. ದೇಸಿ ಬೀಜಗಳ ಕುರಿತ ಜ್ಞಾನದ ದಾಖಲಾತಿ ಇಲ್ಲಿ ಸಮರ್ಪಕವಾಗಿರದಿದ್ದರೆ ಅದು ಈ ಲೇಖಕನ ಮಿತಿಯೇ ಹೊರತು, ಕನ್ನಡನಾಡಿನ ಬೀಜ ವೈವಿಧ್ಯ ಮತ್ತು ಜ್ಞಾನದ ಕೊರತೆಯೆಂದು ಓದುಗರು ತಿಳಿಯಬಾರದೆಂದು ಬಿನ್ನವಿಸುತ್ತೇನೆ.

ಬೀಜ ಸಂರಕ್ಷಣಾಕ್ಷೇತ್ರದಲ್ಲಿ ಹೆಜ್ಜೆಗುರುತು ಮೂಡಿಸಿರುವ ಗ್ರೀನ್ ಪ್ರತಿಷ್ಠಾನ ದೇಸಿ ಬೀಜಗಳ ಕುರಿತು ಜನರೊಟ್ಟಿಗೆ ಕೆಲಸಮಾಡಲು ಅವಕಾಶ ಕಲ್ಪಿಸಿತು. ಒಂದು ದಶಕದ ಬೀಜ ಸಂರಕ್ಷಕರೊಂದಿಗಿನ ಒಡನಾಟ ಈ ಪುಸ್ತಕಕ್ಕೆ ಹೂರಣ ತುಂಬಿದೆ. ಇದಕ್ಕಾಗಿ ನಾನು ಗ್ರೀನ್ ಪ್ರತಿಷ್ಠಾನ ಮತ್ತು ಅದರ ನಿರ್ದೇಶಕರಾದ ಡಾ. ವನಜಾ ರಾಮಪ್ರಸಾದ್‌ರವರಿಗೆ ಅಭಾರಿಯಾಗಿದ್ದೇನೆ.

ಬೀಜ ಸಂರಕ್ಷಣೆಯ ಬಗ್ಗೆ ಒಲವು ತೋರಿ, ನನ್ನ ಬರಹಗಳನ್ನು ತಿದ್ದಿತೀಡಿ, ಸಲಹೆಕೊಟ್ಟು ಬೆಳಕಿಗೆತಂದ ಗುರುಗಳಾದ ಶ್ರೀನಾಗೇಶ್ ಹೆಗಡೆಯವರಿಗೆ ಕೃತಜ್ಞತೆಗಳು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬೆಳಕು ಕಂಡ 'ವ್ಯವಸಾಯ ಬೋಧಿನಿ' ಎಂಬ ಪುಸ್ತಕ ದೇಸಿ ಕೃಷಿ ಜ್ಞಾನವನ್ನು ಅಚ್ಚುಕಟ್ಟಾಗಿ ದಾಖಲಿಸಿದೆ. ಪುಸ್ತಕ ರಚನೆಗೆ ವ್ಯವಸಾಯ ಬೋಧಿನಿಯ ವಿವರಗಳನ್ನು ಬಹಳಷ್ಟು ಬಳಸಿಕೊಂಡಿದ್ದೇನೆ. ಆ ಪುಸ್ತಕದ ಅಜ್ಞಾತ ಲೇಖಕರಿಗೆ (ಲೇಖಕರ ಹೆಸರು ಇರುವ ಪುಟ ಹರಿದು ಹೋಗಿದೆ) ಅಭಾರಿಯಾಗಿದ್ದೇನೆ.

ಅರ್ಥಪೂರ್ಣ ಚಿತ್ರಗಳ ಮೂಲಕ ಪುಸ್ತಕವನ್ನು ಚೆಂದನಾಗಿಸಿದ ಕಲಾವಿದ ಸೋಮವರದ ಮುಖಪುಟ ವಿನ್ಯಾಸ ಮಾಡಿದ ಎಂ.ಎಸ್.ಮೂರ್ತಿ ಅವರಿಗೆ ಕೃತಜ್ಞತೆಗಳು.

ಕೆಲಸದ ಒತ್ತಡದಿಂದ ಕೈಬಿಟ್ಟಿದ್ದ ಈ ಯೋಜನೆಯನ್ನು ಪೂರ್ಣಗೊಳಿಸಲು ಸಹಕರಿಸಿದ ಸಂಗಾತಿ ಸೀಮಾ ಮತ್ತು ಮಗ ಋತುಪರ್ಣನನ್ನು ಪ್ರೀತಿಯಿಂದ ನೆನೆಯುತ್ತೇನೆ.


ಪುಸ್ತಕ ರಚನೆಯ ಸಂದರ್ಭದಲ್ಲಿ ಸಹಕರಿಸಿದ ಗೆಳೆಯರಾದ ಆನಂದ ತೀರ್ಥ ಪ್ಯಾಟಿ, ಮಣಿಕಾಂತ್ ಎ.ಆರ್., ಗಾಣದಾಳು ಶ್ರೀಕಂಠ, ಮಲ್ಲಿಕಾರ್ಜುನ ಹೊಸಪಾಳ್ಯ, ಸಿಂಧು ಮರಳಿಗೆ, ಕೆ. ರವಿಗೆ ಕೃತಜ್ಞತೆಗಳು.

ನನ್ನೊಳಗೆ ಬೀಜದ ಕನಸನ್ನು ಹುಟ್ಟುಹಾಕಿದ ಅವ್ವ ಲಕ್ಷ್ಮೀದೇವಮ್ಮ ಮತ್ತು ಅದಕ್ಕೆ ನೀರೆರೆದು ಪೋಷಿಸಿದ ಅಣ್ಣ ಶ್ರೀನಿವಾಸಕುಮಾರ್‌ಗೆ ನಾನು ಯಾವತ್ತೂ ಚಿರಋಣಿ.

ಮಾಹಿತಿ ನೆರವು ನೀಡಿದ ಸಾವಯವ ಕೃಷಿಕರು, ಬೀಜ ಸಂರಕ್ಷಕರು, ಬೀಜ ಮಾತೆಯರು, ಸಂಘಸಂಸ್ಥೆಗಳ ಗೆಳೆಯರಿಗೆ ಕೃತಜ್ಞನಾಗಿರುವೆ.

ಮಾರ್ಚ್ ೨೦೦೮ —ಜಿ. ಕೃಷ್ಣ ಪ್ರಸಾದ್

ಪರಿವಿಡಿ



೧. ಬೀಜಗಳ ಮಹತ್ವ

ಹರಗೋಣ ಬಾ ಹೊಲ ಹದವಾಗಿ
ಬಿದ್ದೈತೆ ಹ್ಯಾಗೋ ಕಾಲ್ ಕಸವಾಗಿ
ಬಿತ್ತಿದರೆ ಕಾಳು ಹನಿ-ಹನಿಯಾಗಿ
ಬರ್ತಾಳೆ ತಾಯಿ ತೆನೆ-ತೆನೆಯಾಗಿ
ನಂಬಿಗೀಲೆ ಬಿತ್ತೋಣ ನಮ್ಮ ಕಾಳು
ನಂಬಿಗೀಲೆ ತುಂಬ್ತಾದೆ ನಮ್ಮ ಬಾಳು.

ರೈತ ಮತ್ತು ಬೀಜದ ನಡುವಿನದ್ದು ಅವಿನಾಭಾವ ಸಂಬಂಧ. ಭಾರತೀಯ ಸಂಪ್ರದಾಯದಲ್ಲಿ ಬೀಜವನ್ನು ತಾಯಿಗೆ ಹೋಲಿಸಿದ್ದಾರೆ. ಆದ್ದರಿಂದ ಬೀಜಕ್ಕೆ ಸಂಬಂಧಿಸಿದ ಹಲವಾರು ವಿಧಿ-ವಿಶೇಷಗಳು ರೈತರ ಬದುಕಿನಲ್ಲಿ ಇಂದೂ ಕೂಡ ಜೀವಂತವಾಗಿವೆ. ಬೀಜ ಸಂಬಂಧಿ ಹಾಡು-ಆಚರಣೆ, ಸಂಸ್ಕೃತಿಗಳು ನಮಗೆ ತಲೆ-ತಲಾಂತರಗಳಿಂದ ಬಳುವಳಿಯಾಗಿ ಬಂದಿರುವಂಥವು.

ತಲಾಂತರದಿಂದ ರೈತರು ನೂರೆಂಟು ಬಗೆಯ ತಳಿಗಳನ್ನು ಬೆಳೆಸಿ, ಅಭಿವೃದ್ಧಿಪಡಿಸಿ, ಪೀಳಿಗೆಯಿಂದ ಪೀಳಿಗೆಗೆ ಬೀಜ ವೈವಿಧ್ಯವನ್ನು ಸಾಗಿಸಿ ತರುತ್ತಿದ್ದಾರೆ. ಭತ್ತ, ರಾಗಿ, ಜೋಳ, ಸಾವೆ, ಗೋಧಿ, ಬದನೆ, ಸೋರೆ, ಮಾವು, ಹಲಸು ಹೀಗೆ ಪ್ರತಿ ಬೆಳೆಯಲ್ಲೂ ಸಾವಿರಾರು ಸ್ಥಳೀಯ ತಳಿಗಳು ಸೃಷ್ಟಿಯಾಗಿವೆ. ಆಯಾ ಪ್ರದೇಶದ ಮಣ್ಣು, ವಾತಾವರಣ ಆಹಾರ ಪದ್ಧತಿಗಳಿಗನುಗುಣವಾಗಿ ಹೊಂದಿಕೊಂಡು ಬೆಳೆಯುವ ತಳಿ ವೈವಿಧ್ಯ ನಮ್ಮಲ್ಲಿತ್ತು. ಸಾಲುಬೆಳೆ,

ಮಿಶ್ರಬೆಳೆ ಪದ್ಧತಿಗಳು ಈ ವೈವಿಧ್ಯವನ್ನು ಜೀವಂತವಾಗಿಟ್ಟಿದ್ದವು. ಪ್ರತಿ ರೈತರ ಹೊಲವೂ ಬೀಜವೈವಿಧ್ಯದ ಭಂಡಾರವಾಗಿತ್ತು.

ಹೆಚ್ಚು ನೀರು, ಗೊಬ್ಬರ, ಕಾಳಜಿ ಬೇಡದ ಸ್ಥಳೀಯ ತಳಿಗಳು ತಾತ-ಮುತ್ತಾತರ ಕಾಲದಿಂದ ನಮ್ಮ ಹೊಲಗದ್ದೆಗಳಿಗೆ ಹೊಂದಿಕೊಂಡಿವೆ. ರುಚಿ, ರೋಗನಿರೋಧಕತೆಗಳಲ್ಲಿ, ಇವನ್ನು ಮೀರಿಸಲಾಗದು. ಹಕ್ಕಿ ತಿನ್ನದ ಮುಳ್ಳುಸಜ್ಜೆ, ಹಂದಿ ಮುಟ್ಟದ ದೊಡ್ಡರಾಗಿ, ಇಲಿ ಕಡಿಯದ ಹಾಲುಬ್ಬಲು, ಕಳ್ಳಕಾಕರ ಭಯವಿಲ್ಲದ ಮುಳ್ಳುಬದನೆಯಂತಹ ಅಪರೂಪದ ತಳಿಗಳು ನಮ್ಮ ನೆಲದಲ್ಲಿ ರೂಪುಗೊಂಡ ಅಪೂರ್ವ ರತ್ನಗಳು. ಈಗ ಅಧಿಕ ಇಳುವರಿಯ ಆಸೆಗೆ ಬಿದ್ದು ನಮ್ಮ ರೈತರು ಒಂದೋ ಎರಡೋ ತಳಿಗಳ ಬೆನ್ನ ಬಿದ್ದಿದ್ದಾರೆ. ನಾಳೆ ನಾವು ಕಂಡರಿಯದ ರೋಗ, ಬರಗಾಲ, ನೆರೆ ಬಂದರೆ ರೈತರ ಗತಿ ಕೇಳುವವರಿರುವುದಿಲ್ಲ. ಹೀಗೆ ಮಾಯಾಜಿಂಕೆಯ ಬೆನ್ನೇರಿ ಹೋಗಿ, ನಿರಾಶೆಯ ಕೂಪಕ್ಕೆ ಬೀಳುವ ಬದಲು, ನಮ್ಮದೇ ಊರಿನ, ನಮ್ಮದೇ ಕೃಷಿ ಪದ್ಧತಿಯಲ್ಲಿ ನಾಡು ತಳಿಗಳನ್ನು ಬೆಳೆಸಬೇಕು. ಆಗ ನಮ್ಮ ರೈತ ಸಮುದಾಯ ಯಾವ ಬೀಜಕಂಪನಿ, ಅಂತಾರಾಷ್ಟ್ರೀಯ ಒಪ್ಪಂದ, ತಂತ್ರಜ್ಞಾನಕ್ಕೂ ಹೆದರುವ ಅಗತ್ಯ ಇರುವುದಿಲ್ಲ. ನಮ್ಮ ಹೊಲಗದ್ದೆಗಳು ಬೀಜ ಸಂಪತ್ತಿನ ಭಂಡಾರವಾಗಬೇಕು. ಅಂಥ ದಿನಗಳು ಬೇಗ ಬರಲೆಂದು ಹಾರೈಸುತ್ತಾ ಬೀಜಲೋಕದ ಕದ ತೆರೆಯುತ್ತಿದ್ದೇವೆ...

■



"ನಾವು ಕರಿಮುಂಡುಗ ಭತ್ತ, ಬಿಳಿಮುಂಡುಗ ರಾಗಿ ಬೆಳೆಯುತ್ತಿದ್ದವರು. ಆದನ್ನು ಅಚ್ಚುಕಟ್ಟಾಗಿ ಬೆಳೆಸಿ, ಬೇಯಿಸಿ, ರೊಟ್ಟಿ ಮತ್ತು ಊಟಕ್ಕಾಗಿ ಉಪಯೋಗಿಸುತ್ತಿದ್ದೆವು. ಏನೂ ವ್ಯಾಧಿ ಇರುತ್ತಿರಲಿಲ್ಲ. ಈಗ ಆ ಭತ್ತ, ಈ ಭತ್ತ, ಸಣ್ಣ ಭತ್ತ ಬೆಳೆದು ಕಾಯಿಲೆ ತಂದುಕೊಂಡರು. ನಾವು ಬದನೆಕಾಯಿ ಬೆಳೆಯುತ್ತೇವೆ. ಸೋರೆಕಾಯಿ, ಕುಂಬಳಕಾಯಿ, ಸೌತೆಕಾಯಿ, ಹುರುಳಿಕಾಯಿ, ಗೋರಿಕಾಯಿಯಂಥ ಎಲ್ಲಾ ತರಕಾರಿಗಳನ್ನು ಬೆಳೆಯುತ್ತೇವೆ. ಅವೆಲ್ಲಾ ನಾಟಿ ತಳಿಗಳು. ನಾವು ಬೆಳೆಯುವ ತರಕಾರಿಗೆ ಈಗಲೂ ಯಾವ ರೋಗಾನೂ ಇಲ್ಲ, ಹುಳಾನೂ ಇಲ್ಲ. ಗುಂಡುಕಲ್ಲು ಇದ್ದಂಗೆ ಇದೀವಿ."

–ಬೀಜ ಮಾತೆ ಪುಟ್ಟೀರಮ್ಮ



೨. ಕರ್ನಾಟಕದ ತಳಿ ವೈವಿಧ್ಯ

"ನಮ್ಮ ಬೀಜ ನಮಗ ಕಾಯಶ್ ಆಗ್ತದ, ಬೇಷ್ ಬೆಳೆತವ, ಅಂಗಡಿ ಬೀಜ ಒಂದು ವರ್ಷ ಬೆಳಿದರಾ, ಒಂದು ವರ್ಷ ಬೆಳೆಯೂದಿಲ್ಲ, ಡೂಪ್ಲಿಕೇಟ್ ಆಗ್ತಾವ"

–ಮಲ್ಲಮ್ಮ, ಜೂಲಕುಂಟೆ (ದೇಸೀ ಬೀಜದ ಮಹತ್ವದ ಬಗ್ಗೆ ಹೇಳುತ್ತಾ)

ಹೆಚ್ಚು ಜನರ ಅನ್ನದ ಬಟ್ಟಲು ತುಂಬುವ ಭತ್ತ ಮೂಲತಃ ಹುಲ್ಲಿನ ಕುಟುಂಬಕ್ಕೆ ಸೇರಿರುವ ಸಸ್ಯ. ಬರಪೀಡಿತ ಪ್ರದೇಶಗಳಿಂದ ಹಿಡಿದು ಸದಾ ಮಳೆಸುರಿವ ಪ್ರದೇಶದಲ್ಲಿ ಬೆಳೆಯುವ ಸಾಮರ್ಥ್ಯವಿರುವ ಭತ್ತದಲ್ಲಿ ಸಾವಿರಾರು ಜಾತಿಗಳಿವೆ. ಹಸಿರುಕ್ರಾಂತಿಗೆ ಮೊದಲು ಭಾರತದ ರೈತರು ೧ ಲಕ್ಷಕ್ಕೂ ಅಧಿಕ ಭತ್ತದ ತಳಿಗಳನ್ನು ಬೆಳೆಸುತ್ತಿದ್ದರೆಂದು ಅಂದಾಜಿಸಲಾಗಿದೆ. ಅಧಿಕ ಇಳುವರಿ ತಳಿಗಳ ಆಗಮನದಿಂದ ಈಗ ಭತ್ತದ ವೈವಿಧ್ಯವೇ ನಾಶವಾಗಿದೆ.

ಎಂಥೆಂಥಾ ತಳಿಗಳಿದ್ದವು?

ಕ್ರಿ. ಶ. ೧೮೦೦ ರಲ್ಲಿ ಕರ್ನಾಟಕಕ್ಕೆ ಭೇಟಿಕೊಟ್ಟಿದ್ದ ಫ್ರಾನ್ಸಿಸ್ ಬುಕಾನನ್ ಮೈಸೂರಿನ ಸುತ್ತ–ಮುತ್ತ ಬೆಳೆಯುತ್ತಿದ್ದ ಭತ್ತದ ತಳಿಗಳಾದ ದೊಡ್ಡ ಭತ್ತ, ಕೆಂಬೂತಿ, ಯಾಲಕ್ಕಿ ರಾಜ, ಬಿಳಿ ಸಣ್ಣ ಭತ್ತ, ಪುಟ್ಟ ಭತ್ತಗಳನ್ನು ಹೆಸರಿಸಿದ್ದಾನೆ. ಅಂದಿನ ದಿನಗಳಲ್ಲಿ ಮಂಗಳೂರಿನಿಂದ ಮಸ್ಕತ್‌ಗೆ ರಫ್ತಾಗುತ್ತಿದ್ದ ಅಕ್ಕಿಗೆ 'ಮಸ್ಕತಿ' ಎಂಬ ಹೆಸರಿತ್ತು.

೧೯೫೦ರ ಪೂರ್ವದಲ್ಲಿ ಉತ್ತರ ಕನ್ನಡ ಜಿಲ್ಲೆ, ಘಟ್ಟದ ಮೇಲೆ ಹಾಗೂ ಕೆಳಭಾಗ; ಅಂಕೋಲಾ, ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳಗಳಲ್ಲಿ ಪಾರಂಪರಿಕವಾಗಿ ಭತ್ತದ

ಬೇಸಾಯ ನಡೆಯುತ್ತಲಿತ್ತು. ಪೂರ್ತಿಯಾಗಿ ಸಾವಯವ ಕೃಷಿಗೆ ಒತ್ತು ಸಹ ಇತ್ತು. ಭತ್ತದ ಬೀಜಗಳು ಪಾರಂಪರಿಕವಾಗಿ ಬೆಳೆಸುತ್ತ ಬಂದವುಗಳೇ ಆಗಿದ್ದವು. ಅವುಗಳಲ್ಲಿ ಕರಿಕಗ್ಗ, ಬಿಳೀಕಗ್ಗ, ಪೊಟ್ಟಹಳಗ, ಜೆಡ್ಡಹಳಗ, ಚಿಟಿಗ, ಆರ್ಯ, ಮಸ್ಕತ್, ಗೌರಿ, ಕುಂಕುಮ, ಸಣ್ಣ ಭತ್ತ ಪ್ರಚಲಿತದಲ್ಲಿದ್ದವು.

ಘಟ್ಟದ ಭಾಗದಲ್ಲಿ ಪೊಟ್ಟ ಹಳ್ಗಾ, ಜಡ್ಡ ಹಳಗಾ, ದಬ್ಬಣಸಾಲ, ಹೊನ್ನೆಕಟ್ಟು, ರತ್ನ ಚೂಡಾ, ಸಣ್ಣಭತ್ತ, ಮುಂತಾದ ತಳಿಗಳಿದ್ದವು. ಇವೆಲ್ಲವುಗಳಿಗೂ ರೋಗ ಕಡಿಮೆ. ಇನ್ನು ಗುಡ್ಡೆಭತ್ತ ನೀರು ಕಡಿಮೆ ಆಗುವ ಇಳಿಜಾರಾದ ಭಾಗದಲ್ಲಿ ಬೆಳೆಯಲಾಗುತ್ತಿತ್ತು. ಇದು ನಾಟಿಗೂ ಬಿತ್ತನೆಗೂ ಯೋಗ್ಯವಿರುತ್ತಿತ್ತು

ಭತ್ತ ಬಿತ್ತುವ ಕ್ರಮಗಳು

ಮೂರು ವಿಧವಾದ ಬಿತ್ತುವ ಕ್ರಮಗಳಿವೆ. ಮೊದಲನೆಯ ವಿಧಾನದಲ್ಲಿ ಖುಷ್ಕೀ ನೆಲದ ಮೇಲೆ ಬಿತ್ತುವುದು. ಇದಕ್ಕೆ 'ಬರಬತ್ತ' ಅಥವಾ 'ಪುಣಜಿ' ಎಂದು ಹೆಸರು. ಎರಡನೆಯದರಲ್ಲಿ ಭತ್ತವನ್ನು ನೆನೆಸಿ ಮೊಳಕೆ ಬರುವಂತೆ ಮೂಟೆ ಕಟ್ಟಿಟ್ಟು ಕೆಸರುಮಾಡಿ ಹದಗೊಳಿಸಿದ ಭೂಮಿಯಲ್ಲಿ ಬಿತ್ತುವುದು. ಇದಕ್ಕೆ 'ಮೊಳೆಭತ್ತ'ವೆಂದು ಹೆಸರು. ಮೂರನೆ ವಿಧದಲ್ಲಿ ಭತ್ತವನ್ನು ಒಟ್ಟುಹೊಯ್ದು, ಸಸಿಗಳನ್ನು ಕಿತ್ತು ನಾಟಿ ಹಾಕುವುದು. ಇದಕ್ಕೆ 'ನಾಟಿ ಭತ್ತ'ವೆಂದು ಹೆಸರು

ಒಣ ಭೂಮಿ (ಖುಷ್ಕಿ) ಭತ್ತದ ತಳಿಗಳು

ಮಳೆ ಆಶ್ರಿತ ಒಣಭೂಮಿಯ ತಗ್ಗು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುವ ಸಂಭವ ಜಾಸ್ತಿ. ಮಳೆ ಬಂದ ಒಂದೆರಡು ದಿನ ಜಲಾವೃತ ಉಳಿದಂತೆ ಸದಾ ತೇವದಿಂದ ಕೂಡಿರುವ ಈ ಹೊಲಗಳಲ್ಲಿ ರಾಗಿ, ಜೋಳ ಯಾವುದೂ ಸರಿಯಾಗಿ ಬೆಳೆಯದು. ಇಂಥ ಹೊಲಗಳಿಗೆ ಹೊಂದಿಕೊಂಡು ಬೆಳೆಯುವ ಒಣಭೂಮಿಯ ಭತ್ತ ಬಹಳ ಜನರಿಗೆ ಅಪರಿಚಿತ. ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಣಭೂಮಿ ಭತ್ತದ ತಳಿಗಳ ಕೃಷಿ ಇವತ್ತಿಗೂ ನಡೆಯುತ್ತಿದೆ. ದಪ್ಪಕಾಳಿನ, ಕೆಂಪು ಅಕ್ಕಿಯ ಒಣಭೂಮಿ ತಳಿಗಳು ಎಕರೆಗೆ ೧೦ ರಿಂದ ೧೨ ಮೂಟೆ ಇಳುವರಿ ನೀಡುತ್ತವೆ. ಜೂನ್ ಕೊನೆಯ ವಾರ (ಆದ್ರಿಮಳೆ)ದಲ್ಲಿ ಬಿತ್ತನೆ. ನವೆಂಬರ್‌ನಲ್ಲಿ ಕುಯಿಲು.

ಕರಿಮುಂಡಗನ ಭತ್ತ: ಚಿತ್ರದುರ್ಗ ಜಿಲ್ಲೆಯ,ನಾಲ್ಕೂವರೆ ತಿಂಗಳಿನ ತಳಿ. ದಪ್ಪನಾದ ಕಪ್ಪು ಕಾಳಿನ ತುದಿಯಲ್ಲಿ ಬಿಳಿ ಪಟ್ಟೆಯಿರುತ್ತದೆ. ಗಟ್ಟಿಯಾದ ಕಾಳು. ಕೆಂಪನೆಯ ಅಕ್ಕಿ. ಬರನಿರೋಧಕ ಗುಣವಿದೆ. ಸದಾ ತೇವ ಇರುವ ಜಾಗಕ್ಕೆ ಸೂಕ್ತ. ಹೆಚ್ಚು ನೀರು ನಿಲ್ಲುವ ಜಾಗಕ್ಕೆ ಹೊಂದಿಕೊಳ್ಳುವುದಿಲ್ಲ. ಬೇಗ ಕುಯಿಲಿಗೆ ಬರುವ ಈ ತಳಿಗೆ ಹಕ್ಕಿ, ಇಲಿಗಳು ಮುಗಿಬೀಳುವುದುಂಟು. ಎಕರೆಗೆ ೧೨ ರಿಂದ ೧೫ ಚೀಲ ಇಳುವರಿ ಬರುತ್ತದೆ. ಒಳ್ಳೆಯ ಹುಲ್ಲು. ಕುಯಿಲು ತಡವಾದರೆ ಕಾಳುಗಳು ಉದುರುತ್ತವೆ. ಹಣ್ಣಾಗಿದ್ದಾಗಲೇ ಕುಯಿಲು ಮಾಡುವುದು ಸೂಕ್ತ.

ಬಿಳಿ ಮುರುಡುಗನ ಭತ್ತ: ಹೊಳಲ್ಕೆರೆ ಪ್ರದೇಶದ, ಐದು ತಿಂಗಳ ಅವಧಿಯ ತಳಿ. ಒಣಹುಲ್ಲಿನ ಬಣ್ಣದ ದಪ್ಪ ಕಾಳಿನ ತಳಿ. ನೀರಾವರಿ ಗದ್ದೆಗಳಲ್ಲಿ ಬೀಜಗಳನ್ನು ಎರಚಿ ಕೂಡ ಬೆಳೆಯಬಹುದು.

ಪುಟ್ಟಭತ್ತ: ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ಸುತ್ತಮುತ್ತಲಿನ ಸೀಮೆಯಲ್ಲಿ ತುಂಬ ಜನಪ್ರಿಯವಾಗಿರುವ ತಳಿ. ನಾಲ್ಕೂವರೆಯಿಂದ ಐದು ತಿಂಗಳ ತಳಿ. ಮಳೆ ಹದವಾಗಿ ಆಗುತ್ತಿದ್ದರೆ ಚೆನ್ನಾಗಿ ಬೆಳೆಯುತ್ತದೆ. ಮಳೆ ಕೈಕೊಟ್ಟರೆ ತಡೆಯಲಾರದು. ದಪ್ಪಕಾಳು ಸಾಧಾರಣ ಎತ್ತರದ ಹುಲ್ಲು ಈ ತಳಿಯ ವೈಶಿಷ್ಟ್ಯ.

ಗೂಡು ನೆಲ್ಲು: ನಾಲ್ಕೂವರೆ ತಿಂಗಳಿಗೆ ಕುಯಿಲಾಗುವ ತಳಿ. ಚಿಕ್ಕದಾದ, ಗುಂಡನೆಯ ಕಾಳುಗಳು. ಹೆಚ್ಚು ಆರೈಕೆ ಕೇಳದೆ ಬೆಳೆಯುತ್ತದೆ. ಕೆಂಪಕ್ಕಿಯ ಅನ್ನ ಬಹುರುಚಿ. ಸಾಧಾರಣ ಇಳುವರಿ ನೀಡುತ್ತದೆ.

ಆನೆಕೊಂಬಿನ ಭತ್ತ: ಆನೇಕಲ್, ಕನಕಪುರ ಪ್ರದೇಶದ ಮೂರು ತಿಂಗಳ ಅಲ್ಪಾವಧಿ ತಳಿ. ಹೆಚ್ಚು ತೆಂಡೆ ಹೊಡೆಯುತ್ತದೆ. ಭತ್ತ ಮತ್ತು ಅಕ್ಕಿ ಎರಡೂ ಬಿಳಿ ಬಣ್ಣ. ಸಿಪ್ಪೆ ತೆಳುವು. ಗಿಡ್ಡ ತಳಿ. ಹೆಚ್ಚು ಮಳೆ ಕೇಳದು. ಕೀಟ ರೋಗ-ಬಾಧೆ ಇರುವುದಿಲ್ಲ. ಕುಯಿಲು ತಡವಾದರೆ ಭತ್ತ ಉದುರುತ್ತದೆ. ಭತ್ತದ ತುದಿಯಲ್ಲಿ ಅರ್ಧ ಅಂಗುಲ ಮುಳ್ಳು ಇರುತ್ತದೆ. ಆನೆಕೊಂಬಿನ ಭತ್ತ ಎಂದು ಹೆಸರು ಬರಲು ಇದೂ ಒಂದು ಕಾರಣವಿರಬಹುದು. ಅವಲಕ್ಕಿ ಮತ್ತು ಪುರಿ (ಮಂಡಕ್ಕಿ) ಮಾಡಲು ಹೇಳಿ ಮಾಡಿಸಿದ್ದು.

ಒಂದೂವರೆ ಭತ್ತ: ಐದು ತಿಂಗಳ ದೀರ್ಘಾವಧಿ ತಳಿ. ಹೆಚ್ಚು ಎತ್ತರ ಬೆಳೆಯುತ್ತದೆ. ಆದರೆ ಯಥೇಚ್ಛವಾಗಿ ತೆಂಡೆ ಹೊಡೆಯುವುದರಿಂದ ಬೀಳುವುದಿಲ್ಲ. ಉದ್ದತೆನೆ, ಒಣಭೂಮಿ ತಳಿಯಾದರೂ ಉತ್ತಮ ಇಳುವರಿ ಕೊಡುತ್ತದೆ. ಭತ್ತದ ಸಿಪ್ಪೆ ತೆಳು. ಅನ್ನ ಬಿಸಿಯಿದ್ದಾಗ ತುಂಬಾ ರುಚಿ. ಕೀಟ-ರೋಗಬಾಧೆ ಕಡಿಮೆ. ಬೆಂಗಳೂರು ಗ್ರಾಮಾಂತರ ಪ್ರದೇಶದ ತಳಿ.

ಕೆಂಪು ಮುಂಡುಗ: ಐದು ತಿಂಗಳಿಗೆ ಕುಯಿಲಿಗೆ ಬರುವ ಎತ್ತರದ ತಳಿ. ಕಾಂಡ ತಿಳಿಗೆಂಪು ಮತ್ತು ದಪ್ಪ. ನೀರು ಸ್ವಲ್ಪ ಜಾಸ್ತಿ ಬೇಕು. ಉತ್ತಮ ಕಳೆ ನಿಯಂತ್ರಕ. ಹೆಸರೇ ಹೇಳುವಂತೆ ಭತ್ತ ಕೆಂಪು. ಅಕ್ಕಿಯೂ ಕೆಂಪು. ರೋಗ, ಕೀಟಬಾಧೆ ಇಲ್ಲ. ಭತ್ತದ ಮೇಲಿನ ಸಿಪ್ಪೆ ತುಸು ದಪ್ಪ. ಬೆಂಗಳೂರು ಗ್ರಾಮಾಂತರದಲ್ಲಿ ಈ ತಳಿ ಜನಪ್ರಿಯ.

ಮುಂಡುಗ: ಐದು ತಿಂಗಳಿಗೆ ಕೊಯ್ಲಿಗೆ ಬರುವ ಬರನಿರೋಧಕ ತಳಿ. ಎತ್ತರವಾಗಿ ಬೆಳೆದರೂ ಗಾಳಿ, ಮಳೆಯನ್ನು ತಡೆಯುವ ಶಕ್ತಿ ಹೊಂದಿದೆ. ಕಾಳು ಮತ್ತು ಹುಲ್ಲಿನ ಇಳುವರಿ ಉತ್ತಮ. ಕೀಟ ಮತ್ತು ರೋಗ ನಿರೋಧಕ ತಳಿ. ಕಳೆಯನ್ನೂ ಮೀರಿ ಬೆಳೆಯುವುದು ಮುಂಡುಗದ ವಿಶೇಷ.

ದೊಡ್ಡಿ ಭತ್ತ: ತುಮಕೂರು, ತಿಪಟೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಬೆಳೆಯುವ ತಳಿ. ಬಲಿಷ್ಠ ಕಾಂಡ ಹೊಂದಿರುತ್ತದೆ. ನಾಲ್ಕೂವರೆ

ತಿಂಗಳಿಗೆ ಕುಯಿಲಾಗುತ್ತದೆ. ಕೀಟ, ರೋಗಗಳ ಭಯವಿಲ್ಲ. ಉತ್ತಮ ಹುಲ್ಲು ಮತ್ತು ಕಾಳಿನ ಇಳುವರಿ ಇದೆ. ಇದರ ಕೆಂಪಕ್ಕಿ ಅನ್ನ ತುಂಬಾ ಸ್ವಾದಿಷ್ಟ.

ಕರಿ ನೆಲ್ಲು: ಮೂರೂವರೆಯಿಂದ ನಾಲ್ಕು ತಿಂಗಳ ಅವಧಿಯ ಅಲ್ಪಾವಧಿ ತಳಿ. ಗಾಳಿಯ ಹೊಡೆತ ತಡೆಯಲಾರದು. ಕಾಳುಗಳು ದಪ್ಪಗೆ ಮಾಸಲು ಕಪ್ಪು ಬಣ್ಣಕ್ಕಿರುತ್ತವೆ. ಕೊಯಿಲು ವಿಳಂಬವಾದರೆ ನೆಲಕ್ಕೆ ಬೀಳುತ್ತದೆ. ಕಾಳು ಮತ್ತು ಹುಲ್ಲಿನ ಇಳುವರಿ ಸಾಧಾರಣ.

ಸಣ್ಣ ಮುಂಡುಗ: ಮೂರೂವರೆ ತಿಂಗಳ ತಳಿ. ತಗ್ಗು ಪ್ರದೇಶಕ್ಕೆ ಸೂಕ್ತವಾದುದು. ಸಾಧಾರಣ ಎತ್ತರ. ಉತ್ತಮ ಇಳುವರಿಗೆ ಹೆಸರುವಾಸಿ. ಹೆಚ್ಚು ಸಾರವಿರುವ ಭೂಮಿಗೆ ಹಾಕಿದರೆ ಬೀಳುವ ಸಂಭವ ಇಲ್ಲ. ಕೊಟ್ಟಿಗೆ ಗೊಬ್ಬರವೂ ಹೆಚ್ಚು ಬೇಕಾಗಿಲ್ಲ. ಮಧ್ಯಮ ಗಾತ್ರದ ಅಕ್ಕಿ ಸಣ್ಣಮುಂಡುಗ ತಳಿಯ ವೈಶಿಷ್ಟ್ಯ. ಕನಕಪುರದ ಕಾಡುಹಳ್ಳಿಗಳಲ್ಲಿ ಕಂಡುಬರುತ್ತದೆ.


ಸಣ್ಣ ಮುಂಡುಗ

ಬಿಳಿ ನೆಲ್ಲು : ಐದು ತಿಂಗಳ ದೀರ್ಘಾವಧಿ ತಳಿ. ಮೊಣಕಾಲು ಉದ್ದಕ್ಕೆ ಬೆಳೆದು ೪-೫ ತೆಂಡೆಗಳನ್ನು ಹೊಂದಿರುತ್ತದೆ. ಉದ್ದನೆಯ ತೆನೆ. ಸಿಪ್ಪೆ ಬೆಳ್ಳಗಿದ್ದು ಕಾಳು ಕೆಂಪಾಗಿರುತ್ತದೆ. ಉಪ್ಪು ಹಾಕಿ ಅನ್ನ ಮಾಡಿದರೆ ಸಾಂಬಾರಿಲ್ಲದೆ ತಿನ್ನಬಹುದು. ಹೊಲದ ನೀರು ಹರಿದು ಬಂದು ನಿಲ್ಲುವ ಜಾಗದಲ್ಲಿ ಪುಣಜಿ ಭತ್ತದಂತೆ ಚೆಲ್ಲಿ ಮುಂಗಾರಿನಲ್ಲಿ ಬೆಳೆಯಬಹುದು. ಮರಳು ಮಿಶ್ರಿತ ಕೆಂಪುಮಣ್ಣಿಗೆ ಹೊಂದಿಕೊಳ್ಳುತ್ತದೆ. ಉತ್ತಮ ಕಾಳು ಮತ್ತು ಹುಲ್ಲಿನ ಇಳುವರಿ ನೀಡುವ ತಳಿ.

ದೊಡ್ಡಭೈರ ನೆಲ್ಲು: ಐದು ತಿಂಗಳ ದೀರ್ಘಾವಧಿಯ, ನೀರಾವರಿ ಮತ್ತು ಒಣಭೂಮಿ ಎರಡಕ್ಕೂ ಸೂಕ್ತವಾದ ತಳಿ. ಕೆರೆಯಲ್ಲಿ ನೀರು ಕಡಿಮೆ ಇದ್ದಾಗ ನೀರಿನ ಅಭಾವವನ್ನು ಎದುರಿಸಿ ಉಳಿಯುವ ಗುಣ ಹೊಂದಿದೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ. ಕೀಟ ಮತ್ತು ರೋಗಬಾಧೆ ಇಲ್ಲವೇ ಇಲ್ಲ. ಇದರ ಕೆಂಪು ಅಕ್ಕಿ ಅನ್ನ ರೈತರಿಗೆ ಹೆಚ್ಚು ಪ್ರಿಯ. ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಭತ್ತ ಈಗಲೂ ಜನಪ್ರಿಯ. 'ಭೈರನೆಲ್ಲು' ಎಂದು ಕೂಡ ಕರೆಯುತ್ತಾರೆ. ಕಾಳು ಮತ್ತು ಹುಲ್ಲಿನ ಇಳುವರಿ ಉತ್ತಮ. ಸಾವಯವ ಕೃಷಿಗೆ ಒಗ್ಗುವ ಅಪರೂಪದ ತಳಿ.

ಮರನೆಲ್ಲು: ಐದು ತಿಂಗಳ ಪುಣಜಿ ಭತ್ತದ ತಳಿ. ತಮಿಳುನಾಡು ಮತ್ತು ಕರ್ನಾಟಕದ ಗಡಿ ಪ್ರದೇಶದಲ್ಲಿ ಹರಡಿಕೊಂಡಿದೆ. ಕಾಳಿನ ಸಿಪ್ಪೆ ಹಳದಿ ಬಣ್ಣವಿದ್ದು, ಅಕ್ಕಿ ಕೆಂಪು. ಒಣಭೂಮಿಯಲ್ಲಿ ಪೊದೆಯಂತೆ ಬೆಳೆದು ತೆಂಡೆ ಹೊಡೆಯುತ್ತದೆ. ಬರ ನಿರೋಧಕತೆ ಹೆಚ್ಚು. ಅನ್ನ ರುಚಿಕರ. ಪುರಿ ಮಾಡಲು ಸೂಕ್ತ ತಳಿ.

ಸಾಲು ಭತ್ತ: ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಯ ಪ್ರದೇಶದ ಐದು ತಿಂಗಳ ತಳಿ. ಕೀಟ ಮತ್ತು ರೋಗದ ಬಾಧೆ ಇಲ್ಲ. ಅಲ್ಪಸ್ವಲ್ಪ ಮಳೆಗೂ ಹೊಂದಿಕೊಂಡು ಬೆಳೆಯುತ್ತದೆ. ದನಕರುಗಳಿಗೆ ರುಚಿಕರ ಮೇವು.

ಜೇನುಗೂಡು: ನಾಲ್ಕೂವರೆ ತಿಂಗಳ ತಳಿ. ನೀರಾವರಿ ಮತ್ತು ಒಣಭೂಮಿ ಎರಡರಲ್ಲೂ ಬೆಳೆಯಬಹುದು. ಸೊಂಟದ ಮಟ್ಟಕ್ಕೆ ಬೆಳೆಯುವ ಈ ತಳಿ, ರೋಗ ಮತ್ತು ಕೀಟ ನಿರೋಧಕತೆ ಹೊಂದಿದೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ.

ದೇವಮಲ್ಲಿಗೆ : ಮಳೆಯಾಧಾರಿತ ತಳಿ. ಅಕ್ಕಿ ಕಡು ಕೆಂಪು, ಅನ್ನ ರುಚಿ. ಮೊಸರನ್ನಕ್ಕೆ ಸೂಕ್ತ. ಕಜ್ಜಾಯ, ತಂಬಿಟ್ಟಿನಂತ ಸಿಹಿ ತಿನಿಸುಗಳಿಗೆ ಈ ತಳಿ ಸೂಕ್ತ. ಮಾಗಡಿ, ತುಮಕೂರು ಸುತ್ತ ಜನಪ್ರಿಯವಾಗಿದ್ದ ತಳಿ ಈಗ ಕಣ್ಮರೆಯಾಗಿದೆ.

ದಿಣ್ಣೆ ಭತ್ತ: ಬರ ಪ್ರದೇಶಕ್ಕೆ ವರದಾನವಾದ ತಳಿ. ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಬೆಳೆಯುತ್ತಿದ್ದ ತಳಿ. ದೀಪಾವಳಿ ಹಬ್ಬದಲ್ಲಿ ಕಜ್ಜಾಯ ಮಾಡಲು; ಅಕ್ಕಿರೊಟ್ಟಿ, ಉಪ್ಪಿಟ್ಟು ಮತ್ತು ದೋಸೆ ತಯಾರಿಕೆಯಲ್ಲೂ ಈ ತಳಿಯ ಅಕ್ಕಿ ಬಳಕೆಯಾಗುತ್ತದೆ.


ದಿಣ್ಣೆ ಭತ್ತ

ಕರಿದಡಿ ಬುಡ್ಡ : ಅರೆ ಮಲೆನಾಡು ತಳಿ. ಕಾಲಾವಧಿ ೧೫೦ ದಿನಗಳು. ರುಚಿಕರ, ಸತ್ವಯುತವಾದದ್ದು. ನೀರು, ಗೊಬ್ಬರ ಕಡಿಮೆಯಾದರೂ ಬೆಳೆಯಬಹುದು.ಮಳೆಯಾದಾರಿತ ಬೇಸಾಯಕ್ಕೆ ಹೇಳಿ ಮಾಡಿಸಿದಂಥದು.

ಬಿಳಿದಡಿಬುಡ್ಡ: ಅರೆ ಮಲೆ ನಾಡು ತಳಿ. ಸಿಪ್ಪೆ ಬಿಳಿ ಬಣ್ಣ.


ಬಿಳಿದಡಿ ಬುಡ್ಡ

ಮಾನಮ್ಮದಡಿಗ್ಯ: ಐದು ತಿಂಗಳ ತಳಿ. ಕೆಂಪಗಿನ, ದಪ್ಪ ಅಕ್ಕಿ, ಒಳ್ಳೆಯ ರುಚಿ. ಇದು ಮಳೆಯಾಶ್ರಿತ ಬೆಳೆ. ಅವಲಕ್ಕಿಗೆ ಚೆನ್ನಾಗಿದೆ.

ಹಾಲದಡಿಗ್ಯಾ : ಮೂರು ತಿಂಗಳ ತಳಿ. ಕಾಳು, ಹುಲ್ಲು ಚೆನ್ನಾಗಿದೆ. ಗೊಬ್ಬರ ನೀರು ಹೆಚ್ಚು ಕೇಳೊಲ್ಲ. ರೋಗ, ಕೀಟ ಭಾಧೆ ಇಲ್ಲ.

ಮುಳ್ಳುಭತ್ತ : ಐದು ತಿಂಗಳ ತಳಿ. ಕುಸುಬಲು ಅಕ್ಕಿಗೆ ಸೂಕ್ತ, ಬೇಯಲು ಹೆಚ್ಚು ಸಮಯ ಬೇಕು.

ಗಾಮಾಭತ್ತ: ಐದು ತಿಂಗಳ ತಳಿ. ತುಂಡು ಹುಲ್ಲು(ಚಿಕ್ಕದು). ಒಂದು ರೀತಿ ಗುಂಡಾದ ಆಕಾರದ ಅಕ್ಕಿ. ಚೆನ್ನಾಗಿ ಬೆಳೆಯುವ, ನೀರು ಗೊಬ್ಬರ ಹೆಚ್ಚು ಕೇಳದ ತಳಿ.

ದೊಡ್ಡಕರಿದಕಿ: ಐದು ತಿಂಗಳ ತಳಿ. ಭತ್ತ, ಹುಲುಸಾದ ಬೆಳೆ, ಹುಲ್ಲು, ಕಾಳು ಎರಡನ್ನೂ ಸಾಕಷ್ಟು ನೀಡುವ ತಳಿ, ಭತ್ತದ ಬಣ್ಣ ಹಳದಿ ಮಿಶ್ರಿತ ಕಂದು.

ದಾಮರದಡಿ: ಐದು ತಿಂಗಳ ತಳಿ. ಭತ್ತ ಚೆನ್ನಾಗಿ ಇಳುವರಿ ಇದೆ. ಹುಲ್ಲುಚೆನ್ನಾಗಿ ಆಗುತ್ತೆ, ಹುಲ್ಲಿನ ಬಣ್ಣ ಕಪ್ಪಾಗಿರುತ್ತೆ, ರುಚಿ ಚೆನ್ನಾಗಿರುತ್ತೆ.

ಚೊಡಗ್ಯಾ: ಮೂರೂವರೆ ತಿಂಗಳ ತಳಿ. ಕಾಳು ದಪ್ಪದಾಗಿರುತ್ತದೆ, ಮೇವು ಕಿರಿದಾಗಿದ್ದು ಇಳುವರಿ ಕಡಿಮೆ.

ಕೆಂಪು ಭತ್ತ : ಮೂರೂವರೆ ತಿಂಗಳ ತಳಿ. ಭತ್ತದ ಮೇಲಿನ ಸಿಪ್ಪೆ ಕೆಂಪಾಗಿದ್ದು ಮೇವಿನ ಬೆಳೆಯಾಗಿದೆ

ಹಕ್ಕಲ ಸಾಳಿ: ಭತ್ತವು ಗಿಡ್ಡಾಗಿದ್ದು ದಪ್ಪಗಿರುತ್ತದೆ, ಮೇವು ಸಿಗುತ್ತದೆ.

ಅಚಿತರ ಸಾಳಿ: ಭತ್ತವು ದಪ್ಪಗಿದ್ದು ದೊಡ್ಡದಾಗಿರುತ್ತದೆ, ಮೇವು ಸುವಾಸನೆಯಿಂದ ಕೂಡಿರುತ್ತದೆ. ಉತ್ತಮ ಮೇವು.

ಹುಗ್ಗಿ ಭತ್ತ: ೪ ತಿಂಗಳ ಬೆಳೆ, ಗುಣಮಟ್ಟದ ಕಾಳು ಮತ್ತು ಹುಲ್ಲಿಗೆ ಹೆಸರುವಾಸಿ.

ಉದರ ಸಾಳಿ: ೪ ತಿಂಗಳ ಬೆಳೆ, ಭತ್ತವು ದಪ್ಪನಾಗಿದ್ದು ಹೆಚ್ಚಿನ ಮೇವು ಸಿಗುತ್ತದೆ.

ಗಿಣಿ ಸಾಳಿ: ಮೂರೂವರೆ ತಿಂಗಳ ತಳಿ. ಉದ್ದಕ್ಕೆ ದಪ್ಪನಾಗಿರುತ್ತದೆ. ಊಟಕ್ಕೆ ಉತ್ತಮ

ಕೆಂಪು ತ್ವಾಟಿ: ೪ ತಿಂಗಳ ಬೆಳೆ, ಇದರ ಸಿಪ್ಪೆಯು ಕೆಂಪಾಗಿದ್ದು ದಪ್ಪಾಗಿರುತ್ತದೆ.

ಸಣ್ಣ ಭತ್ತ : ೪ ತಿಂಗಳ ಬೆಳೆ, ಸಣ್ಣಗಿದ್ದು ಉದ್ದಕ್ಕಿರುತ್ತದೆ.



ಕೆಂಪುಭತ್ತ

ಬದನ ಸಾಳಿ: ನಾಲ್ಕು ತಿಂಗಳ ಬೆಳೆ, ಭತ್ತ ಗಿಡ್ಡವಾಗಿದ್ದು, ಸುವಾಸನೆ ಇರುತ್ತದೆ.

ವಂಕಿ ಸಾಳಿ: ಮೂರೂವರೆಯಿಂದ ನಾಲ್ಕು ತಿಂಗಳ ಅವಧಿಯ ತಳಿ. ಸಣ್ಣಗಿದ್ದು ಉದ್ದ ವಾಗಿರುತ್ತದೆ.

ಕಬ್ಬಿನ ಸಾಳಿ: ೪ ತಿಂಗಳ ಬೆಳೆ, ಇದರ ಸಿಪ್ಪೆ ಕಪ್ಪಗಿದ್ದು ದಪ್ಪದಾಗಿರುತ್ತದೆ.

ಸೋಮ ಸಾಳಿ: ಮೂರೂವರೆಯಿಂದ ನಾಲ್ಕು ತಿಂಗಳ ಅವಧಿಯ ತಳಿ. ಭತ್ತ ಗಿಡ್ಡದಾಗಿದ್ದು, ದಡಿ ಹಸಿರಾಗಿರುತ್ತದೆ.

ಉಳಕನ ಭತ್ತ (ಮ್ಯಾರಿ): ೩ ರಿಂದ ೪ ತಿಂಗಳ ಬೆಳೆ, ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಕಳೆಯ ರೀತಿಯಲ್ಲಿ ಬೆಳೆಯುತ್ತದೆ.ಮಲೆನಾಡಿನ ತಳಿ.

ನೀರಾವರಿ (ತರಿ) ಭತ್ತದ ತಳಿಗಳು

ಸುಗದಾಸ್: ಐದು ತಿಂಗಳಿಗೆ ಕುಯಿಲಾಗುವ ದೀರ್ಘಾವಧಿ ತಳಿ. ತಂಪಾಗಿರುವ ಪ್ರದೇಶಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಉದ್ದವಾಗಿ ಬೆಳೆಯುತ್ತದೆ. ಕಾಳು ಬಲಿಯುವ ಕಾಲದಲ್ಲಿ ಕೆಂಪು ಬಣ್ಣದ್ದಿದ್ದು ಕಟಾವಿನ ಕಾಲಕ್ಕೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಕೀಟ ನಿರೋಧಕ ತಳಿ. ಹುಲ್ಲು ಮತ್ತು ಕಾಳಿನ ಇಳುವರಿ ಸಾಧಾರಣ.

ಆಲೂರು ಸಣ್ಣ: ಐದು ತಿಂಗಳಲ್ಲಿ ಕಟಾವಿಗೆ ಬರುವ ದೀರ್ಘಾವಧಿ ತಳಿ. ನಿತ್ಯ ಬಳಕೆಗೆ ಅತ್ಯುತ್ತಮವಾದದ್ದು. ಸೊಂಟದೆತ್ತರ ಬೆಳೆಯುತ್ತದೆ. ರೋಗ ಬಾಧೆ ಕಡಿಮೆ. ಹುಲ್ಲು ಮತ್ತು ಕಾಳಿನ ಇಳುವರಿ ಸಾಧಾರಣ. ಕಾಳು ಉದ್ದ, ಅಕ್ಕಿ ತೆಳು.

ಮುಂಗೇಸರಿ: ಐದು ತಿಂಗಳ ದೀರ್ಘಾವಧಿ ತಳಿ. ಭತ್ತ ಮತ್ತು ಅಕ್ಕಿ ಎರಡೂ ಕೆಂಪು. ತೆನೆ ನೋಡಲು ಕೆಂದೆತ್ತಿನ ಬಾಲದಂತಿರುತ್ತದೆ. ಹಾಗಾಗಿ ಈ ಹೆಸರು ಎಂಬುದು ರೈತರ ಅನಿಸಿಕೆ. ಚನ್ನರಾಯಪಟ್ಟಣ, ತಿಪಟೂರು ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಅಕ್ಕಿಯ ಗಂಜಿ ಸಕ್ಕರೆ ಪಾಯಸದಂತಿರುತ್ತದೆ. ರೋಗ, ಕೀಟಬಾಧೆ ಕಡಿಮೆ. ಉತ್ತಮ ಇಳುವರಿ ನೀಡುತ್ತದೆ.

ಸೇಲಂ ಸಣ್ಣ : ನಾಲ್ಕೂವರೆ ತಿಂಗಳ ಮಧ್ಯಮಾವಧಿ ತಳಿ. ಸಾಧಾರಣ ಎತ್ತರ ಬೆಳೆಯುತ್ತದೆ. ಭತ್ತ ಚಿನ್ನದ ಬಣ್ಣಕ್ಕಿದ್ದು, ಅಕ್ಕಿ ಬಿಳುಪು. ಕಾಳಿನ ಮೇಲ್ಪದರ ತೆಳುವಾಗಿದ್ದು ಅಕ್ಕಿಯ ಪ್ರಮಾಣ ಜಾಸ್ತಿ. ಕೊಟ್ಟಿಗೆ ಗೊಬ್ಬರ ದಲ್ಲಿಯೇ ೨೫ ರಿಂದ ೨೮ ಚೀಲ ಇಳುವರಿ ನಿರೀಕ್ಷಿಸಬಹುದು. ಉತ್ತಮ ಮೇವೂ ಸಿಗುತ್ತದೆ. ತಮಿಳುನಾಡು ಮೂಲದ ಈ ತಳಿ ಬೆಂಗಳೂರು ಗ್ರಾಮಾಂತರ, ಮಂಡ್ಯ ಚಾಮರಾಜನಗರ ಜಿಲ್ಲೆಗಳಲ್ಲೂ ಜನಪ್ರಿಯ.



ಸೇಲಂ ಸಣ್ಣ

ಕೆಂಪಸಡಿ: ಉತ್ತರ ಕನ್ನಡ ಜಿಲ್ಲೆ ಇದರ ತವರು. ಹೆಸರಿನಷ್ಟೇ ರುಚಿಯೂ ವಿಶಿಷ್ಟ.

ಕೋತಕಣಿ ಜಡ್ಡು ಎಂಬ ಹೆಸರೂ ಇದಕ್ಕುಂಟು. ಮುಂಜಾವಿನ ರೊಟ್ಟಿ, ದೋಸೆ, ಅನ್ನ, ಗಂಜಿ ಎಲ್ಲದಕ್ಕೂ ಇದು ಸೈ. ರೋಗಬಾಧೆ ವಿರಳ. ಆರುತಿಂಗಳಿಗೆ ಕಟಾವು.

ಸ್ವಾತಿ ಭತ್ತ: ಐದೂವರೆ ತಿಂಗಳ ದೀರ್ಘಾವಧಿ ತಳಿ. ಸಣ್ಣ ಸ್ವಾತಿ, ದಪ್ಪ ಸ್ವಾತಿ ಎಂದು ಎರಡು ವಿಧ. ಯಾವ ಸಮಯದಲ್ಲಿ ನಾಟಿ ಮಾಡಿದರೂ ತೆನೆ ಬರುವುದು ಮಾತ್ರ ಸ್ವಾತಿ ಮಳೆಗೇ! ಎತ್ತರ ಜಾಸ್ತಿ. ಹಾಗಾಗಿ ಬೀಳುವ ಗುಣವಿದೆ. ಹೆಚ್ಚು ನೀರು ಬೇಕು. ಚೆನ್ನಾಗಿ ತೆಂಡೆ ಹೊಡೆಯುತ್ತದೆ. ಕೀಟ, ರೋಗಬಾಧೆ ಕಡಿಮೆ. ತಿಪಟೂರು ಸುತ್ತ ಮುತ್ತಲಿನ ಪ್ರದೇಶದಲ್ಲಿ ಹಿಂದೆ ಸಾಮಾನ್ಯವಾಗಿತ್ತು.

ಸಣ್ಣವಾಳ್ಯ: ಐದು ತಿಂಗಳ ಅವಧಿಯ, ಮಲೆನಾಡು ಪ್ರದೇಶದ ದೀರ್ಘಾವಧಿ ತಳಿ. ದಿನಬಳಕೆಗೆ ಉಪಯೋಗಿಸುವುದುಂಟು. ಜೂನ್-ಜುಲೈನಲ್ಲಿ ನಾಟಿ ಮಾಡಿದರೆ ನವೆಂಬರ್ ಕೊನೆಗೆ ಕುಯ್ಲು ಆಗುತ್ತದೆ. ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಸೂಕ್ತ. ಸಾಧಾರಣ ಇಳುವರಿ. ರೋಗ ಮತ್ತು ಕೀಟಬಾಧೆ ಎದುರಿಸುವ ಸಾಮರ್ಥ್ಯ ಇದೆ.

ಮಾದಿಗ ಭತ್ತ: ಜಾತೀಯತೆ ಬರೀ ಮನುಷ್ಯರಿಗಷ್ಟೇ ಸೀಮಿತವಲ್ಲ. ಅದು ಭತ್ತಕ್ಕೂ ಗಂಟು ಹಾಕಿಕೊಂಡಿರುವುದು ವಿಷಾದನೀಯ. ಈ ಭತ್ತ ಕಪ್ಪು ಬಣ್ಣ ಇರುವುದರಿಂದ ಮಾದಿಗ ಭತ್ತ ಎಂದು ಕರೆಯುತ್ತಾರಂತೆ. ಇದರ ಅಕ್ಕಿ ಅಥವಾ ಅನ್ನವನ್ನು ದೇವರ ಎಡೆಗೂ ಬಳಸುವುದಿಲ್ಲ. ನಾಲ್ಕು ತಿಂಗಳ ಅವಧಿ. ಮಧ್ಯಮ ಎತ್ತರ. ತುಮಕೂರು ಕಡೆ ಕಾಣಸಿಗುತ್ತದೆ.

ಕಣ್ಣುರತ್ನ ಚೂಡಿ: ನಾಲ್ಕೂವರೆ ತಿಂಗಳ ಕಾರವಾರ ಮೂಲದ ತಳಿ. ನಾಟಿಗೂ ಸೂಕ್ತ. ಕೈತುಂಬುವಷ್ಟು ತೆಂಡೆ ಹೊಡೆಯುತ್ತದೆ. ಎತ್ತರಕ್ಕೆ ಹೆಸರುವಾಸಿ. ಸ್ವತಃ ಕಳೆ ನಿಯಂತ್ರಕ. ಭತ್ತ ಆಕರ್ಷಕ ಕೆಂಪು ಬಣ್ಣಕ್ಕಿದ್ದು ತೆನೆಯ ತುದಿಯಲ್ಲಿ ಬಿಳಿಯ ಕಣ್ಣುಗಳಿದ್ದು ಆಕರ್ಷಕವಾಗಿರುತ್ತದೆ. ಆ ಕಾರಣಕ್ಕೇ 'ಕಣ್ಣುರತ್ನ ಚೂಡಿ' ಎಂಬ ಹೆಸರು.

ಅತಿಕಾಯ: ಆರು ತಿಂಗಳ ತಳಿ. ಜೊಂಡಿನ ರೀತಿ ಬೆಳೆಯುವ ಒರಟು ಭತ್ತದ ತಳಿ. ಜುಲೈನಲ್ಲಿ ಬಿತ್ತನೆ ಮಾಡಿ, ಡಿಸೆಂಬರ್‌ನಲ್ಲಿ ಕುಯಿಲು ಮಾಡಬೇಕು. ಕಾಲ ತಪ್ಪಿಸಿ ಬಿತ್ತಿದರೆ ಮತ್ತೆ ಮುಂದಿನ ಸುಗ್ಗಿಯವರೆಗೂ ಬೆಳೆಯುತ್ತಲೇ ಇರುತ್ತದೆ! ದಪ್ಪನಾದ ಒರಟು ಕಾಳಿನ ತಳಿ. ಹೆಚ್ಚು ತೆಂಡೆ ಹೊಡೆಯುತ್ತದೆ. ರೋಗ ಮತ್ತು ಕೀಟದ ಹಾವಳಿ ಇಲ್ಲ. ಗಾಳಿ ಮಳೆಯ ಹೊಡೆತಕ್ಕೆ ಈ ಬೆಳೆ ನೆಲಕಚ್ಚದಿರುವುದೇ ಈ ತಳಿಯ ವಿಶೇಷ.



ಕಣ್ಣು ರತ್ನಚೂಡಿ

ಕಂಡರ ಕುಟ್ಟಿ: ಉಬರಮುಂಡ ಎಂಬ ಹೆಸರಿನಿಂದಲೂ ಕರೆಯುತ್ತಿರುವ

ಕರಾವಳಿ ಪ್ರದೇಶದ ಭತ್ತ, ಪಟ್ಲ ಮತ್ತು ಸುಗ್ಗಿ ಬೆಳೆಗೆ ಸೂಕ್ತ. ಎತ್ತರದ ಬೆಳೆ ಹಾಗಾಗಿ ಮಳೆ ಗಾಳಿಗೆ ಬಾಗಿ ಅಡ್ಡ ಬೀಳುವುದುಂಟು. ಫಲವತ್ತಾದ ಗದ್ದೆ ಬೇಕು. ಸಾಧಾರಣ ರುಚಿಯ ಅಕ್ಕಿ. ಕೀಟ ಮತ್ತು ರೋಗನಿರೋಧಕ ತಳಿ.

ರಾಜಕಯಮೆ: ೧೭೦ ದಿನದ ಎಣೆಲು ಬೆಳೆ. ಎತ್ತರ ಪೈರು, ಭತ್ತದ ತೂಕ ಜಾಸ್ತಿ. ಹೆಚ್ಚು ರುಚಿ. ಉರುಟು (ದುಂಡು) ಅಕ್ಕಿ.

ಆಲ್ಯಂಡೆ: ದಕ್ಷಿಣಕನ್ನಡ ಜಿಲ್ಲೆಯ ತಳಿ. ಕಾಳು, ದಿಂಡು ಎಲ್ಲವೂ ಕೆಂಪು. ಕಳೆ ತೆಗೆಯಲು ಸುಲಭ. ಎಣೆಲು ಬೆಳೆ.



ರಾಜಕಯಮೆ

ಕಾವಳಕಣ್ಣು: ಎತ್ತರದ, ಮಧ್ಯಮ ಅವಧಿಯ ಬೆಳೆ. ಭತ್ತದ ತುದಿಯಲ್ಲಿ ಬೊಟ್ಟು ಇದೆ. ತೆನೆ ಬರುವಾಗ ಇಡೀ ಪೈರು ಕುಂಕುಮದಂತೆ ಕೆಂಪಾಗಿ ಕಾಣುತ್ತದೆ. ಕೆಂಪಕ್ಕಿ ಅನ್ನದ, ಒಳ್ಳೆಯ ರುಚಿಯ ತಳಿ.

ಮೊರಡ್ಡ: ಅಲ್ಪಾವಧಿಯ ಬೆಳೆ. ಕೆಂಪು ಬಣ್ಣದ ದಪ್ಪ ಭತ್ತ. ಎತ್ತರವಾಗಿ ಬೆಳೆಯುವ ತಳಿ. ವರ್ಷಕ್ಕೆ ಮೂರು ಬೆಳೆ ತೆಗೆಯಬಹುದು.

ಕುಳಂಜಿ ಪಿಳ್ಳೆ: ಕಡಿಮೆ ಅವಧಿಯ ಬೆಳೆ, ೭೫ ದಿನಗಳಲ್ಲಿ ಕೊಯ್ಲು. ಸ್ವಲ್ಪ ಸಣ್ಣ ಕೆಂಪಕ್ಕಿ ಭತ್ತ. ವರ್ಷಕ್ಕೆ ಮೂರು ಬೆಳೆ ತೆಗೆಯಬಹುದು. ಎತ್ತರ ಬೆಳೆಯುವ ತಳಿ.

ಹಾಲು ಚಂಬಾ ಭತ್ತ: ಐದು ತಿಂಗಳ ಅವದಿಯ ತಳಿ ಎತ್ತರ ಜಾಸ್ತಿ. ಅಕ್ಕಿ, ಹಾಲು ಬಿಳುಪು. ಮೈಸೂರು, ಯಳಂದೂರು ಪ್ರದೇಶದಲ್ಲಿ ಕಂಡುಬರುತ್ತದೆ.

ಕಡ್ಡಿಸಣ್ಣ ಭತ್ತ: ನಾಲ್ಕೂವರೆ ತಿಂಗಳಿಗೆ ಕೊಯಿಲಾಗುತ್ತದೆ. ಉತ್ತಮ ಇಳುವರಿಗೆ ಹೆಸರುವಾಸಿ. ಅಕ್ಕಿ ಸಣ್ಣ. ಕಾಂಡಗಳು ಸಣ್ಣಗಿರುವುದು ಈ ತಳಿಯ ವಿಶೇಷ.

ಕೆಂಬೂತಿ ಭತ್ತ: ನೀರಾವರಿಯ ತಳಿಯಾದರೂ ಅಕ್ಕಿಯ ಬಣ್ಣ ಕೆಂಪು. ಭತ್ತವೂ ದಪ್ಪ. ಇಳುವರಿ ಕಡಿಮೆ ಎನಿಸಿದರೂ ರೋಗ ನಿರೋಧಕ ಶಕ್ತಿ ಅಧಿಕ ಹಾಸನ, ಕನಕಪುರ, ನಾಗಮಂಗಲ, ಚನ್ನರಾಯಪಟ್ಟಣ, ಕೊಳ್ಳೇಗಾಲದ ಕಡೆ ಇದ್ದ ತಳಿ ಈಗ ಅಪರೂಪ.



ಸುಗದಾಸ್

ಮಸೂರಿ: ಬೆಳ್ತಿಗೆಗೆ ಶ್ರೇಷ್ಠ ಮಟ್ಟದ ಅಕ್ಕಿ. ಹಳೆಯ ಅಕ್ಕಿಯ ಅನ್ನ ಬಳಸಲಿಕ್ಕೂ ಒಳ್ಳೆಯದು. ಅಧಿಕ ಇಳುವರಿ ಮತ್ತು ಒಳ್ಳೆಯ ರುಚಿ ಹೊಂದಿರುವ ತಳಿ.

ಕುಟ್ಟಿ ಕಯಮೆ: ದೀರ್ಘಾವಧಿಯ ಎತ್ತರದ ತಳಿ. ಪಟ್ಲ ಮತ್ತು ಸುಗ್ಗಿ ಬೆಳೆಗೆ ಸೂಕ್ತ. ರೋಗ ಕಡಿಮೆ ಹಾಗೂ ಗೊಬ್ಬರದ ಅಗತ್ಯ ಅಷ್ಟಾಗಿ ಇಲ್ಲ. ಅಕ್ಕಿ ಹೆಚ್ಚು ರುಚಿಕರ.

ಸುಗ್ಗಿ ಕಯಮೆ: ದೀರ್ಘಾವಧಿಯ ಎತ್ತರದ ತಳಿ. ಪಟ್ಲ ಮತ್ತು ಸುಗ್ಗಿ ಬೆಳೆಗೆ ಸೂಕ್ತ. ಮನೆ ಬಳಕೆಗೆ ಸೂಕ್ತ.

ಕರಿಯ ಜೇಬಿ: ಎತ್ತರಕ್ಕೆ ಬೆಳೆಯುವ ತಳಿ. ಹಾಗೇ ರುಚಿಯಾದ ಅಕ್ಕಿ. ಕಾವೇರಿ ಸಂಕ್ರಮಣದ ಸಮಯದಲ್ಲಿ ನೇಜಿ ಹಾಕಬೇಕು. ಇಲ್ಲದಿದ್ದಲ್ಲಿ ತೆನೆ ಸರಿಯಾಗಿ ಬರದು. ಸಿಪ್ಪೆ ದಪ್ಪ ಇರುವುದರಿಂದ ತೆನೆ ತಿಗಣೆ ಹಾವಳಿಗೆ ಹೆಚ್ಚು ಪ್ರತಿರೋಧ ಒಡ್ಡುತ್ತವೆ. ಬೈಹುಲ್ಲು ಉತ್ತಮ ಹಾಗೂ ರುಚಿಯಾಗಿರುವುದರಿಂದ ಜಾನುವಾರುಗಳು ಇಷ್ಟಪಟ್ಟು ತಿನ್ನುತ್ತವೆ.



ನವರ

ಅಜಿಪ್ಪಸಾಲೆ: ದೊಡ್ಡ ಭತ್ತ. ೯೦ ದಿನದ ಎಲ್ಲಾ ಕಾಲದ ಬೆಳೆ, ೬೦ನೇ ದಿನಕ್ಕೆ ತೆನೆ ಕಾಣಿಸುತ್ತದೆ. ನಾಟಿಗೆ ಯೋಗ್ಯ.

ಹವಳಕಣ್ಣ: 'ತಿನ್ನೋಕಿರು' ಎಂಬ ಇನ್ನೊಂದು ಹೆಸರನ್ನೂ ಹೊಂದಿರುವ ತಳಿ. ಕೇವಲ ೯೦ ದಿನಗಳ ಅಲ್ಪಾವಧಿಯ ತಳಿ. ಇದು ಕೆಂಪು ಅಕ್ಕಿ. ನಾಟಿ ಮಾಡುವ ತಳಿಯಲ್ಲ. ಬೀಜವನ್ನು ಗದ್ದೆಗೆ ಎರಚಿ ನೇರವಾಗಿ ಬೆಳೆ ತೆಗೆಯುತ್ತಾರೆ.

ಬಡಕಾಯಿ ಚೊಳ್ಳಕಿರಿ: ಇದು ೧೨೦-೧೨೫ ದಿನದ ದೀರ್ಘಾವಧಿಯ ತಳಿ. ಇದು ಬಿಳಿ ಅಕ್ಕಿ. ಇದಕ್ಕೆ ಗುಡ್ಡು ಬಿಳ್ಳೇರಿ ಎಂಬ ಹೆಸರು ಕೂಡ ಇದೆ.

ಮಸ್ಕತಿ: ಮಸ್ಕತ್‌ಗೆ ರಫ್ತಾಗುವುದರಿಂದ ಇದರ ಹೆಸರೇ 'ಮಸ್ಕತಿ' ಎಂದಾಗಿದೆ.ಇದು ೧೦೫-೧೧೦ ದಿನದ ಮಧ್ಯಮಾವಧಿಯ ತಳಿ.

ಪೊಟ್ಟಹಳಗ : ಬಿಳಿ ಇದ್ದು ಕುಚ್ಚಿಲು ಅಕ್ಕಿಗೆ ಬರುತ್ತದೆ. ಇವುಗಳ ಹುಲ್ಲು ಎತ್ತರವಾಗಿದ್ದು, ಗಾಳಿಗೆ ಬೀಳುವ ಪ್ರಸಂಗವಿರುತ್ತದೆ.

ಮತ್ತಾವರದ ಭತ್ತ : ಮತ್ತಾವರ, ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಸಣ್ಣ ಹಳ್ಳಿ. ಈ ಮತ್ತಾವರದ ಭತ್ತ ಮಂಡಕ್ಕಿ ಮಾಡಲು ಮಾತ್ರ ಬಳಕೆಯಾಗುತ್ತದೆ. ಸಿಹಿಯಾದ ರುಚಿ ಇರುವ ಈ ಭತ್ತದ ಕಾಳು ದಪ್ಪ ಮತ್ತು ಉದ್ದ. ಹೊಳೆದಾಲಗ ಚಿಪ್ಪ ಮತ್ತು ಮತ್ತಾವರದ

ಕೆರೆ ಭತ್ತ ಎಂಬ ಎರಡು ತಳಿಗಳಿವೆ. ಎಕರೆಗೆ ಸುಮಾರು ೨೫ ಚೀಲ ಇಳುವರಿ ಕೊಡುವ ಈ ಭತ್ತ ಆರು ತಿಂಗಳ ಬೆಳೆ.

ಆಲೂರುಸಣ್ಣ: ಕರ್ನಾಟಕದ ಉದ್ದಕ್ಕೂ ಭತ್ತದ ಕೃಷಿಕರಿಗೆ ಪರಿಚಯವಿರುವ ತಳಿ. ಈ ಭತ್ತದ ದೆಸೆಯಿಂದ 'ಆಲೂರು' ಎಂಬ ಊರು ಜನಪ್ರಿಯಗೊಂಡಿದೆ. ಸಾಧಾರಣ ಗಾತ್ರದ ಕಾಳು ಮನೆಬಳಕೆಗೆ ಸೂಕ್ತ. ಶುದ್ಧ ಬೀಜಗಳು ಲಭ್ಯ ಇಲ್ಲದಿರುವುದೇ ಕೊರತೆ.

ನ್ಯಾರೆಮಿಂಡ : ಗಂಡು ಭತ್ತದ ಹಾವಳಿ ಇರುವ ಭತ್ತದ ಗದ್ದೆಗಳಲ್ಲಿ ಬೆಳೆಯುವ ತಳಿ. ಕಾಂಡ, ಗರಿ, ಕಾಳು ಎಲ್ಲವೂ ಕಂದುಬಣ್ಣ. ಹೊಲಕ್ಕೆ ಬೆಂಕಿ ಹಚ್ಚಿದಂತೆ ಕಾಣುತ್ತದೆ. ಹಸಿರು ಬಣ್ಣದ ಕಳೆ ಸುಲಭವಾಗಿ ಕಣ್ಣಿಗೆ ಬೀಳುತ್ತದೆ.

ನವರ: ಔಷಧೀಯ ಭತ್ತ. ಕೇರಳದ ಗಡಿಭಾಗದಲ್ಲಿ ಬೆಳೆಸುತ್ತಾರೆ. ಕಪ್ಪು ಬಣ್ಣದ ಕಾಳಿನ, ಕೆಂಪು ಅಕ್ಕಿಯ ತಳಿ. ರುಚಿಯಲ್ಲಿ ಒಗರು.

ಕಣದ ತುಂಬಾ: ಮಂಡ್ಯ ಭಾಗದ ತಳಿ. ಹೆಚ್ಚು ತೆಂಡೆ ಹೊಡೆಯುವ ಗುಣವಿದೆ.

ಸಿದ್ದಸಾಲೆ: 'ಸಿದ್ದಸಾಲೆ ಬೆಳೆದು ಇದ್ದ ಸಾಲ ಕಳಕೊ' ಶಿಕಾರಿಪುರ ಮತ್ತು ಸೊರಬ ತಾಲ್ಲೂಕಿನ ರೈತರು ಮಾತಿನ ಮಧ್ಯೆ ನೆನಪಿಸಿಕೊಳ್ಳುವ, ಈಗ ಹೆಚ್ಚು ಕಮ್ಮಿ ಕಣ್ಮರೆಯಾಗಿರುವ ಅಪರೂಪದ ಭತ್ತದ ತಳಿ. ಉತ್ತಮ ಅಕ್ಕಿಯ ಗುಣಮಟ್ಟ ಉತ್ತಮ ಮನೆಬಳಕೆಗೆ ಸೂಕ್ತ.

ಬೆಳಗಾಂ ಭಾಗದಲ್ಲಿ ದೊಡ್ಡಾಗ್ಯ, ಅಂತರ ಸಾಲಿ, ಕಾಗೆಸಾಲಿ, ಬಂಗಾರ ಕಡ್ಡಿ, ಕೊತ್ತಂಬರಿಸಾಲಿ ತಳಿಗಳಿದ್ದವು.

■



ಕನ್ನಡನಾಡಿನ ಕೆಲವು ವಿಶಿಷ್ಟ ಭತ್ತದ ತಳಿಗಳು



ರತ್ನಚೂಡಿ

ರತ್ನಚೂಡಿ: ಕರಾವಳಿ, ಮಲೆನಾಡು, ಬಯಲು ಸೀಮೆಯಲ್ಲೆಲ್ಲಾ ಈ ಭತ್ತದ ಹೆಸರು ಪರಿಚಿತ. ಐದು ತಿಂಗಳ ತಳಿ. ಭತ್ತದ ಹೆಸರೇ ಹೇಳುವಂತೆ ರತ್ನದಂತೆ ಹೊಳೆಯುತ್ತದೆ. ಸಾಧಾರಣ ಎತ್ತರ. ಕಾಂಡ ಸಣ್ಣ. ಅಕ್ಕಿ ಬಿಳುಪು. ಪಾಲಿಷ್ ಕೇಳುವುದಿಲ್ಲ. ತೆನೆಗಳು ಬಹಳ ಉದ್ದ. ರೋಗ, ಕೀಟಬಾಧೆ ಕಡಿಮೆ.

ಜೋಳಗ: ಮಲೆನಾಡಿಗರು ಇದನ್ನು 'ಭತ್ತದ ತಾಯಿ' ಎನ್ನುತ್ತಾರೆ. ಆರು ತಿಂಗಳ ದೀರ್ಘಾವಧಿ ತಳಿ. ಭತ್ತ ಮಾಸಲು ಕಪ್ಪು. ಅಕ್ಕಿ ಕೆಂಪಗಿದ್ದು ಕುಸುವಲಕ್ಕಿಗೆ ಹೆಚ್ಚು ಜನಪ್ರಿಯ. ಸದಾನೀರು ಹರಿಯುವ ಕಡೆ ಹಾಕಿದರೂ ಕೊಳೆಯದು, ಬೀಳದು. ಕಡಿಮೆ ಸಾರದ ನೆಲಕ್ಕೂ ಸೈ. ತೀರ್ಥಹಳ್ಳಿ ತಾಲ್ಲೂಕಿನ ರೈತರು ಮಳೆಗಾಲದಲ್ಲಿ ತಪ್ಪದೆ ಸ್ವಲ್ಪವನ್ನಾದರೂ ಹಾಕುತ್ತಾರೆ. ರೋಗ, ಕೀಟಬಾಧೆ ಇಲ್ಲವೇ ಇಲ್ಲ.

ರಾಜಮುಡಿ: ಐದು ತಿಂಗಳಿಗೆ ಕುಯಿಲಾಗುವ ಎತ್ತರದ ತಳಿ. ಹಾಸನ, ಮಂಡ್ಯ, ಮೈಸೂರು ಪ್ರದೇಶದಲ್ಲಿ ಜನಪ್ರಿಯ. ಕಾಂಡಗಳು ದೃಢವಾಗಿರುತ್ತವೆ. ಉತ್ತಮ ತೆಂಡೆ ಸಾಮರ್ಥ್ಯವಿದೆ. ರಾಸಾಯನಿಕ ಕೃಷಿಗೆ ಹೊಂದುವುದೇ ಇಲ್ಲ. ಬಾಗಿದ ತೆನೆಗಳ ಮತ್ತು ಜೋಡಿಸಿಟ್ಟ ಮುತ್ತಿನಂತೆ ಕಾಣುವ ಕಾಳುಗಳು ನೋಡಲು ಆಕರ್ಷಕ. ಮೈಸೂರು ಮಹಾರಾಜರಿಗೆ ಇದರ ಅಕ್ಕಿ ತುಂಬಾ ಇಷ್ಟವಾಗುತ್ತಿತ್ತು. ಆ ಕಾರಣದಿಂದಲೇ ಈ ತಳಿಗೆ ರಾಜಮುಡಿ ಎಂಬ ಹೆಸರು ಇಡಲಾಯಿತು ಎಂಬುದು ಹಳೆಯ ತಲೆಮಾರಿನ ರೈತರ ಮಾತು.

ಹಾಲುಬ್ಬಲು: ಐದು ತಿಂಗಳ ತಳಿ. ತುಮಕೂರು ಸುತ್ತಮುತ್ತಲ ಕೆರೆ ನೀರಾವರಿ ಪ್ರದೇಶ ಇದರ ಮೂಲ. ತೆಂಡೆಗಳು ನೀಳವಾಗಿದ್ದು ಪ್ರತಿ ಗಿಡಕ್ಕೆ ೪-೫ ಇರುತ್ತದೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ. ವಿಶೇಷವೆಂದರೆ ಕಾಳು ಬಲಿತ ಕಾಲದಲ್ಲಿ ಇಲಿಗಳ ಕಾಟ ಇರುವುದಿಲ್ಲ. ರೋಗ ಮತ್ತು ಕೀಟಬಾಧೆ ಕಡಿಮೆ. ಕಾಳು ದಪ್ಪ, ತುಂಬಾ ರುಚಿಕರ,

ಸುವಾಸನೆಯ ಭತ್ತದ ತಳಿಗಳು

ಅನ್ನ ಬೇಯಿಸುವಾಗ ಬರುವ ಪರಿಮಳ ಸುವಾಸನೆಯ ಭತ್ತದ ತಳಿಗಳ ವಿಶೇಷ ಗುಣ. ಇಂದು ನಾವು ಊಟ ಮಾಡುವ ಸುವಾಸನೆಯ ಅನ್ನ, ನಮ್ಮ ತಾತ ಮುತ್ತಾತರು ಉಳಿಸಿ-ಬೆಳೆಸಿಕೊಂಡು ಬಂದ ಹತ್ತಾರು ದೇಶೀಯ ಸುವಾಸನೆ ತಳಿಗಳ ಕೃಪೆಯೆಂದರೆ ತಪ್ಪಾಗಲಾರದು

ಜೀರಿಗೆ ಸಾಲಿ : ಐದು ತಿಂಗಳ ನೀರಾವರಿ ತಳಿ. ಜೀರಿಗೆಯಷ್ಟೇ ಗಾತ್ರದ, ಆಕರ್ಷಕ ಬಣ್ಣ ಮತ್ತು ಸುವಾಸನೆಯ ಭತ್ತದ ತಳಿ. ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಪ್ರದೇಶದ ಈ ತಳಿ ತಮಿಳುನಾಡಿನಲ್ಲೂ ಹೆಸರುವಾಸಿ. ಕೀಟ, ರೋಗಬಾಧೆ ಕಡಿಮೆ. ಇಲಿ, ಹಕ್ಕಿಗಳ



ಕಾಟ ಜಾಸ್ತಿ. ಎಕರೆಗೆ ೧೫ ರಿಂದ ೧೬ ಚೀಲ ಇಳುವರಿ ಸಿಗುತ್ತದೆ. ಭತ್ತ ಕಂದು ಬಣ್ಣಕ್ಕಿದ್ದು, ತೆನೆಗಳು ಆಕರ್ಷಕವಾಗಿ ಇಳಿಬೀಳುತ್ತವೆ. ಭತ್ತದ ಮೇಲ್ಪದರ ತೆಳುವಾಗಿದ್ದು, ಅಕ್ಕಿಯ ಪ್ರಮಾಣ ಅಧಿಕವಾಗಿರುತ್ತದೆ. ಬಿಳಿಬಣ್ಣದ ಅಕ್ಕಿ ಗಾತ್ರದಲ್ಲಿ ತುಂಬಾ ಸಣ್ಣದಿದ್ದು ಪಲಾವ್, ಬಿರಿಯಾನಿ ಮಾಡಲು ಹೆಚ್ಚಾಗಿ ಬಳಕೆಯಾಗುತ್ತದೆ. ಅಡುಗೆ ಮಾಡುವಾಗ ಮನೆಯೆಲ್ಲಾ 'ಘಂ' ಎನ್ನುತ್ತದೆ. ದಿನಬಳಕೆಯ ಅಕ್ಕಿಗೆ ಒಂದು ಹಿಡಿ ಜೀರಿಗೆಸಾಲಿ ಅಕ್ಕಿ ಬೆರೆಸಿ ಅನ್ನ ಮಾಡಿದರೆ ಅನ್ನವೆಲ್ಲಾ ಪರಿಮಳಯುಕ್ತವಾಗುತ್ತದೆ. ಅಪರೂಪದ ತಳಿಯಿದು.

ಗಂಧಸಾಲೆ: ಐದೂವರೆ ತಿಂಗಳ ತಳಿ. ಮಲೆನಾಡು ಪ್ರದೇಶದ ಪರಿಮಳಭರಿತ ಒಣಹುಲ್ಲಿನ ಬಣ್ಣದ, ಗುಂಡನೆಯ, ಸಣ್ಣ ಅಕ್ಕಿ ಭತ್ತ. ಅನ್ನದ ರುಚಿ ಉತ್ತಮ. ಒಮ್ಮೆ ತಿಂದವರು ಇದರ ಸ್ವಾದ ಮರೆಯುವುದು ಸಾಧ್ಯವೇ ಇಲ್ಲ. ಭಾರೀ ಎತ್ತರದ ಪೈರು. ಆದರೂ ಬಾಗಿ ಬೀಳುವುದಿಲ್ಲ. ನೆರಳಲ್ಲಿ ಕೂಡ ಬೆಳೆಯುವ ತಳಿ. ತೆನೆ ಬರುವಾಗ ಇಡೀ ಹೊಲವೇ ಪರಿಮಳದಿಂದ

ಕೂಡಿರುತ್ತದೆ. ಬಾಸುಮತಿಯಂತೆ ಪರಿಮಳವಿರುವ ಈ ಭತ್ತವನ್ನು ಮಿಲ್‌ಗಳಲ್ಲಿ ಅಕ್ಕಿ ಮಾಡಿಸುವಾಗ ನುಚ್ಚು ಆಗುವುದು ಹೆಚ್ಚು. ಬೆಳ್ತಿಗೆ, ಪಲಾವ್ ತಯಾರಿಕೆಗೆ ಸೂಕ್ತ ಆಯ್ಕೆ.

ಘಂಗಡಲೆ : ಐದು ತಿಂಗಳ ಅವಧಿಯ, ತುಮಕೂರು ಪ್ರದೇಶದ ತಳಿ. ಕಡಲೆಯಂತೆ ಕಮ್ಮಗಿನ ರುಚಿ. ಅನ್ನ ಬೆಂದಾಗ ಒಳ್ಳೆಯ ಪರಿಮಳ. ತಂಬಿಟ್ಟು, ಕಜ್ಜಾಯ ಮಾಡಲೆಂದೇ ರೈತರು ಇದನ್ನು ಸ್ವಲ್ಪವಾದರೂ ಬೆಳೆಯುತ್ತಿದ್ದರು. ಎತ್ತರ ಜಾಸ್ತಿ. ಕಾಳಿಗಿಂತ ಹುಲ್ಲಿನ ಇಳುವರಿ ಅಧಿಕ. ಈಗ ಹುಡುಕಿದರೂ ಸಿಗದು.

ಗುಲ್ವಾಡಿ ಸಣ್ಣ : ಗುಲ್ವಾಡಿ ಮೂಲದ ಪರಿಮಳದಕ್ಕಿ ತಳಿ. ಬಲಿತತೆನೆ ಆಕರ್ಷಕವಾಗಿದ್ದು, ನೋಡುಗರ ಗಮನ ಸೆಳೆಯುತ್ತದೆ. ಮಾರುಕಟ್ಟೆಯಲ್ಲಿ ಈ ಭತ್ತಕ್ಕೆ ಒಳ್ಳೆಯ ಬೇಡಿಕೆ ಇದೆ.


ಕುಂಕುಮಕೇಸರಿ : ಸಾಗರ ತಾಲ್ಲೂಕಿನ ದೇಶೀ ಭತ್ತದ ತಳಿ. ಎಕರೆಗೆ ೧೦-೧೪ ಕ್ವಿಂಟಾಲ್ ಇಳುವರಿ ಸಿಗುತ್ತದೆ. ಪರಿಮಳಯುಕ್ತ ಅಕ್ಕಿ. ಅನ್ನಕ್ಕಿಂತ ಕೇಸರಿ ಬಾತ್ ಮಾಡಲು ಹೆಚ್ಚು ಸೂಕ್ತ.

ಚಿಟಿಗ : ಇದು ಕೆಂಪು ಮಿಶ್ರಿತ ಅಕ್ಕಿಯಾಗಿದ್ದು. ಬೇಸಿಗೆಯಲ್ಲಿ ಬೇಗನೆ ಬರುವ ಬೆಳೆ. ಅತಿರುಚಿ. ಸಣ್ಣ ಸುವಾಸನೆಯುಕ್ತ ಅಕ್ಕಿ ಸುವಾಸನೆ ಇದ್ದು ಕೇಸರಿಬಾತ್ಗೆ ಪ್ರಸಿದ್ಧ. ಇದರ ಹುಲ್ಲು ಎತ್ತರ. ಭತ್ತ ಹೂ ಬರುವಾಗ ಸುವಾಸನೆ ಬರುತ್ತದೆ.

ಮೇದಿನಿ ಸಣ್ಣಕ್ಕಿ: ಹೊನ್ನಾವರ ಭಾಗದ ಪರಿಮಳದ ಅಕ್ಕಿ. ಅತ್ಯಂತ ಸಣ್ಣಕಾಳು.

ರಾಜಕಮಲ್: ಸಿರ್ಸಿ ತಾಲ್ಲೂಕಿನ ದೇಶೀ ಭತ್ತ. ಆಕರ್ಷಕ ತೆನೆಯ ತಳಿ. ಸಣ್ಣದಾದ ಗುಂಡನೆಯ ಕಾಳು. ಬಿಳಿಬಣ್ಣದ ಅಕ್ಕಿ. ಅನ್ನ ಮಾಡಲು ಉತ್ತಮ .

ಬಂಗಾರ ಕಡ್ಡಿ ಭತ್ತ: ೩ ರಿಂದ ೪ ತಿಂಗಳ ಬೆಳೆ, ಸಣ್ಣ, ಉದ್ದನಾದ ಸುವಾಸನೆಭರಿತ ಭತ್ತ, ಉತ್ತಮ ಮೇವು. ಕಡ್ಡಿ ಸಣ್ಣನಾಗಿರುತ್ತದೆ.



ಗಂಧಸಾಲೆ

ಆಳನೀರಿನ ಭತ್ತದ ತಳಿಗಳು

ಸಾಗರ ತಾಲ್ಲೂಕಿನ ವರದಾ ಮೂಲದಲ್ಲಿ ಹುಟ್ಟುವ ವರದಾ ನದಿ ಸಾಗರ, ಸೊರಬ, ಸಿರ್ಸಿ ತಾಲ್ಲೂಕುಗಳಲ್ಲಿ ಸಣ್ಣ ಹೊಳೆಯಾಗಿ ಹರಿದು, ಧರ್ಮಾ ನದಿಯ ಜೊತೆಗೂಡಿ ಹಾವೇರಿ ಜಿಲ್ಲೆಯ ಮುಖ್ಯ ನದಿಯಾಗಿ ತುಂಗಭದ್ರಾ ಸೇರುತ್ತಾಳೆ. ಜುಲೈ–ಆಗಸ್ಟ್ ತಿಂಗಳಲ್ಲಿ ವರದಾ ನದಿಯಲ್ಲಿ ನೆರೆ ಸರ್ವೇಸಾಮಾನ್ಯ. ನೆರೆಪೀಡಿತ ಹಳ್ಳಿಗಳಾದ ಮಂಡಗಳಲೆ, ಶುಂಠಿಕೊಪ್ಪ, ಮಾಡಗದ್ದೆ, ಕಾಗೋಡು, ಹಿರೇನೆಲ್ಲೂರು, ತಡಗಳಲೆ, ಸೆಣ್ಣಮನೆ, ಯಲಕುಂದ್ಲಿ, ಬಾಳೆಕೊಪ್ಪ, ತಟ್ಟೀಗುಂಡಿ, ಕಾರೆಹೊಂಡ, ಕಡಸೂರು, ಗುನ್ನೂರು, ಚಂದ್ರಗುತ್ತಿ, ಬನವಾಸಿ, ಮೊಗಳ್ಳಿ , ಎಡೂರು ಬೈಲು, ಬಂಕಸಾಣ, ಜಡೆ, ಬಾಸಿ, ಅಜ್ಜರಣಿ, ಹೊಸಕೇರಿ, ಲಿಂಗನ ಮಟ್ಟಿ, ತಿಗಣೆ ಮೊದಲಾದ ಹಳ್ಳಿಗಳಲ್ಲಿ ನೆರೆ ಸದಾ ತಲೆ ಮೇಲೆ ತೂಗಾಡುವ ಕತ್ತಿ. ಒಮ್ಮೆ ನೆರೆ ಬಂದರೆ ೨೦ ರಿಂದ ೩೦ ದಿನ ಈ ಸೀಮೆಯ ಅಷ್ಟೂ ಭತ್ತದ ಗದ್ದೆಗಳು ಜಲಸಮಾಧಿಯಾಗುತ್ತವೆ. ಈ ವಿಶಿಷ್ಟ ಜೀವ ಪರಿಸರಕ್ಕೆ ಹೊಂದಿಕೊಳ್ಳುವ, ಒಂದು ತಿಂಗಳವರೆಗೆ ನೀರೊಳಗೆ ಬದುಕುಳಿಯುವ ಸಾಮರ್ಥ್ಯ ಇರುವ ಆಳನೀರಿನ ಭತ್ತದ ತಳಿಗಳ (Deep water rice varieties) ಭಂಡಾರವೇ ಇಲ್ಲಿದೆ.

ನೆರೆ ಪೀಡಿತ ಪ್ರದೇಶಗಳಲ್ಲಿ ನೆಲೆ ಮಾಡಿಕೊಂಡು ಬೆಳೆಯುವ ಆಳನೀರಿನ ಭತ್ತದ ತಳಿಗಳು ಜೀವವೈವಿಧ್ಯದ ದೃಷ್ಟಿಯಿಂದ ವಿಶೇಷ ಮಹತ್ವ ಪಡೆದಿವೆ. ಬಾಂಗ್ಲಾದೇಶ, ಪಶ್ಚಿಮ ಬಂಗಾಳ, ಗೋಧಾವರಿ ನದಿ ಪಾತ್ರ ಮತ್ತು ಪೂರ್ವ ಘಟ್ಟದ ಕಾಡು ಪ್ರದೇಶಗಳಲ್ಲಷ್ಟೇ ಕಂಡುಬರುವ ಈ ಆಳನೀರಿನ ಭತ್ತದ ತಳಿಗಳು ಕರ್ನಾಟಕದ ವರದಾ ನದಿ ಪ್ರದೇಶದಲ್ಲಿ ಉಳಿದುಕೊಂಡಿವೆ. ಎಂಥ ನೆರೆಯನ್ನಾದರೂ ಎದುರಿಸಿ ಬೆಳೆಯಬಲ್ಲ ನೆರೆಮುಳುಗ, ನೆರೆಗುಳಿ, ಕರಿಭತ್ತ, ಸಣ್ಣವಾಳ್ಯ, ಕರಿಜಡ್ಡು ಸೋಮಸಾಲೆ, ಕರೆಕಾಲ್ ದಡಿಗ, ಮೊದಲಾದ ಭತ್ತದ ತಳಿಗಳನ್ನು ನೂರಾರು ವರ್ಷಗಳಿಂದ ವರದಾ ನದಿ ಅಂಚಿನ ಭತ್ತದ ಗದ್ದೆಗಳ ರೈತರು ಬೆಳೆಯುತ್ತಾರೆ. ಇದಲ್ಲದೆ ಬುಡ್ಡ ಭತ್ತ, ಏಡಿಕುಣಿ, ಜೇನುಗೂಡು, ನೆಟ್ಟಿ ಭತ್ತ, ಕರಿ ಎಸಡಿ, ಮುಳ್ಳಾರಿ ಮೊದಲಾದ ಅಪರೂಪದ ತಳಿಗಳೂ ಈ ಪ್ರದೇಶದಲ್ಲಿ ನೆಲೆಯೂರಿವೆ.



ನೆರೆ ಪ್ರದೇಶದ ಮುಖ್ಯ ಭತ್ತದ ತಳಿಗಳು



ನೆರೆಗುಳಿ

ನೆರೆಗುಳಿ: ಐದು ತಿಂಗಳ ತಳಿ. ನೆರೆ ಬಂದಾಗ, ೨೫ ದಿನಗಳ ಕಾಲ ಈ ತಳಿಯ ಭತ್ತದ ಸಸಿಗಳು ಜಪ್ಪೆನ್ನದೆ ನೀರೊಳಗೆ ಧೃಢವಾಗಿ ನಿಲ್ಲುತ್ತವೆ. ೨೫ ದಿನಗಳ ನಂತರ, ಪೈರಿನ ತುದಿಭಾಗ ಕೊಳೆಯಲು ಆರಂಭವಾಗುತ್ತದೆ. ತಿಂಗಳೊತ್ತಿಗೆ ಗರಿಗಳೆಲ್ಲಾ ಕೊಳೆತುಹೋಗಿ ಬರಿಯ ದಂಟು ಮಾತ್ರ ಉಳಿಯುತ್ತದೆ. ಆಗ ನೆರೆ ಇಳಿದರೆ ಸಾಕು, ಪೈರುಗಳು ಮತ್ತೆ ಚಿಗುರುತ್ತವೆ. ದಪ್ಪ ತೆನೆ ಮತ್ತು ಉದ್ದವಾದ ಕಾಳನ್ನು ಹೊಂದಿರುತ್ತದೆ, ಅಕ್ಕಿ ಕೆಂಪಾಗಿದ್ದು ತುಂಬಾ ರುಚಿಯಾಗಿರುತ್ತದೆ.

ಕರಿಜೆಡ್ಡು : ಭತ್ತ ಸಣ್ಣದಾಗಿದ್ದು ಮೇಲಿನ ಹೊಟ್ಟು ಕಪ್ಪಾಗಿರುತ್ತದೆ. ಸುಮಾರು ೩೦ ದಿವಸಗಳ ಕಾಲ ನೆರೆಯನ್ನು ತಡೆಯುತ್ತದೆ ಅಲ್ಲದೆ ಭತ್ತ ಉದುರುವುದಿಲ್ಲ. ಹೆಚ್ಚು ತೂಕ ಹೊಂದಿದ್ದು ೧೬೫ ದಿವಸಗಳಲ್ಲಿ ಬರುತ್ತದೆ. ವಿಶೇಷವೆಂದರೆ ನೆರೆ ಇಳಿದ ಮೇಲೆ ಮಳೆ ಬಾರದಿದ್ದರೂ ತಡೆದು ಇಬ್ಬನಿಗೂ ಸಹ ಬರುತ್ತದೆ. ಎಕರೆಗೆ ೧೨-೧೩ ಕ್ವಿಂಟಾಲ್ ಕಾಳು ಮತ್ತು ೬ ಗಾಡಿ ಹುಲ್ಲಿನ ಇಳುವರಿ ಕೊಡುತ್ತದೆ.

ನೆಟ್ಟಿ ಭತ್ತ : ೧೨೦ ದಿವಸಗಳಿಗೆ ಕುಯಿಲಿಗೆ ಬರುತ್ತದೆ. ಅಕ್ಕಿ ಬೆಳ್ಳಗಿದ್ದು ಒಳ್ಳೆಯ ರುಚಿ ಹೊಂದಿರುತ್ತದೆ. ನೆರೆಯಲ್ಲಿ ಮೊದಲು ಹಾಕಿದ ಭತ್ತ ಕೊಳೆತು ಹೋದರೆ ಇದನ್ನು ನಾಟಿ ಮಾಡಲು ಬಳಸಬಹುದು. ಇದು ಸುಮಾರು ೨೦ ದಿವಸಗಳ ಕಾಲ ನೀರೊಳಗಿರಬಲ್ಲದು ಮತ್ತು ೧೨-೧೩ ಕ್ವಿಂಟಾಲ್ ಕಾಳು ಮತ್ತು ೫ ಗಾಡಿ ಹುಲ್ಲಿನ ಇಳುವರಿ ಕೊಡುತ್ತದೆ.

ಸಣ್ಣವಾಳ್ಯ : ಉದ್ದವಾದ ತೆನೆ, ಅಕ್ಕಿ ಗಟ್ಟಿಯಾಗಿದ್ದು ಉತ್ತಮ ರುಚಿಯೊಂದಿಗೆ ಒದಗಿ ಬರುತ್ತದೆ. ಸುಮಾರು ೧೫-೨೦ ದಿವಸಗಳ ಕಾಲ ನೆರೆಯಲ್ಲಿ ನಿಲ್ಲುವ ಶಕ್ತಿ ಹೊಂದಿದ್ದು ೧೨-೧೩ ಕ್ವಿಂಟಾಲ್ ಕಾಳು ಮತ್ತು ೫ ಗಾಡಿ ಹುಲ್ಲಿನ ಇಳುವರಿ ನೀಡುತ್ತದೆ. ಈ ತಳಿಯ ಅವಧಿ ೧೮೦ ದಿವಸಗಳು.

ಕಣಿ ಸೋಮಸ್ಯಾಲೆ : ಅಕ್ಕಿ ಕೆಂಪಾಗಿದ್ದು ಹೆಚ್ಚು ತೂಕವಿರುತ್ತದೆ. ಹೆಚ್ಚಾಗಿ ಕುಚ್ಚಿಗೆ ಅಕ್ಕಿಗೆ ಬಳಸುತ್ತಾರೆ. ೨೦ ದಿವಸಗಳು ನೆರೆಯನ್ನು ತಡೆಯುತ್ತದೆ. ೧೨-೧೩ ಕ್ವಿಂಟಾಲ್ ಕಾಳು ಮತ್ತು ೫ ಗಾಡಿ ಹುಲ್ಲು ಎಕರೆಗೆ ನೀಡುತ್ತದೆ. ಸುಮಾರು ೧೫೦-೧೮೦ ದಿವಸಗೊಳಗೆ ಬರುತ್ತದೆ. ಈ ತಳಿಗೆ ಹೆಚ್ಚು ಬೇಡಿಕೆ ಇದ್ದು ಬೆಲೆಯೂ ಜಾಸ್ತಿ.

ನೆರೆ ಪ್ರದೇಶದಲ್ಲಿ ಬೆಳೆಯುವ ಇತರ ಭತ್ತದ ತಳಿಗಳು

ನೆರೆ ಪ್ರದೇಶದಲ್ಲಿ ಭೂಮಿಯು U ಆಕಾರದಿಂದ ಕೂಡಿದ್ದು ರೈತರು ಗದ್ದೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಅವುಗಳಿಗೆ ಸರಿ ಹೊಂದುವ ತಳಿಗಳನ್ನು ಬಳಸುತ್ತಾರೆ.

ತಂಪು ಗದ್ದೆ : ಇದು ಕೆಳಭಾಗದಲ್ಲಿದ್ದು, ಈ ಗದ್ದೆಗಳಲ್ಲಿ ಹೆಚ್ಚು ಅವಧಿಯುಳ್ಳ ಮತ್ತು ನೆರೆಗೆ ತಡೆದುಕೊಳ್ಳುವ ತಳಿಗಳನ್ನು ಬಿತ್ತುತ್ತಾರೆ. ಉದಾ : ನೆರೆಗೂಳಿ, ಕರಿಜೆಡ್ಡು, ಕೆಣೆಸೋಮಸ್ಯಾಲೆ, ನೆಟ್ಟಿಜೆಡ್ಡು ಮುಂತಾದವುಗಳು.

ಮಧ್ಯಗದ್ದೆ : ಈ ಗದ್ದೆಗಳಲ್ಲಿ ಸಾಮಾನ್ಯವಾಗಿ ೫ ರಿಂದ ೫.೫ ತಿಂಗಳಲ್ಲಿ ಬರುವ ತಳಿಗಳನ್ನು ಬಳಸುತ್ತಾರೆ ಹಾಗೂ ಇಲ್ಲಿ ನೀರು ನಿಲ್ಲುವಿಕೆ ತಂಪು ಗದ್ದೆಗಿಂತ ಕಡಿಮೆಯಿರುತ್ತದೆ. ಜೇನುಗೂಡು, ಮದ್ರಾಸ್ ಸಣ್ಣ ಮುಂತಾದ ತಳಿಗಳು ಇಲ್ಲಿಗೆ ಸೂಕ್ತ.

ಮಕ್ಕಿ ಗದ್ದೆ : ಇದು ಸ್ವಲ್ಪ ಎತ್ತರದಲ್ಲಿರುತ್ತದೆ. ಈ ಗದ್ದೆಗಳಲ್ಲಿ ಕಡಿಮೆ ಅವಧಿಯ, ಅಂದರೆ ಸುಮಾರು ೩.೫ ರಿಂದ ೪ ತಿಂಗಳಲ್ಲಿ ಕೊಯಿಲಿಗೆ ಬರುವ ತಳಿಗಳನ್ನು ಬಳಸುತ್ತಾರೆ. ಅವುಗಳೆಂದರೆ ಹಕ್ಲು ಹೊನಸು, ಏಡಿಕುಣಿ, ಬುಡ್ಡಭತ್ತ, ಮಟ್ಟಲಗ ಮುಂತಾದವುಗಳು.

ನೆರೆಯಲ್ಲಿ ಬೆಳೆಯುವ ಭತ್ತಗಳು ರುಚಿಯಾಗಿದ್ದು ಪರಿಮಳದಿಂದ ತುಂಬಿರುತ್ತವೆ. ಹಾಗಾಗಿ ಇವುಗಳ ಬೆಲೆಯು ಬೇರೆ ಅಕ್ಕಿಗಳಿಗಿಂತ ಹೆಚ್ಚಿರುತ್ತದೆ. ಸಾಮಾನ್ಯವಾಗಿ ಕಜ್ಜಾಯ, ಕಡುಬು, ದೋಸೆ, ಉಪ್ಪಿಟ್ಟು, ಗಂಜಿ ಮಾಡಲು; ವಿಶೇಷವಾಗಿ ಬೆಳ್ಳಕ್ಕಿ ಮಾಡಲು ಬಳಸುತ್ತಾರೆ. ಗೋವಾ, ಕೇರಳಕ್ಕೆ ಹೆಚ್ಚಾಗಿ ಮಾರಾಟವಾಗುತ್ತದೆ.




ನೆರೆಭತ್ತದ ವೈವಿಧ್ಯ

ಔಷಧೀಯ ಭತ್ತದ ತಳಿಗಳು

ಕರ್ನಾಟಕ ಔಷಧೀಯ ಭತ್ತದ ತಳಿಗಳ ತವರು. ಖಾನಾಪುರದ ಕರಿ ಗಜಿವಿಲಿ, ಬೀದರ್ ಜಿಲ್ಲೆಯ ಕರಿ ಕಳವಿ, ಕಪ್ಪು ಮಣ್ಣಿನಲ್ಲಿ ಬೆಳೆಯುವ ಚಿಟಗ, ಹೊನಸು ತಳಿಗಳು ಸ್ಥಳೀಯವಾಗಿ ಔಷಧಿಯುಕ್ತ ಅಕ್ಕಿಯಾಗಿ ಬಳಕೆಯಲ್ಲಿವೆ.

ಅತಿಕರಯ: ಇದು ಮೂಲ ತಳಿಗಳಲ್ಲಿ ಒಂದು. ಸತ್ಯದ ಬೆಳೆ ಎಂದು ಪ್ರಚಲಿತ. ಅಂದರೆ, ಈ ಭತ್ತವನ್ನು ಕೈಯಲ್ಲಿ ಹಿಡಿದು ಸತ್ಯಪ್ರಮಾಣ ಮಾಡುವ ಪದ್ಧತಿಯಿದೆ. ಭೂತದ ಪೂಜೆಗೆ ಬಹು ಪ್ರಶಸ್ತವಾದ ತಳಿ. ಅಕ್ಟೋಬರ್‌ನಲ್ಲಿ ಬೀಜ ಹಾಕಿ ನೇಜಿ ಮಾಡಿಟ್ಟುಕೊಂಡರೆ ೧೨೦ ದಿವಸದಲ್ಲಿ ಇಳುವರಿ ಸಿಗುತ್ತದೆ. ಕಾಲ ತಪ್ಪಿ ನಾಟಿ ಮಾಡಿದರೆ ಮರುವರ್ಷವೇ ತೆನೆ ಬಿಡುವುದು. ಇದಕ್ಕೆ ಚಳಿ ಬಿದ್ದಷ್ಟೂ ಉತ್ತಮ ಇಳುವರಿ. ಸುಗ್ಗಿ ಭತ್ತದ, ಕೆಂಪುಬಣ್ಣದ ಕಾಳಿನ ತಳಿ. ಇದರ ಕುಚ್ಚಲುಅಕ್ಕಿ ಗಂಜಿಗೆ ಉತ್ತಮ. ರೋಗಿಗಳ ಪಥ್ಯಕ್ಕೆ ಇದರ ಅನ್ನ ತಿನ್ನುವಂತೆ ವೈದ್ಯರು ಶಿಫಾರಸು ಮಾಡುತ್ತಾರೆ. ಭತ್ತ ಹಳತಾದಷ್ಟೂ ಔಷಧೀಯ ಬಳಕೆಗೆ ಒಳ್ಳೆಯದು.

ಕಯಮೆ: ಕಲಮ, ಚೊಮನ ಎಂಬ ಹೆಸರುಗಳೂ ಈ ತಳಿಗೆ ಇವೆ. ಇದು ಎತ್ತರ ಬೆಳೆಯುವ ಹಳೆಯ ತಳಿ. ಹೆಚ್ಚು ರುಚಿಕರ. ಗದ್ದೆಗೆ ಹಟ್ಟಿ ಗೊಬ್ಬರದ ಅವಶ್ಯಕತೆ ಕೂಡಾ ಇಲ್ಲ. ಮಳೆ ಹೆಚ್ಚಾಗಿ ಬಿದ್ದಷ್ಟೂ ಇಳುವರಿ ಹೆಚ್ಚು.ಮೂಲವ್ಯಾಧಿ ಶಮನಕ್ಕೆ ದಿವ್ಯೌಷದ.



ದೊಡ್ಡ ಬೈರನೆಲ್ಲು: ಆಂಧ್ರ ಮತ್ತು ತಮಿಳುನಾಡು ಗಡಿಯ ಅಂಚಿನ ಆನೇಕಲ್, ಮಾಲೂರು, ಮುಳುಬಾಗಿಲು ತಾಲ್ಲೂಕುಗಳ ಜನಪ್ರಿಯ ಭತ್ತದ ತಳಿ. ಆನೇಕಲ್ ಭಾಗದಲ್ಲಿ ಇದನ್ನು ದೊಡ್ಡ ಬೈರನೆಲ್ಲು ಎಂದೂ, ಮಾಲೂರು, ಮುಳುಬಾಗಿಲು ಕಡೆ 'ಬೈರವಡ್ಲು' ಎಂದು ಕರೆಯುತ್ತಾರೆ. ಮಳೆ ಆಶ್ರಿತ ಒಣಭೂಮಿಯ ತಗ್ಗು ಪ್ರದೇಶಗಳಲ್ಲಿ ದೊಡ್ಡ ಬೈರನೆಲ್ಲು ಬೆಳೆಯುವ ರೂಢಿ. ಎತ್ತರಕ್ಕೆ ಬೆಳೆಯುವ, ಮಣ್ಣಿನ ಬಣ್ಣದ ಕಾಂಡದ ಈ ತಳಿಯನ್ನು ಅನೇಕ ತಲೆಮಾರುಗಳಿಂದ ಇಲ್ಲಿನ ರೈತರು ಬೆಳೆಯುತ್ತಿದ್ದಾರೆ.

ಮಣ್ಣಿನ ಬಣ್ಣದ ಸಿಪ್ಪೆಯ, ಕೆಂಪು ಅಕ್ಕಿಯ ದೊಡ್ಡ ಬೈರನೆಲ್ಲು ಮನೆಮದ್ದಿಗೆ ಹೆಸರುವಾಸಿ. ತಲಾ ಒಂದು ಕೆ.ಜಿ. ದೊಡ್ಡ ಬೈರನೆಲ್ಲು ಭತ್ತ ಮತ್ತು ರಾಗಿಯನ್ನು ರಾತ್ರಿ ಪೂರ ನೆನೆಸಿ, ಬೆಳಿಗ್ಗೆ ಚೆನ್ನಾಗಿ ರುಬ್ಬಿ ಹಾಲು ತೆಗೆಯಬೇಕು. ಈ ಹಾಲಿಗೆ ಏಲಕ್ಕಿ, ಬೆಲ್ಲ ಸೇರಿಸಿ ಕಾಯಿಸಿದರೆ, ಪಾಕ ಬರುತ್ತದೆ, ಪಾಕವನ್ನು ತಟ್ಟೆಯೊಂದರಲ್ಲಿ ಸುರಿದು ತಣ್ಣಗಾದ ನಂತರ,

ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ. ಔಷಧೀಯ ಹಲ್ವ ಸಿದ್ಧವಾಗುತ್ತದೆ. ಇದು ಎದೆ ನೋವು, ಹೊಟ್ಟೆಉರಿ ಮತ್ತು ರಕ್ತಭೇಧಿ ನಿವಾರಣೆಗೆ ಸಿದ್ಧೌಷದ; ಉಷ್ಣನಿವಾರಕ.

ಕಾಮಾಲೆ ರೋಗ ನಿವಾರಣೆಗೆ ದೊಡ್ಡ ಬೈರನೆಲ್ಲು ಅಕ್ಕಿ ಸಹಕಾರಿ, ಈಚಲು ಮರದ ಬೇರನ್ನು ತಂದು, ಜಜ್ಜಿ ನೀರಿಗೆ ಹಾಕಿ ಚೆನ್ನಾಗಿ ಕುದಿಸಬೇಕು. ಬಸಿದ ನೀರಿಗೆ ದೊಡ್ಡ ಬೈರನೆಲ್ಲು ಅಕ್ಕಿ ಸೇರಿಸಿ, ಗಂಜಿ ಬಸಿಯದೆ ಬೇಯಿಸಿ ಅನ್ನ ಮಾಡಬೇಕು. ಈ ಅನ್ನಕ್ಕೆ ಹಸುವಿನ ತುಪ್ಪ ಹಾಕಿಕೊಂಡು ತಿಂದರೆ ಕಾಮಾಲೆರೋಗ ನಿವಾರಣೆವಾಗುತ್ತದೆ. ಬಿಸಿ ಅನ್ನಕ್ಕೆ ಗಟ್ಟಿ ಮೊಸರು ಹಾಕಿ, ಮೊಸರಿನೊಳಗೆ ಬೆಣಚು ಕಲ್ಲನ್ನಿಟ್ಟು, ಅನ್ನ ಕಲಸಿ ತಿಂದರೆ (ಬೆಣಚು ಕಲ್ಲನ್ನಲ್ಲ!) ಬಿಟ್ಟು ಬಿಟ್ಟು ಬರುವ ಹೊಟ್ಟೆ ನೋವು ಮತ್ತು ಭೇದಿ ಮಾಯವಾಗುತ್ತದೆ.

ಗೊಟ್ಟದಲ್ಲಿ ನೀರು ತುಂಬಿ, ಗೊಟ್ಟದ ಬಾಯಿಗೆ ಕೊಂಚ ಹೊಂಗೆ ಎಣ್ಣೆ, ಒಂದು ಚಮಚ ದೊಡ್ಡ ಬೈರನೆಲ್ಲು ಭತ್ತದ ಕಾಳನ್ನು ಇಟ್ಟು ದನಗಳಿಗೆ ಕುಡಿಸಿದರೆ ಕೆಮ್ಮು ನಿವಾರಣೆಯಾಗುತ್ತದೆ.


ಕರಿಭತ್ತ: ಔಷಧೀಯ ಗುಣವಿರುವ ಕರಿಭತ್ತ ಆಳನೀರಿನ ಭತ್ತದ ತಳಿ. ಒಂದು ತಿಂಗಳು ನೀರಲ್ಲಿ ಮುಳುಗಿದರೂ ಕರಗದೆ ಉಳಿಯುವ ಶಕ್ತಿ ಇದಕ್ಕಿದೆ. ಕರಿಭತ್ತವನ್ನು ಭರಣಿ–ರೋಹಿಣಿ ಮಳೆಯಲ್ಲಿ ಹದನೋಡಿ ಬಿತ್ತುತ್ತಾರೆ. ಇದು ದೀಪಾವಳಿಗೆ ಕೊಯ್ಲಿಗೆ ಬರುತ್ತದೆ. ಕೆಂಪಕ್ಕಿಯ ಕರಿಭತ್ತ ಕುಚುಲಕ್ಕಿಗೆ ಹೆಚ್ಚು ಬಳಕೆಯಾಗುತ್ತದೆ, ಕರಿಭತ್ತದ ಅಕ್ಕಿಯನ್ನು ಹುರಿದು, ಬೆಲ್ಲ ಸೇರಿಸಿ ರುಬ್ಬಿ 'ಕುಚುಲಕ್ಕಿ ಅಣಿ' ಮಾಡುವ ಸಂಪ್ರದಾಯ ಸಾಗರ, ಸೊರಬ ಭಾಗದಲ್ಲಿದೆ. ಇದು ಒಂದು ರೀತಿಯ ಟಾನಿಕ್ ಇದ್ದಂತೆ, ದೇಹ ತಂಪಾಗಿಡುವ ಶಕ್ತಿ ಈ ಭತ್ತಕ್ಕಿದೆ.

ಕರಿಭತ್ತ ಔಷಧಿಯಾಗಿ ಹೆಚ್ಚು ಬಳಕೆಯಲ್ಲಿರುವುದು 'ಸರ್ಪಸುತ್ತು' ನಿವಾರಣೆಗೆ. ಕರಿಭತ್ತವನ್ನು, ಕೆಮ್ಮಣ್ಣು ಮತ್ತು ನಿಂಬೆರಸದಲ್ಲಿ (ನೀರು ಸೇರಿಸದೆ) ಅರೆದು ಗಂಧದ ಥರಾ ಮಾಡಿ 'ಸರ್ಪಸುತ್ತು' ಇರುವ ಭಾಗಕ್ಕೆ ಹಚ್ಚಬೇಕು. ೩ ದಿನಗಳ ಕಾಲ ದಿನಕ್ಕೆ ಎರಡು ಬಾರಿ ಹಚ್ಚಿದರೆ 'ಸರ್ಪಸುತ್ತು' ಸದ್ದಿಲ್ಲದೆ ಮಾಯವಾಗುತ್ತದೆ! ಉಪ್ಪಿಲ್ಲದ ಹುರುಳಿಕಾಳು ರಸ, ಸಪ್ಪೆ ಅನ್ನದ ಪಥ್ಯ ಮೂರುದಿನವೂ ಇರಬೇಕಾದ್ದು ಕಡ್ಡಾಯ. ಚಿಕಿತ್ಸೆಕಾಲದಲ್ಲಿ ಸ್ನಾನಕ್ಕೂ ನಿಷೇದ.


ಕರಿ ಭತ್ತ

ಸಣ್ಣಕ್ಕಿ : ಸಿರ್ಸಿ, ಮುಂಡಗೋಡು ಪ್ರದೇಶಗಳ ನೀರಾವರಿ ಗದ್ದೆಗಳಲ್ಲಿ ಬೆಳೆಯುವ 'ಸಣ್ಣಕ್ಕಿ' ಹೆಸರಿಗೆ ತಕ್ಕಂತೆ ಸಣ್ಣಕಾಳಿನ ಭತ್ತದ ತಳಿ. ಗಂಧ ಸಾಲೆ ಬಿಟ್ಟರೆ ಕನ್ನಡ ನಾಡಿನಲ್ಲಿ ಇದಕ್ಕಿಂತ ಸಣ್ಣ ಕಾಳಿನ ಭತ್ತದ ತಳಿ ಇನ್ನೊಂದು ಇರಲಾರದು. ಹೂ ಬರುವಾಗ ಇಡೀ ಗದ್ದೆ 'ಘಂ' ಎಂದು ಸುವಾಸನೆ

ಸೂಸುತ್ತದೆ. ಪಾಯಸ, ಬಿರಿಯಾನಿ, ಕೇಸರಿಬಾತ್ ಮಾಡಲು ಸಣ್ಣಕ್ಕಿ ಸೂಕ್ತ. ಯಾವತ್ತೂ ಮಾರುಕಟ್ಟೆಯಲ್ಲಿ ಸಣ್ಣಕ್ಕಿಗೆ ಬೆಲೆ ಹೆಚ್ಚು. ಮುಸ್ಲಿಂಬಾಂಧವರು ಬಿರಿಯಾನಿ ಮಾಡಲು ಸಣ್ಣಕ್ಕಿಯನ್ನು ಇಷ್ಟಪಟ್ಟು ಕೊಳ್ಳುತ್ತಾರೆ.



ನಾಲ್ಕು ತಿಂಗಳ ಅವಧಿಯ 'ಸಣ್ಣಕ್ಕಿ' ಔಷಧಿಯ ಗುಣ ಹೊಂದಿದೆ. ಮಕ್ಕಳ ವಾಂತಿ–ಬೇಧಿ ನಿವಾರಣೆಗೆ ಇದರ ಬಳಕೆಯಾಗುತ್ತದೆ. ಸಣ್ಣಕ್ಕಿ ಭತ್ತವನ್ನು ಕಪ್ಪಾಗುವಂತೆ ಹೆಂಚಿನ ಮೇಲೆ ಹುರಿದು, ಪುಡಿಮಾಡಿ. ನವಿಲುಗರಿ ದಿಂಡನ್ನು ಕೂಡ ಅದೇ ರೀತಿ ಕಪ್ಪಾಗುವಂತೆ ಸುಟ್ಟು, ಕರಕಲಾದ ಪುಡಿಯನ್ನು ಸಣ್ಣಕ್ಕಿ ಪುಡಿಯೊಂದಿಗೆ ಮಿಶ್ರಮಾಡಿ, ಜೇನುತುಪ್ಪ ಸೇರಿಸಿ ಚೆನ್ನಾಗಿ ಬೆರಳಿನಿಂದ ತೀಡಿ, ಮಕ್ಕಳಿಗೆ ಕೊಡಿ. ವಾಂತಿ–ಬೇಧಿ ನಿಲ್ಲುತ್ತದೆ.


ಕರಿ ಗಜಿವಿಲಿ:

ಬೆಳಗಾಂವ ಜಿಲ್ಲಾ ಗಡಿ ಭಾಗದಲ್ಲಿ ಕಂಡುಬರುವ ಅನೇಕ ಸಾಂಪ್ರದಾಯಕ ಭತ್ತಗಳಲ್ಲಿ ಕರಿ ಗಜಿವಿಲಿ ಒಂದು ಅಪರೂಪದ ಸುವಾಸನಾಯುಕ್ತ ಭತ್ತ. ಕರಿ ಗಜಿವಿಲಿ ಅನ್ನ ಬಹಳ ಮೃದು ಮತ್ತು ಬೇಗ ಪಚನವಾದರೂ ಹಸಿವೇ ಆಗುವುದಿಲ್ಲ. ಉಂಡ ಕೈಗೆ ತುಪ್ಪ ದಂತಹ ಜಿಗುಟು ಅಂಟು ಕೊಂಡಿರುತ್ತದೆ. ಇದನ್ನು ಹೆರಿಗೆ ಆದ ನಂತರ ಕನಿಷ್ಠ ೩ ತಿಂಗಳು ಸತತ ಉಂಡರೆ ಸದೃಢತೆ ಹಾಗೂ ಹೆಚ್ಚಿನ ಎದೆ ಹಾಲು ಪಡೆಯುತ್ತಾರೆ ಎಂಬ ನಂಬಿಕೆಯಿದೆ. ಈಗಲೂ ಸಹ ಮರಾಠಿ ರೈತರು ಹೆರಿಗೆ ಆದ ಹೆಣ್ಣು ಮಕ್ಕಳು ಗಂಡನ ಮನೆಗೆ ಹೋಗುವಾಗ ಕರಿ ಗಜಿವಿಲಿ ಭತ್ತವನ್ನು ಕಾಣಿಕೆ ರೂಪದಲ್ಲಿ ಕೊಟ್ಟು ಕಳುಹಿಸುವ ಸಂಪ್ರದಾಯ ಪಾಲಿಸುತ್ತಾರೆ. ಇದನ್ನು ಬಾಣಂತಿ ಭತ್ತವೆಂದೂ ಕರೆಯುತ್ತಾರೆ.



ಕರಿ ಕಳವಿ: ಬೀದರ್ ಜಿಲ್ಲೆಯ ತಳಿ.ಕಪ್ಪು ಭತ್ತ. ಗರ್ಭಿಣೆಯರಿಗೆ ಔಷಧಿ ಅಕ್ಕಿಯಾಗಿ ಬಳಕೆ ಯಲ್ಲಿರುವುದು. ಇದರ ಔಷಧೀಯ ಗುಣ ತಿಳಿದವರು ಈ ಭತ್ತವನ್ನು ಇನ್ನೂ ಕಾಯ್ದಿಡಿಸಿದ್ದಾರೆ.

ಅಂಬೆ ಮೊರೆ: ಬೆಳಗಾಂವ ತಾಲೂಕಿನ ಹೆಚ್ಚು ಮಳೆ ಬೀಳುವ ಅನಗೋಳ, ಹಲಗಾ, ಎಳ್ಳೂರ ಭಾಗಗಳ ತಳಿ. ಈ ಸಣ್ಣ ಅಕ್ಕಿಯ ಅನ್ನ ಬಹಳ ಸುವಾಸಿತವಾಗಿದ್ದು, ಊಟಕ್ಕೆ ಅತಿ ಮೃದುವಾಗಿದೆ.




ಕರಿ ಕಳವಿ

ಅಂಬೆ ಮೊರೆಯ ಗಂಜಿ ಅಥವಾ ಅನ್ನವನ್ನು ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಕೊಡುತ್ತಾರೆ. ಇದನ್ನು ಉಂಡಾಗ ಪಚನವು ಸರಾಗವಾಗುತ್ತದೆ. ಅಂಬೆ ಮೊರೆಯ ಅನ್ನ ಗರ್ಭಿಣಿಯರಿಗೆ ಔಷಧಿ. ಇದರ ಬಳಕೆಯಿಂದ ರಕ್ತದ ಒತ್ತಡ ನಿಯಂತ್ರಣವಾಗಿ ಕಾಲು ಬಾಯುವುದು ಕಡಿಮೆಯಾಗುತ್ತದೆ.

ಈ ಅಕ್ಕಿಗೆ ಗಂಜಿ ಹೆಚ್ಚಾಗಿದ್ದು ಉಂಡಾಗ ಕೈಗೆ ಜಿಗುಟು ಜಿಗುಟಾದ ಅನುಭವವಾಗುತ್ತದೆ.

ಅಂಬೆಮೊರೆ ಅಕ್ಕಿ



ಉಪ್ಪು ನೀರಿನ ಭತ್ತದ ತಳಿಗಳು

ಕರೀಕಗ್ಗ : ಉಪ್ಪು ನೀರಿನ ಅಂಶವಿರುವ ಅಂದರೆ ಗಜನಿ ಪ್ರದೇಶದಲ್ಲಿ ಬೆಳೆಯುವ ತಳಿ. ಮೇ ಕೊನೆ, ಜೂನ್ ಮೊದಲ ವಾರದವರೆಗೂ ಸಮುದ್ರದ ಉಪ್ಪು ನೀರು ಭರತದ ಸಮಯದಲ್ಲಿ ಬಂದು ಇಳಿತದಲ್ಲಿ ಪರತ್ ಹೋಗುತ್ತದೆ. ಇಂಥ ಜಮೀನಿನಲ್ಲಿ ಕರೀಕಗ್ಗ ಬೆಳೆಯುತ್ತಾರೆ. ದಪ್ಪ, ಉದ್ದದ ಈ ಭತ್ತದ ತುದಿಯಲ್ಲಿ ಸುಂಕು ಇರುತ್ತದೆ. ಇದನ್ನು ಕುಚ್ಚಿಲು ಅಕ್ಕಿ (ಬಾಯ್ಲ್ಡ್ ರೈಸ್)ಗಾಗಿ ಉಪಯೋಗಿಸುತ್ತಾರೆ. ಈ ಕೃಷಿಗೆ ಹೆಚ್ಚಿನ ಖರ್ಚಿಲ್ಲ. ಕೇವಲ ಮನುಷ್ಯಶ್ರಮ ಮಾತ್ರ.

ಬಿಳೀ ಕಗ್ಗ : ಕಡಿಮೆ ಉಪ್ಪು ನೀರಿನ ಪ್ರದೇಶದ ಭಾಗದಲ್ಲಿ ಬೆಳೆಯುವ ಬೆಳೆ. ಅಕ್ಕಿ ಸ್ವಲ್ಪ ಬೆಳ್ಳಗೆ. ಹುಲ್ಲು ಗೊಬ್ಬರಕ್ಕಾಗಿಯೇ ಉಪಯೋಗವಾಗುತ್ತದೆ.

ಕುಮಟ, ಅಂಕೋಲ, ಕಾರವಾರ ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ಚೌಳು ನೀರಿನ ಭತ್ತದ ತಳಿಗಳು

ಮುಳ್ಳು ಭತ್ತ: ಕೂಡ್ಲಿಗಿ ಭಾಗದ ತಳಿ. ವಿಶೇಷವಾದ ಸಿಹಿರುಚಿ ಇರುತ್ತದೆ.

ತೋಕ ವಡ್ಲು : ಮಾಲೂರು, ಮಧುಗಿರಿ ಭಾಗದ ಚೌಳು ನೀರಿನ ಗದ್ದೆಗಳಲ್ಲಿ ಬೆಳೆಯುವ ಭತ್ತ. ಮೀಸೆಭತ್ತ ಎಂಬ ಹೆಸರಿದೆ.

ಕಾರಸ ಮುಂಡೊಡ್ಲು: ಮೊಳಕಾಲ್ಲೂರಿನ ಕರಲು ಮಣ್ಣಿನಲ್ಲಿ ಬೆಳೆಯುವ ಭತ್ತ.

ಕರಿಹೂಗ ನೆಲ್ಲು: ಮಾಲೂರಿನ ಮಾಸ್ತಿ ಭಾಗದ ತಳಿ. ಕಡಿಮೆ ಮಳೆಗೂ ಬೆಳೆಯುತ್ತದೆ.

ಕೆರೆ, ಕುಂಟೆ, ಒಡ್ಡುಗಳ ಹಿನ್ನೀರಿನ ಭತ್ತದ ತಳಿ

ನೀರು ಮುಳುಗಣ ಭತ್ತ: ಐದರಿಂದ ಐದೂವರೆ ತಿಂಗಳ ಆಳ ನೀರಿನ ತಳಿ. ಹೆಸರೇ ಹೇಳುವಂತೆ ನೀರಲ್ಲಿ ಮುಳುಗಿ ಬೆಳೆಯುವ ಭತ್ತದ ತಳಿ. ಕೆರೆ, ಕುಂಟೆ, ಒಡ್ಡುಗಳ ಹಿನ್ನೀರಿನ ಪ್ರದೇಶಗಳಿಗೆ ಸೂಕ್ತವಾದ ತಳಿ. ಜೂನ್ ಎರಡನೆಯ ವಾರದ ಮುಂಗಾರಿನ ಮಳೆಗೆ ಬಿತ್ತನೆ ಮಾಡಿದರೆ, ಮಳೆಯ ನೀರಿನ ಪ್ರಮಾಣ ಏರಿದಂತೆಲ್ಲಾ ಈ ಭತ್ತದ ತಳಿ ಕೂಡ ನೀರ ಮೇಲೆ ಬೆಳೆಯುತ್ತಾ ಹೋಗುತ್ತದೆ. ಏನಿಲ್ಲವೆಂದರೂ, ಆರು ಅಡಿ ಬೆಳೆಯುತ್ತದೆ. ಉದ್ದನಾದ ತೆನೆಗಳು ನೀರಮೇಲೆ ತೂಗುತ್ತಿರುತ್ತವೆ. ಆನೇಕಲ್ ಪ್ರದೇಶದ ಸುತ್ತಮುತ್ತ ಬೆಳೆಯುತ್ತಿದ್ದ ಈ ತಳಿ ನಾಶದ ಅಂಚಿನಲ್ಲಿದೆ.

ವಿವಿಧ ಭತ್ತದ ತಳಿಗಳು

ಉತ್ತರ ಕನ್ನಡ

೧. ಪರಿಮಳ ಸಣ್ಣಭತ್ತ
೨. ಬಿಳಿ ಅಕ್ಕ
೩. ದಡದ ಕೊರಮ
೪. ಕಡೂರು
೫. ಹೊನ್ನುಸುಂಗ
೬. ಕವಡೇ ದೊಡ್ಡಿ
೭. ಹೊಲ ಮುರುಡಗ
೮. ಕುಂಬಾರ ಕೇಸರಿ
೯. ಕೇಡಿಭತ್ತ
೧೦. ಕೆಸರು ಬೀರ
೧೧. ಸಾಲು ಭತ್ತ
೧೨. ಬಿಳಿಸಣ್ಣ

ಶಿವಮೊಗ್ಗ, ಸಾಗರ

೧. ಕೆಂಪುದಡಿ
೨. ಕರೆಕಣ್ ಹೊನಸು
೩. ಕುಂಕುಮ ಕೇಸರಿ
೪. ಅಕ್ಕಾಳು
೫. ಅಲ್ಲು ಹೊನಸು
೬. ಆಲೂರು ಸಣ್ಣ
೭. ತಡಿಕುಣಿ
೮. ಕರೇಕಂಟಕ
೯. ಕರೇಕಲ್ ದಡಿಗ
೧೦. ಕರೆಕಣ್ ಹೊನಸು
೧೧. ಕರಿ ಎಸಡಿ
೧೨. ಕೆಂಪುದಡಿ ಬುಡ್ಡ
೧೩. ಕೆಂಪುದಡಿ ಗೊಟ್ಟಿಗ
೧೪. ಕೊದ್ದಿಗ್ಗೆ
೧೫. ಚಿಕ್ಕಸಾಲೆ
೧೬. ಚಿಟಗ
೧೭. ಚಿಳಗ
೧೮. ಚೊಳ್ಳ ಭತ್ತ
೧೯. ತೊಗರಿನ ಭತ್ತ
೨೦. ನೀರು ಗಿಳ್ಜಿಗ
೨೧. ನೆಟ್ಟಿ ಜೆಡ್ಡು
೨೨. ನೆಟ್ಟಿ ಹಳಗ
೨೩. ಪದ್ಮರೇಖಾ
೨೪. ಬಂಗಾರ ಕಡ್ಡಿ
೨೫. ಬಂಗಾರ ಗುಂಡು
೨೬. ಬಿಳಿ ಇಸಡಿ
೨೭. ಬಿಳಿದಡಿ ವಾಳ್ಯ
೨೮. ಬುಳ್ ಬುಳಿ
೨೯. ಮಲ್ಲಿಗೆ ಸಣ್ಣ
೩೦. ಮಳ್ಳಿಗ್ಗ
೩೧. ಮುಸಳ್ಳಿ
೩೨. ಮುಟ್ಟಳಗ
೩೩. ಮುಳ್ಳುಭತ್ತ
೩೪. ಮುಳ್ಳಾರೆ ಭತ್ತ
೩೫. ರಾಜಮಣಿ
೩೬. ಸಂಪಗಿ ದಳ
೩೭. ಸೋರುಸಾರೆ
೩೮. ಹಕ್ಲೆ ಹೊನಸು
೩೯. ಹೊನ್ನೇಕಟ್ಟು

ಬಿಜಾಪುರ

೧. ಕರಿನೆಲ್ಲು
೨. ಉತ್ತರಿನೆಲ್ಲು
೩. ಕೆಂಪು ಜವಾರಿ

ಬೀದರ್

೧. ಬಂಗಾರ ಕಳವಿ
೨. ಹಸಿರು ಕಳವಿ
೩. ಒಣ ಮಲ್ಲಿಗೆ

ಶಿವಮೊಗ್ಗ ಜಿಲ್ಲೆಯ ಕಣ್ಮರೆಯಾದ ತಳಿಗಳು

೧. ಬಣ್ಣಸಾಲೆ
೨. ಬಾಳೇಸುಳಿ
೩. ಬಿಳಿಮಂದಾಕರ
೪. ಕೆಂಪುಮಂದಾಕರ
೫. ಕವಡೆದೊಡ್ಡಿ
೬. ಹುನಕಲು ಮರಡಿಗ
೭. ಪುಟ್ಟ ಹೆಗ್ಗ
೮. ಚಾಳಿ ಭತ್ತ
೯. ಮರಡಸಡಿ
೧೦. ಚಕ್ಕಲಿಭತ್ತ
೧೧. ಸಲಾಕಿ ಸಣ್ಣ
೧೨. ದಾಸರ ಸಣ್ಣ
೧೩. ಗೌರೀಸಣ್ಣ
೧೪. ಜಂಗಲಿಭತ್ತ

ಹಳೆಮೈಸೂರು

೧. ದೊಡ್ಡ ಭತ್ತ
೨. ಜೋಳ ಮಲ್ಲಿಗೆ
೩. ಪುನುಗುರಾಜ
೪. ಹೊಟ್ಟೆಕೆಂಬತ್ತಿ
೫. ಅರಸಿನ ಕೆಂಬತ್ತಿ
೬. ಮುರಾರ ಜಿಲ
೭. ಯಾಲಕ್ಕಿ ರಾಜ
೮. ಚಿನ್ನ ಸರಿಗೆ
೯. ಗಂಧಸರಿಗೆ
೧೦. ಜೀರಿಗೆಸಣ್ಣ
೧೧. ಹಳದಿ ಸಣ್ಣ
೧೨. ಭಂಗಾರ ಕಡ್ಡಿ
೧೩. ಮುರುಡಗ
೧೪. ಅರಸಿನ ಸಣ್ಣ

ಕೋಲಾರ


೧. ದೊಡ್ಡ ಕೆಂಬತ್ತಿ
೨. ಸಣ್ಣ ಕೆಂಬತ್ತ
೩. ಹರಿಸಿನ ಕೆಂಬತ್ತಿ
೪. ಪುಟ್ಟಭತ್ತ
೫. ತೋಕೆ ನೆಲ್ಲು
೬. ದಿಲ್ಲಿ ಭೊಗ
೭. ಹಾರಕ ರಾಜ
೮. ನವಪಸಂದು

ತುಮಕೂರು

೧. ಬಿಳಿಸಣ್ಣ
೨. ಕಿಚನ್ನಂಗಿ
೩. ಬಿಳಿ ಚೆನ್ನಂಗಿ
೪. ಪುಟ್ಟರಾಜ
೫. ಮರಳು ಕಾಂತಿ
೬. ಕೆಂಬೂತಿ
೭. ಗರಡ ಕೆಂಬೂತಿ
೮. ಕಪಿಲೆ ಸಣ್ಣ
೯. ಗರಿಕೇಸಣ್ಣ

ಹಾಸನ

೧. ಹಸಡೆ
೨. ಜೋಳ ಮಲ್ಲಿಗೆ
೩. ಕಿರುಸಣ್ಣ
೪. ಚಿಕಿಗ
೫. ಕೇಸರಿ
೬. ಮಂದಾರ
೭. ಭರದೊಡ್ಡಿ.



ರಾಗಿ ತಳಿ ವೈವಿಧ್ಯ

ದಕ್ಷಿಣ ಕರ್ನಾಟಕದ ಖುಷ್ಕಿ ಭೂಮಿಗಳಲ್ಲಿ ಬೆಳೆಯುವ ಪೈರುಗಳಲ್ಲಿ ರಾಗಿಗೆ ಮೊದಲನೆ ಸ್ಥಾನ. ಹಳೆ ಮೈಸೂರು ಪ್ರಾಂತ್ಯದ ರೈತರಿಗೆ ಅನ್ನ ಇಲ್ಲದಿದ್ದರೂ ನಡೆದೀತು. ಮುದ್ದೆ ಇರಲೇಬೇಕು. ದನದ ಮೇವಾಗಿ ರಾಗಿ ಹುಲ್ಲು ಬೇಕೇ ಬೇಕು.

ರಾಗಿಯ ಬಣ್ಣ ಸಾಮಾನ್ಯವಾಗಿ ಕೆಂಪು ಇಲ್ಲವೆ ಕಪ್ಪು. ಬಿಳಿ ಬಣ್ಣದ ಕಾಳಿನ ತಳಿಗಳೂ ಉಂಟು. ಕೆಲವು ಪ್ರದೇಶಗಳಲ್ಲಿ ಮೂರನ್ನೂ ಬೆರಸಿ ಬಿತ್ತುತ್ತಾರೆ. ಅಂಬಲಿ, ರೊಟ್ಟಿ, ಮುದ್ದೆ, ದೋಸೆ, ಕಡುಬು, ಹುರಿಯಿಟ್ಟು ಇಡ್ಲಿ ಮಾಡಲು ರಾಗಿ ಬಳಕೆಯಾಗುತ್ತದೆ. ಎಳೆಯ ಮಕ್ಕಳ ಆಹಾರ ತಯಾರಿಕೆಯಲ್ಲಿ ರಾಗಿ ಪ್ರಮುಖವಾಗಿ ಬೇಕು.

ರಾಗಿಯಲ್ಲಿ ಒಣಭೂಮಿ ಮತ್ತು ನೀರಾವರಿ–ಎರಡಕ್ಕೂ ಸೂಕ್ತವಾಗಬಲ್ಲ ತಳಿಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಳೆ ಆಶ್ರಿತ ರಾಗಿಯನ್ನು ದೊಡ್ಡಹಸಲೆ ಮಳೆಗೆ (ಜುಲೈ ಮೊದಲವಾರ) ಬಿತ್ತನೆ ಮಾಡಿ ನವೆಂಬರ್ ಕೊನೆಯವಾರ ಕುಯಿಲು ಮಾಡುತ್ತಾರೆ. ಮೊದಲನೆಯ ಮಳೆ ಬಿದ್ದ ನಂತರ ಭೂಮಿಯನ್ನು ಹದಮಾಡಿ ಗೊಬ್ಬರ ಹಾಕಿ, ರಾಗಿಯನ್ನು ಕೂರಿಗೆಯಿಂದ ಆರು ಅಂಗುಲ ಅಂತರವಾದ ಸಾಲಿನಲ್ಲಿ ಬಿತ್ತುತ್ತಾರೆ. ಬೀಜಗಳೆಲ್ಲಾ ಮಣ್ಣಿನಿಂದ ಮುಚ್ಚುವ ಹಾಗೆ ತಿರುಮರವನ್ನು ಹೊಡೆದು, ಪೈರು ಸ್ವಲ್ಪ ಬೆಳೆದಾಗ ಎಡೇಕುಂಟೆಯನ್ನು ಹೊಡೆಯುತ್ತಾರೆ. ನಾಲ್ಕೈದು ತಿಂಗಳಲ್ಲಿ ರಾಗಿ ಕುಯಿಲಿಗೆ ಬರುವುದು. ಕೆಂಪು ಮಣ್ಣು ರಾಗಿ ಬೆಳೆಗೆ ಸೂಕ್ತ.


ಮಂಡ್ಯ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆರೆ ಆಶ್ರಿತ ನೀರಾವರಿಯಲ್ಲಿ ರಾಗಿಯನ್ನು ಬೇಸಿಗೆ ಬೆಳೆಯಾಗಿ ಬೆಳೆಯುತ್ತಾರೆ. ಇದಕ್ಕೆ 'ನಾಟಿರಾಗಿ' ಎಂದು ಹೆಸರು. ಪುಷ್ಯಮಾಸದಲ್ಲಿ ಕಾಳನ್ನು ಒಟ್ಟು ಹೊಯ್ದು, ಮಾಘಮಾಸದ ಆರಂಭದಲ್ಲಿ ನಾಟಿ ಮಾಡಬೇಕು. ಈ ಬೆಳೆ ಮೂರು ತಿಂಗಳಿಗೆ ಕುಯಿಲು ಬರುತ್ತದೆ.

ಶಿರಾ, ಮಧುಗಿರಿ ತಾಲ್ಲೂಕುಗಳಲ್ಲಿ ಭರಣಿ ಮಳೆಯಲ್ಲಿ ಸಸಿ ಬೆಳೆಸಿ, ನಾಟಿ ಮಾಡಿ ಗೌರಿ ಹಬ್ಬ ಮುಗಿಸಿಕೊಂಡು ಕಟಾವು ಮಾಡುತ್ತಾರೆ.

ಸುಗ್ಗೀ ಕಾಲವಾದ ಮೇಲೆ ಬರುವ ರಾಗಿಯಹುಲ್ಲು ಹಾಲು ಕರೆಯುವ ದನಗಳಿಗೆ ಒಳ್ಳೆಯ ಮೇವಾಗಿ ಬಳಕೆಯಾಗುತ್ತದೆ.


ಸಾಲು ಬೆಳೆ, ಮಿಶ್ರ ಬೆಳೆ ಪದ್ಧತಿಯನ್ನು, ನೂರೆಂಟು ತರಹದ ನಂಬಿಕೆ, ಕೃಷಿ ಆಚರಣೆಗಳನ್ನು ಪೋಷಿಸುತ್ತಿರುವ ರಾಗಿ ಬಯಲುಸೀಮೆ ರೈತರ ಪಾಲಿಗೆ ಬಂಗಾರ.

ರಾಗಿಯ ತಳಿಗಳು



ಕೋಣ ಕೊಂಬಿನ ರಾಗಿ: ಕೋಣನ ಕೊಂಬಿನಂತೆ ಉದ್ದನಾದ ಇಣುಕುಗಳನ್ನು ಹೊಂದಿರುವ ಈ ರಾಗಿ, ಬಯಲು ಸೀಮೆಯ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ ಮತ್ತು ಆಂಧ್ರದ ಅನಂತಪುರ ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದ ನೀರಾವರಿ ತಳಿ. ನಾಲ್ಕೂವರೆ ತಿಂಗಳ ಅವಧಿಗೆ ಕುಯಿಲಿಗೆ ಬರುವುದು. ಬೇಸಿಗೆ ಬೆಳೆಯಾಗಿ ಬೆಳೆಸಲು ಸೂಕ್ತ. ಕಾಳುಗಳು ಗಟ್ಟಿಯಾಗಿವೆ. ಇದರ ಹಿಟ್ಟಿನಿಂದ ರೊಟ್ಟಿ ಮತ್ತು ಮುದ್ದೆ ಮಾಡಿದರೆ ಹೆಚ್ಚು ರುಚಿ. ಒಳ್ಳೆಯ ಹುಲ್ಲಿನ ಇಳುವರಿ ನೀಡುತ್ತದೆ. ಕಾಳಿನ ಇಳುವರಿ ಸಾಧಾರಣ.


ಮಿಟ್ಟಾರಾಗಿ: ನಾಲ್ಕು ತಿಂಗಳ ಮಧ್ಯಮಾವಧಿಯ, ಗುಂಡು ತೆನೆಯ ತಳಿ. ಮಳೆ ಆಶ್ರಿತ ಒಣಭೂಮಿಗೆ ಸೂಕ್ತವಾದ ತಳಿ. ಕೀಟ ಮತ್ತು ರೋಗ ಬಾಧೆ ಕಡಿಮೆ. ಬರಗಾಲ ಎದುರಿಸುವ ಸಾಮರ್ಥ್ಯ ಇದೆ. ಒಳ್ಳೆಯ ಹುಲ್ಲು ಮತ್ತು ಕಾಳಿನ ಇಳುವರಿ ಕೊಡುತ್ತದೆ.



ಕರಿಕಡ್ಡಿ ರಾಗಿ: ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ತುಮಕೂರು ಜಿಲ್ಲೆಯ ಜನಪ್ರಿಯ ರಾಗಿ ತಳಿ. ಅಧಿಕ ಇಳುವರಿ ತಳಿಗಳ ಅಬ್ಬರಕ್ಕೆ ಸಡ್ಡು ಹೊಡೆದು ನಿಂತಿರುವ ಈ ದೇಸೀಯ ತಳಿ ಆಹಾರದ ಗುಣಮಟ್ಟ ಮತ್ತು ಜಾನುವಾರುಗಳ ಮೇವಿಗೆ ಹೆಸರುವಾಸಿ. ಮಳೆ ಆಶ್ರಿತ ಪ್ರದೇಶಗಳಿಗೆ ಸೂಕ್ತ. ಹೆಚ್ಚು ತೆಂಡೆ ಹೊಡೆಯುತ್ತದೆ. ಮಳೆಯ ವೈಪರೀತ್ಯ ಮತ್ತು ಕೀಟಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿದೆ. ಸಾವಯವ ಕೃಷಿಗೆ ಒಗ್ಗಿಕೊಳ್ಳಬಲ್ಲ ಸದೃಢ ತಳಿ. ನಾಲ್ಕೂವರೆ ತಿಂಗಳ ಅವಧಿಗೆ ಕುಯಿಲಿಗೆ ಬರುವುದು.

ಜೇನುಗೂಡು ರಾಗಿ: ಮೂರೂವರೆ ತಿಂಗಳ ಮಧ್ಯಮಾವಧಿ ತಳಿ. ನೀರಾವರಿ ಮತ್ತು ಒಣಭೂಮಿ ಎರಡಕ್ಕೂ ಸೂಕ್ತವಾದುದು. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ ಕೀಟ ಮತ್ತು ರೋಗಬಾಧೆ ತಡೆದುಕೊಳ್ಳಲಾರದು. ಸಣ್ಣ ಕಾಳಿನ ತಳಿ.

ಮಧ್ಯಮ ರಾಗಿ: ಮೂರೂವರೆ ತಿಂಗಳ ಅವಧಿಯ ತಳಿ. ಸಾಧಾರಣ ಎತ್ತರಕ್ಕೆ ಬೆಳೆವ ಈ ತಳಿ ಮಳೆ, ಗಾಳಿಗೆ ಬೀಳುವುದಿಲ್ಲ. ಮುಚ್ಚಿದ ಗುಂಡು ತೆನೆಯ ಈ ತಳಿ ರೋಗ ಮತ್ತು ಬರ ನಿರೋಧಕ ಗುಣ ಹೊಂದಿದೆ. ಒಳ್ಳೆಯ ಇಳುವರಿ ಕೊಡುತ್ತದೆ. ಕುಯಿಲು ನಿಧಾನ ವಾದರೂ ಕಾಳು ಉದುರುವುದಿಲ್ಲ.


ಮಧ್ಯಮ ರಾಗಿ

ಕರಿ ಬುಂಡುಗ: ಬಿಳಿಗಿರಿರಂಗನ ಬೆಟ್ಟ ಸಾಲಿನಲ್ಲಿ ಕಾಣಸಿಗುವ ನಾಲ್ಕು ತಿಂಗಳ ಅವಧಿಯ, ಮಳೆ ಆಶ್ರಿತ ತಳಿ. ಕಾಳು ಬಲಿಯುವ ಹಂತದಲ್ಲಿ ತೆನೆಗಳು ಆಕರ್ಷಕ ಕೆನ್ನೀಲಿ ಬಣ್ಣ ಹೊಂದಿರುತ್ತವೆ. ಗುಂಡು ತೆನೆಯ ಈ ತಳಿ, ಕಾಳು ಮತ್ತು ಹುಲ್ಲಿನ ಇಳುವರಿಗೆ ಹೆಸರುವಾಸಿ.

ಕುರುಬ ರಾಗಿ: : ಬಳ್ಳಾರಿ ಪ್ರದೇಶದ ತಳಿ. ಮುಚ್ಚಿದ ಗುಂಡುತೆನೆ. ರೋಗ ಮತ್ತು ಕೀಟ ನಿರೋಧಕ ಗುಣ ಹೊಂದಿದೆ. ಸಾಧಾರಣ ಎತ್ತರಕ್ಕೆ ಬೆಳೆವ ಈ ತಳಿ ಒಳ್ಳೆಯ ಕಾಳಿನ ಇಳುವರಿ ನೀಡುತ್ತದೆ.


ಅಯ್ಯನ ರಾಗಿ: ಹಳೆ ಮೈಸೂರು ಪ್ರಾಂತ್ಯದ ಮಂಡ್ಯ, ಮೈಸೂರು ಜಿಲ್ಲೆಗಳ ಜನಪ್ರಿಯ, ಮಳೆ ಆಶ್ರಿತ ತಳಿ. ಈಗ ಅಪರೂಪವಾಗಿದೆ. ತೆರೆದ ತೆನೆಯ, ಉದ್ದನಾದ ಇಣುಕುಗಳ ಈ ತಳಿಗೆ ಇಣುಕು ರೋಗದ ಹಾವಳಿ ಜಾಸ್ತಿ. ಎದೆಮಟ್ಟ ಬೆಳೆವ ಈ ತಳಿ ಮಳೆ ಗಾಳಿಗೆ ನೆಲಕ್ಕೆ ಬೀಳುತ್ತದೆ. ಅಯ್ಯನರಾಗಿಯ ಹುಲ್ಲು ದನಕರುಗಳಿಗೆ ಅಚ್ಚುಮೆಚ್ಚು. ಕಾಳಿನ ಇಳುವರಿಯೂ ಅತ್ಯುತ್ತಮ. ಆಹಾರದ ಗುಣಮಟ್ಟ ಉತ್ಕೃಷ್ಟ. ಅಯ್ಯನರಾಗಿಯ ಗಟ್ಟಿ ಮುಟ್ಟಾದ ಮುದ್ದೆ ಎಲ್ಲರಿಗೂ, ಅದರಲ್ಲೂ ಶ್ರಮಿಕರಿಗೆ ಒಳ್ಳೆಯ ಆಹಾರ. ಇದು ಐದು ತಿಂಗಳ ದೀರ್ಘಾವಧಿ ತಳಿ.


ಕೆಂಪುರಾಗಿ

ಕೆಂಪು ರಾಗಿ: ನಾಲ್ಕೂವರೆ ತಿಂಗಳ ಅವಧಿಯ ಕೊಳ್ಳೆಗಾಲ ಪ್ರದೇಶದ ಮಳೆ ಆಶ್ರಿತ ತಳಿ. ವಾರ ಗಟ್ಟಲೆ ಜಡಿಮಳೆ ಹಿಡಿದರೂ ತಡೆಯುತ್ತದೆ. ಹುಲ್ಲಿನ ಇಳುವರಿ ಉತ್ತಮ; ರುಚಿಯೂ ಹೆಚ್ಚು.ಕೆಂಪಾದ ತೆನೆಗಳು ಈ ತಳಿಯ ವಿಶೇಷ.


ಮೂರು ತಿಂಗಳ ರಾಗಿ: ಮೂರು ತಿಂಗಳ ಅಲ್ಪಾವಧಿ ತಳಿ. ಮಳೆ ಕಣ್ಣಾಮುಚ್ಚಾಲೆಯಾಡುವ ಪ್ರದೇಶಗಳಿಗೆ ಸೂಕ್ತವಾದುದು. ಒಂದೆರಡು ಮಳೆ ಕೈಕೊಟ್ಟರೂ ಒಣಗದೆ ಬೆಳೆಯುತ್ತದೆ. ಸಾಧಾರಣ ಎತ್ತರ ಬೆಳೆವ ಈ ತಳಿಯ ಕಾಳು ಮತ್ತು ಹುಲ್ಲಿನ ಇಳುವರಿ ಸಾಧಾರಣ.

ಮಾದಯ್ಯನಗಿರಿ ರಾಗಿ: ಹಳೆಯ ಮೈಸೂರು ಪ್ರಾಂತ್ಯದಲ್ಲಿ ಜನಪ್ರಿಯವಾಗಿದ್ದ ತಳಿ. ಈಗ ನೋಡಲು ಸಿಗುವುದು ಕೂಡ ಕಷ್ಟ. ನೀಳವಾದ ಇಣುಕುಗಳ, ತೆರೆದ ತೆನೆಯ ತಳಿ. ಎದೆಮಟ್ಟಕ್ಕೆ ಬೆಳೆಯುತ್ತದೆ. ಮಳೆ ಆಶ್ರಿತ ಪ್ರದೇಶಕ್ಕೆ ಸೂಕ್ತವಾದ ಈ ತಳಿ ದನದ ಮೇವಿಗೆ ಹೆಸರುವಾಸಿ. ಕಡಿಮೆ ಇಳುವರಿ ಕೊಡುವ ಈ ತಳಿ ಊಟಕ್ಕೆ ಉತ್ತಮ.


ಬೆಟ್ಟದ ಕೆಳಗಿನ ರಾಗಿ

ಬೆಟ್ಟದ ಕೆಳಗಿನ ರಾಗಿ: ಮಧುಗಿರಿ, ಗೌರಿಬಿದನೂರು ಪ್ರದೇಶದ ಮೂರೂವರೆ ತಿಂಗಳ ಅವಧಿಯ ತಳಿ. ಇದು ಮಳೆ ಆಶ್ರಯದಲ್ಲಿ ಬೆಳೆಯುವಂತಹ ತಳಿಯಾಗಿದ್ದು ನೀರಿನ ಅನುಕೂಲ ಕಡಿಮೆ ಇರುವ ಕಡೆ ಬೆಳೆಯುತ್ತಾರೆ. ಈ ತಳಿಗೆ ರೋಗಗಳ ಭಾಧೆ ಹೆಚ್ಚಾಗಿ ಕಾಣಿಸುವುದಿಲ್ಲ. ಕಾಳು ಮತ್ತು ಹುಲ್ಲಿನ ಇಳುವರಿ ಉತ್ತಮ.

ಪೂರ್ಣರಾಗಿ: ಮಳೆ ಆಶ್ರಿತ ಪ್ರದೇಶಕ್ಕೆ ಸೂಕ್ತವಾದ ಮೂರೂವರೆ ತಿಂಗಳ ಮಧ್ಯಮಾವಧಿ ತಳಿ. ಬರಗಾಲ ಎದುರಿಸುವ ಶಕ್ತಿ ಹೊಂದಿದೆ. ಹೊಳೆಯುವ ಬಣ್ಣದ ಕಾಳುಗಳು ಇದರ ವಿಶೇಷತೆ. ರೋಗ ಮತ್ತು ಕೀಟ ನಿರೋಧಕ. ಕಾಳು ಮತ್ತು ಹುಲ್ಲಿನ ಇಳುವರಿ ಉತ್ತಮ.


ಸಣ್ಣಕಡ್ಡಿ ರಾಗಿ


ಕಪ್ಪು ಗಿಡ್ಡ ರಾಗಿ: ನಾಲ್ಕು ತಿಂಗಳ ಅವಧಿಯ, ಮಧುಗಿರಿ ತಾಲ್ಲೂಕಿನ ನೀರಾವರಿ ತಳಿ. ಕಪ್ಪು ಬಣ್ಣದ ಗುಂಡು ತೆನೆಯ ತಳಿ. ಕಡಿಮೆ ಅಥವಾ ಹೆಚ್ಚು ನೀರನ್ನು ತಡೆಯುವ ಶಕ್ತಿ ಹೊಂದಿದೆ. ಇದರಲ್ಲಿ ಹೊಟ್ಟು ಬಹಳ ಇರುತ್ತದೆ.

ಸಣ್ಣಕಡ್ಡಿ ರಾಗಿ: ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಳೆ ಆಶ್ರಿತ ತಳಿ. ಹೆಚ್ಚು ತೆಂಡೆ ಹೊಡೆಯುತ್ತದೆ. ಎತ್ತರಕ್ಕೆ ಬೆಳೆಯುತ್ತದೆ. ನೀಳವಾಗಿ, ಸಣ್ಣಗಿರುವ ಕಾಂಡ. ದನಗಳಿಗೆ ಒಳ್ಳೆಯ ಮೇವು. ಕಾಳಿನ ಇಳುವರಿ ಸಾಧಾರಣ. ಆದರೆ ರುಚಿಯಲ್ಲಿ ಉತ್ತಮ. ಇಣುಕುರೋಗದ ಬಾಧೆಯಿದೆ. ಹೆಚ್ಚು ಫಲವತ್ತಾದ

ಹೊಲದಲ್ಲಿ ಬಿತ್ತಿದರೆ, ಬೆಳೆದು ಬಿದ್ದು ಹೋಗುತ್ತದೆ. ನಾಲ್ಕೂವರೆ ತಿಂಗಳ ದೀರ್ಘಾವಧಿ ತಳಿ.

ಹಾಲುಕುಳಿ ರಾಗಿ: ನಾಲ್ಕು ತಿಂಗಳ ಅವಧಿಯ, ಕನಕಪುರ ಪ್ರದೇಶದ ಮಳೆ ಆಶ್ರಿತ ತಳಿ. ಉದ್ದನಾದ ಇಣುಕುಗಳ, ತೆರೆದ ತೆನೆಯ ತಳಿ. ಇಣುಕು ರೋಗಕ್ಕೆ ತುತ್ತಾಗುತ್ತದೆ. ಹುಲ್ಲಿನ ಇಳುವರಿ ಮತ್ತು ಗುಣಮಟ್ಟ ಉತ್ತಮ. ಕಾಳಿನ ಇಳುವರಿ ಸಾಧಾರಣ.

ಅಂಗನಮಡ್ಡೆ ರಾಗಿ: ಐದು ತಿಂಗಳ ಅವಧಿಯ, ಗುಂಡುತೆನೆಯ ತಳಿ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕಣ್ಮರೆಯಾದ ತಳಿಗಳ ಸಾಲಿಗೆ ಸೇರುತ್ತದೆ. ಕೊಯ್ಲು ನಿಧಾನವಾದರೆ ಕಾಳು ಉದುರುತ್ತದೆ.



ಹಾಗಲಕೋಟೆ ರಾಗಿ: ನಾಲ್ಕೂವರೆ ತಿಂಗಳ ಅವಧಿಯ ಕನಕಪುರ ಪ್ರದೇಶದ ಮಳೆ ಆಶ್ರಿತ ತಳಿ. ವಾರ ಗಟ್ಟಲೆ ಜಡಿಮಳೆ ಹಿಡಿದರೂ ಎದುರಿಸುವ ಸಾಮರ್ಥ್ಯ ಹೊಂದಿದೆ. ಹುಲ್ಲಿನ ಇಳುವರಿ ಉತ್ತಮ; ರುಚಿಯೂ ಹೆಚ್ಚು. ಈ ತಳಿ ಈಗ ಕಾಣಸಿಗುವುದೇ ಅಪರೂಪ.

ಪಿಚ್ಚಕಡ್ಡಿ ರಾಗಿ: ಹಳೆ ಮೈಸೂರು ಪ್ರಾಂತದ ಜನಪ್ರಿಯ ತಳಿ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾಡುಹಳ್ಳಿಗಳು ಇದರ ತವರೂರು. ನಾಲ್ಕೂವರೆ ತಿಂಗಳ ತಳಿ. ಮೂರರಿಂದ-ನಾಲ್ಕು ತೆಂಡೆಗಳು ಹೊಡೆಯುವುದಲ್ಲದೆ, ಮರಿ ತೊಂಡೆಗಳೂ ಹೊಡೆಯುವುದರಿಂದ ದನಗಳಿಗೆ ಹೆಚ್ಚು ಹುಲ್ಲು ಒದಗುತ್ತದೆ. ಮುಷ್ಟಿರೂಪದ ತೆನೆಗಳು ಗಟ್ಟಿ ಮತ್ತು ಕಪ್ಪುಬಣ್ಣ, ಕಾಳಿನ ಇಳುವರಿ ಉತ್ತಮ. ಅಡಿಗೆ ರುಚಿ ಹೆಚ್ಚಿರುತ್ತದೆ. ಮಧ್ಯಂತರ ಬರಗಾಲಕ್ಕೆ ತಡೆದು, ರೋಗ ನಿರೋಧಕ ಶಕ್ತಿಹೊಂದಿರುತ್ತದೆ. ಸುಧಾರಿತ ತಳಿಗಳ ಎಲ್ಲಾ ಗುಣವಿಶೇಷಗಳನ್ನೂ ಮೀರಿಸುವ ಸಾಮರ್ಥ್ಯ ಇದಕ್ಕಿರುವುದರಿಂದ ರೈತರು ಇಂದಿಗೂ ಈ ತಳಿಯನ್ನು ಬೆಳೆಯುತ್ತಿದ್ದಾರೆ.

ಚೆಂಡು ಹೂ ರಾಗಿ: ಚಿತ್ರದುರ್ಗ ಜಿಲ್ಲೆಯ ಖುಷ್ಕಿ ತಳಿ. ನಾಲ್ಕು ತಿಂಗಳಿಗೆ ಕಟಾವಿಗೆ ಬರುತ್ತದೆ. ಗುಂಡನೆಯ ತೆನೆ. ಒಂದೂವರೆಯಿಂದ ಎರಡು ಅಡಿ ಎತ್ತರಕ್ಕೆ ಬೆಳೆಯುತ್ತದೆ. ಮುಂಗಾರು ತಳಿ.

ಹೈನು ರಾಗಿ: ಮೂರು ತಿಂಗಳ ಬೆಳೆಯಾಗಿರುತ್ತದೆ. ಇದಕ್ಕೆ ನೀರು ಬೇಕೇ ಬೇಕು. ನೀರಿನ ಪ್ರಮಾಣ ಕಡಿಮೆಯಾದರೆ ತಡೆಯುವ ಶಕ್ತಿ ಇರುವುದಿಲ್ಲ. ಈ ತಳಿಯು ಏಪ್ರಿಲ್ ನಿಂದ ಜೂನ್ ವರೆಗೆ ಯಾವಾಗ ಹಾಕಿದರೂ ಬರುತ್ತದೆ.

ಹಸಿರು ಬುಂಡುಗ: ಬೆಟ್ಟ ಪ್ರದೇಶಗಳಿಗೆ ಹೊಂದುವ, ಕೊಳ್ಳೇಗಾಲ ಪ್ರದೇಶದ ಮಳೆ ಆಶ್ರಿತ ತಳಿ. ಒಳ್ಳೆಯ ಇಳುವರಿ ಕೊಡುವ ತಳಿ.

ಬಿಳಿ ಬುಂಡುಗ: ಚಾಮರಾಜನಗರ ಜಿಲ್ಲೆಯ ತಳಿ. ಹೆಚ್ಚಿನ ಮಳೆ ತಡೆಯುತ್ತದೆ.

ದೊಡ್ಡರಾಗಿ: ಕೊಳ್ಳೇಗಾಲ ಪ್ರದೇಶದ ಜನಪ್ರಿಯ ತಳಿ. ಕಹಿಗುಣದ ತೆನೆಗಳು ಕಾಡು ಹಂದಿಯನ್ನು ದೂರವಿಡುತ್ತವೆ. ಕಾಡು ಅಂಚಿನ ಹೊಲಕ್ಕೆ ಉತ್ತಮ. ಒಳ್ಳೆಯ ಕಾಳು ಮತ್ತು ಹುಲ್ಲಿನ ಇಳುವರಿ ಕೊಡುವ ತಳಿ.

ಕಾಲಜ್ಜನ ರಾಗಿ: ಕೊಳ್ಳೇಗಾಲ ಪ್ರದೇಶದ ಮಳೆ ಆಶ್ರಿತ ತಳಿ. ಈಗ ಅಪರೂಪ.

ಎಡಗಾಲು ರಾಗಿ: ಕೊಳ್ಳೇಗಾಲ ಪ್ರದೇಶದ ಮಳೆ ಆಶ್ರಿತ ತಳಿ. ಈಗ ನೋಡಲೂ ಸಿಗದು.

ಜೇನು ಮುತ್ತಿಗೆ: ಕೊಳ್ಳೇಗಾಲದ ಪ್ರದೇಶದ ತಳಿ. ಮುದ್ದೆಗೆ ಸೂಕ್ತ, ಹುಲ್ಲಿನ ಗುಣಮಟ್ಟಕ್ಕೆ ಹೆಸರುವಾಸಿ ಮುಚ್ಚಿದ ಇಲುಕಿನ ತಳಿ. ಹುಲ್ಲಿನ ಗುಣಮಟ್ಟಕ್ಕೆ ಹೆಸರುವಾಸಿ


ಉಂಡೆ ರಾಗಿ: ಅರೆ ಮಲೆ ನಾಡು ಪ್ರದೇಶದ ತಳಿ.

ಗುಂಡನೆಯ ತೆನೆಯ, ಸಾಧಾರಣ ಎತ್ತರದ ತಳಿ. ಕಾಳಿನ ಇಳುವರಿ ಉತ್ತಮ.

ಮಜ್ಜಿಗೆ ರಾಗಿ : ಬಿಳಿಯ ಕಾಳಿನ ಅಪರೂಪದ ತಳಿ. ದೋಸೆ, ಇಡ್ಲಿಗೆ ಸೂಕ್ತ. ಅಲ್ಪಾವಧಿ ತಳಿ. ನೀರಾವರಿಗೆ ಸೂಕ್ತ.

ಹಾಲು ರಾಗಿ : ಬಿಳಿ ಬಣ್ಣದ ತೆನೆಯ, ನೋಡಲು ಆಕರ್ಷಕವಾದ ತಳಿ. ಇಣುಕು ರೋಗದಿಂದ ಸಂಪೂರ್ಣ ಮುಕ್ತ. ಕೊಳ್ಳೇಗಾಲ ಪ್ರದೇಶದ ಮಳೆ ಆಶ್ರಿತ ತಳಿ.

ಜೇನು ಬುಂಡುಗ : ಜೇನುಗೂಡಿನಂತೆ ಒತ್ತಾಗಿ ಕಾಳುಗಳಿರುವ ಕೊಳ್ಳೇಗಾಲ ಪ್ರದೇಶದ ತಳಿ.



ಹಾಲು ರಾಗಿ

ಬೊಂಡಾರಾಗಿ : ಬೆಂಗಳೂರು ಗ್ರಾಮಾಂತರ ಪ್ರದೇಶದ ಮಳೆ ಆಶ್ರಿತ ತಳಿ ಮುಚ್ಚಿದ ಗುಂಡನೆಯ ತೆನೆಗಳು. ತೆನೆಗಾತ್ರದಲ್ಲಿ ಕಿರಿದು ಇಳುವರಿಯಲ್ಲಿ ಹಿರಿದು.

ಕರಿಬಳಗ: ಹಾಸನ, ತಿಪಟೂರುಪ್ರದೇಶದ ತಳಿ, ಮಾಸಲು ಕಪ್ಪು ಬಣ್ಣದ ಕಾಳು. ಬರ ನಿರೋಧಕ.

ಹಸಿರುಕಂಬಿರಾಗಿ: ಎತ್ತರ ಬೆಳೆಯುವ ತೆರೆದ ತೆನೆಯ ಮಳೆ ಆಶ್ರಿತ ತಳಿ ಹುಲ್ಲಿಗಾಗಿ ಹೆಚ್ಚು ಬೆಳೆಸುವ ಪದ್ಧತಿ ಇತ್ತು. ಈಗ ಕಡಿಮೆ ಆಗುತ್ತದೆ.

ಕೋಳಿಮೊಟ್ಟೆರಾಗಿ: ಕೋಳಿಮೊಟ್ಟೆ ಆಕಾರದ ಗುಂಡಾದ ತೆನೆಯ ತಳಿ ಬೆಂಗಳೂರು ಗ್ರಾಮಾಂತರದ ಕಾಡು ಹಳ್ಳಿಗಳಲ್ಲಿ ಬೆಳೆಸುತ್ತಾರೆ. ಉತ್ತಮ ಕಾಳಿನ ಇಳುವರಿ.



ಜೋಳದ ವೈವಿಧ್ಯ

ಖುಷ್ಕಿಯ ಮುಖ್ಯ ಬೆಳೆ. ಜೋಳದಲ್ಲಿ ಉತ್ತರ ಕರ್ನಾಟಕದ ಕಪ್ಪುಮಣ್ಣಿಗೆ ಹೊಂದಿಕೊಂಡ ಅನೇಕ ತಳಿಗಳಿವೆ. ಹಾಗೆಯೇ ಮುಂಗಾರು ಮತ್ತು ಹಿಂಗಾರು ಎರಡೂ ಕಾಲಕ್ಕೆ ಒಗ್ಗುವ ತಳಿಗಳಿವೆ.

ಬಿಳಿ, ಕೆಂಪು ಜೋಳಗಳೆಂದು ಎರಡು ವಿಧ. ಬಿಳಿಯದು ನಾಲ್ಕು ತಿಂಗಳಿನಲ್ಲಿಯೂ ಕೆಂಪುದು ಮೂರೂವರೆ ತಿಂಗಳಿನಲ್ಲಿಯೂ ಕಟಾವಿಗೆ ಬರುತ್ತವೆ. ವೈಶಾಖದಲ್ಲಿ ಭೂಮಿಯನ್ನು ಹದಗೊಳಿಸಿ ಒಂದು ಮಳೆ ಬಿದ್ದ ಒಡನೆ ಬಿತ್ತಬೇಕು. ಇದನ್ನು ಚೆಲ್ಲಿಯಾಗಲೀ ಅಥವಾ ನೇಗಿಲ ಸಾಲಿನಲ್ಲಿಯಾದರೂ ಬಿತ್ತಬಹುದು. ನೇಗಿಲು ಸಾಲಿನ ಅಂತರ ಹನ್ನೆರಡು ಅಂಗುಲವಿರಬೇಕು. ಪಕ್ವವಾದ ತನೆಗಳನ್ನೇ ಕುಯಿದು ಒಕ್ಕಬೇಕು.

ಜೋಳದ ಕಾಳನ್ನು ಹಿಟ್ಟುಮಾಡಿ ಅಡುಗೆಗೆ ಬಳಸಲಾಗುತ್ತದೆ. ಜೋಳದ ರೊಟ್ಟಿ, ಕಡಬು, ದೋಸೆ, ಅಂಬಲಿ ಹೀಗೆ ಹಲವು ರೀತಿಯ ಅಡುಗೆಯಲ್ಲಿ ಜೋಳದ ಹಿಟ್ಟು ಬಳಕೆಯಾಗುತ್ತದೆ.

ದಕ್ಷಿಣ ಕರ್ನಾಟಕದ ಕೆಂಪುಮಣ್ಣಿಲ್ಲಿ ರಾಗಿಯ ಸಾಲು ಬೆಳೆಯಾಗಿ ಜೋಳ ಬೆಳೆಯುವ ಪದ್ಧತಿ ಇದೆ. ತೆರೆದ, ಬಿಡಿಬಿಡಿಯಾದ ಇಣುಕುಗಳ ತೆನೆಯ ಈ ಜೋಳದ ತಳಿಗಳನ್ನು ಮುಖ್ಯವಾಗಿ ದನಗಳ ಮೇವಿಗಾಗಿ ಬೆಳೆಸಲಾಗುತ್ತದೆ. ಕಾಳನ್ನು ರಾಗಿಹಿಟ್ಟಿಗೆ ನುಚ್ಚನ್ನಾಗಿ ಇಲ್ಲವೆ ದನಗಳ ಆಹಾರವಾಗಿ ಬಳಸುತ್ತಾರೆ. ಜೋಳದ ಕಡ್ಡಿ ದನಕರುಗಳಿಗೆ ಇಷ್ಟವಾದ ಮೇವು.

ಮುಂಗಾರು ಜೋಳದ ತಳಿಗಳು

ಹಂದಿಮಾರಿ ಜೋಳ: ಆರು ತಿಂಗಳಲ್ಲಿ ಕಟಾವಿಗೆ ಬರುವ ಹುಬ್ಬಳ್ಳಿ ಪ್ರದೇಶದ ತಳಿ. ಚಪ್ಪಟ ತೆನೆ ಗಾತ್ರದಲ್ಲಿ ಚಿಕ್ಕದು, ಆದರೆ ಕಾಳುಗಳು ಒತ್ತಾಗಿರುತ್ತವೆ, ರೊಟ್ಟಿಗೆ ಉತ್ತಮ ಮೇವು ಬಿರಿಸು

ಪುಲ್ಲಗಾರ: ಆರು ತಿಂಗಳ ಕುಂದಗೊಳ ತಾಲೂಕಿನ ತಳಿ. ತಿಳಿ ಕಪ್ಪು ಬಣ್ಣದ ಕಾಳು, ರೊಟ್ಟಿ ಮತ್ತು ಮೇವು ಬಿರಿಸು

ಗಂಗಾವತಿ ಜೋಳ: ಆರು ತಿಂಗಳ ಕಲಘಟಗಿ ಪ್ರದೇಶದ ತಳಿ, ಟೊಳ್ಳು ಕಾಳು, ರೊಟ್ಟಿ ಮತ್ತು ಮೇವು ಬಿರಿಸು.

ಗಿಡ್ಡ ನಂದ್ಯಾಲ : ಗುಂಡನೆಯ ಬಿಗುವಾದ ತೆನೆ. ತಿನ್ನಲು ರುಚಿ. ಒಳ್ಳೆಯ ಮೇವು.

ಕೆಂಪು ಚವರಿ ಜೋಳ: ಆರು ತಿಂಗಳ ಅವಧಿಯ ಕಲಘಟಗಿ ಪ್ರದೇಶದ ತಳಿ. ಮೇವಿಗೆ ಉತ್ತಮ.

ಕೆಂಜೋಳ : ಗದಗ್, ಕುಷ್ಟಗಿ, ಗಜೇಂದ್ರಗಡ ಭಾಗದ ಮುಂಗಾರು ಜೋಳ. ಹಬ್ಬ-ಹುಣ್ಣಿಮೆಗಳಲ್ಲಿ ಎಳ್ಳು ಹಚ್ಚಿದ ರೊಟ್ಟಿ, ಕಡುಬು, ಪಡ್ಡು, ದೋಸೆ, ಸಂಗಟಿ, ಮುದ್ದೆ ಮುಂತಾದ ಖಾದ್ಯಮಾಡಲು ಉತ್ತಮ. ಅಕ್ಕಡಿ ಕಾಳುಗಳಲ್ಲಿ ಬೆರೆಸಿ ಬಿತ್ತುವ ಪದ್ಧತಿ ಇದೆ. ಯಾಕೆಂದರೆ ಕೆಂಜೋಳದ ತೆನೆ ಸಣ್ಣದು.

'ಹರೆಯದ ಹುಡುಗ ಕೆಂಜೋಳದ ರೊಟ್ಟಿಗೆ ಖಾರ ಮೆಣಸಿನ ಚಟ್ನಿ ಸವರಿ ತಿಂದ್ರ, ಕಂಚ್ಯಾಣದ ಹೋರಿಯಂಗ ಜಟ್ಟಿಗನಾಗತಾನ' ಎಂಬ ಮಾತು ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ.

ಭಗವಂತಿಗೆ ಜೋಳ: ಕುಷ್ಟಗಿ ಭಾಗದ ಮುಂಗಾರಿಜೋಳ. ಗುಂಡನೆಯ ಬಿಗುವಾದ ತೆನೆ, ಬಿಳಿಬಣ್ಣ, ಅಡುಗೆಗೆ ಉತ್ತಮ, ೬ ತಿಂಗಳಲ್ಲಿ ಕುಯಿಲಿಗೆ ಬರುತ್ತದೆ.

ಗಿಡ್ಡ ಜೋಳ : ಮುಂಗಾರಿಜೋಳ, ಎದೆ ಮಟ್ಟದ ಬೆಳೆ. ೩ ತಿಂಗಳ ಅವಧಿ.


ಸಜ್ಜಗೀರಿ : ದುಂಡನೆ ತೆನೆ, ಮುಂಗಾರು ತಳಿ.

ಭೋಗಾಪುರ : ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಭಾಗದ ಮುಂಗಾರಿಜೋಳ.

ಹರಳು ಜೋಳ: ಕುಷ್ಟಗಿ ಭಾಗದ ತಳಿ.ಬಿಚ್ಚಿಕೊಂಡ ತೆನೆ, ಪೊರಕೆಯಂತೆ ಕಾಣುತ್ತದೆ. ಸಜ್ಜೆ ಮತ್ತು ನವಣೆಯ


ಭಗವಂತಿಗೆ ಜೋಳ


ಜೊತೆ ಮಿಶ್ರ ಮಾಡಿ ಬಿತ್ತುತ್ತಾರೆ. ನಾಗರ ಅಮಾವಾಸ್ಯೆಯಲ್ಲಿ ಹುರಿದು ಪುಡಿ ಮಾಡಿ, ಸಿಹಿ ಉಂಡೆ ಮಾಡುತ್ತಾರೆ. ದೋಸೆ ಮತ್ತು ರೊಟ್ಟಿ ಕೂಡ ಮಾಡಬಹುದು.


ಭೋಗಾಪುರ ಜೋಳ

ದೋಸೆ ಜೋಳ : ಕುಷ್ಟಗಿ ಭಾಗದ ತಳಿ.ದೋಸೆಗೆ ಬಳಕೆಯಾಗುತ್ತದೆ.

ಯಕ್ಕರನಾಳ : ಕುಷ್ಟಗಿ ಭಾಗದ ತಳಿ.

ಗೌರಿ ಜೋಳ : ಹಿರೇಕೆರೂರು ಭಾಗದ ಮುಂಗಾರು ಜೋಳ. ಬಿಳಿ ಬಣ್ಣದ ತೆನೆ, ೧೨ ಅಡಿವರೆಗೂ ಎತ್ತರ, ಒಳ್ಳೆ ಮೇವು, ಗುಂಡು ತೆನೆ, ಎತ್ತಿನ ಮೇವಾಗಿ ಈಗಲೂ ಬೆಳೆಯುತ್ತಾರೆ.


ಹರಳು ಜೋಳ

ಬಸವನಪಾದ ಜೋಳ: ಹಿರೇಕೆರೂರು ಭಾಗದ ಮುಂಗಾರು ಜೋಳ. ಹಳದಿ ಬಣ್ಣದ ತೆನೆ

ಗಿಡ ಗೆಂಪು : ಗದಗ ಭಾಗದ ಜೋಳ. ಎತ್ತಿನ ಮೇವಾಗಿ ಬೆಳೆಯುತ್ತಾರೆ.

ಕೆಂಪುಜೋಳ: ಗುಂಡನೆ ತಳಿಯ ಕೆಂಪು ಬಣ್ಣದ ತಳಿ. ರಾಗಿ ಹೊಲದ ಸಾಲುಬೆಳೆಯಾಗಿ ಬೆಳೆಯುತ್ತಾರೆ. ಸಂಕ್ರಾಂತಿಗೆ ಕುಯಿಲಾಗುತ್ತದೆ.

ಕಾಖಿಜೋಳ: ಕಾಖಿ ಬಣ್ಣದ ತೆರೆದ ತೆನೆಯ ತಳಿ, ರುಚಿಯಲ್ಲಿ ಒಗರು, ಕಾಡು ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ದೊಡ್ಡ ಜೋಳ, ಚವರಿ ಜೋಳ, ಗುರನಳ್ಳಿ ಹುಬ್ಬಳ್ಳಿ ತಾಲೂಕಿನಲ್ಲಿ ಕಾಣಸಿಗುವ ಆರು ತಿಂಗಳ ಮುಂಗಾರಿ ತಳಿಗಳು.

ಬಿಳಿಜೋಳ: ಬಿಚ್ಚಿದ ತೆನೆಯ ಎತ್ತರವಾಗಿ ಬೆಳೆಯುವ ದಕ್ಷಿಣ ಕರ್ನಾಟಕದ ಜನಪ್ರಿಯ ತಳಿ. ಜೋಳದ ಕಡ್ಡಿ ಸಣ್ಣಗಿರುವುದರಿಂದ ದನಗಳಿಗೆ 'ಸಪ್ಪೆ' ತಿನ್ನಿಸಲು ಹೆಚ್ಚು ಬಳಕೆಯಾಗುತ್ತದೆ. ಬೇಸಿಗೆಯಲ್ಲಿ ನೀರಾವರಿಯಲ್ಲಿ ಒತ್ತಾಗಿ ಮೇವಿಗೆ ಬೆಳೆಸುತ್ತಾರೆ. ಜೋಳದ ನುಚ್ಚು ರಾಗಿ ಮುದ್ದೆಯ ಜೊತೆಗಾರ.


ಬಿಳಿಜೋಳ

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಭಾಗದಲ್ಲಿ ಬೆಳೆಯುವ ಜೋಳದ ತಳಿಗಳು

ತಳಿ ಹೆಸರು	ಬೆಳೆಯುವ ಕಾಲ	ಅವಧಿ (ತಿಂಗಳು)	ಎತ್ತರ (ತಿಂಗಳು)	ಇಳುವರಿ/ಎಕರೆ		ಅಡುಗೆ	ಬಣ್ಣ	ಇತರೆ ವಿಶೇಷತೆ
				ಕಾಳು(ಚೀಲ)	ಹುಲ್ಲು(ಚೀಲ)			
ವಗರು ಜೋಳ	ಮುಂಗಾರು	೪	೧೦	೫	೫	ರೊಟ್ಟಿ, ಮುದ್ದೆ, ಹಪ್ಪಳ	ಕೆಂಪು	ಮೇವಿನ ಬೆಳೆ
ಕೆಂಜೋಳ	ಮುಂಗಾರು	೩.೫	೬ರಿಂದ ೭	೬	೫	ರೊಟ್ಟಿ, ಮುದ್ದೆ, ಹಪ್ಪಳ	ಕೆಂಪು	ಮೇವಿನ ಜೋಳ
ಕೇಸರಿ ಜೋಳ	ಮುಂಗಾರು	೩.೫	೭	೬	೬	ರೊಟ್ಟಿ, ಮುದ್ದೆ, ಹಪ್ಪಳ, ಶ್ಯಾವಿಗೆ, ಜೋಳದ ಕಿಚಡಿ ದೋಸೆ	ಬಿಳಿ ಕೇಸರಿ	ಗಾಳಿ, ಕವಳ ಹೆಚ್ಚಾದಾಗ ಅಂಟು ಬರುತ್ತದೆ.
ಕ್ವದರು ಜೋಳ/ ಹೊಂಬಾಳೆ ಜೋಳ	ಮುಂಗಾರು	೪	೫ರಿಂದ ೬	೪	೪	ಪುರಿ, ರೊಟ್ಟಿ, ಮುದ್ದೆ, ಹಪ್ಪಳ, ಶ್ಯಾವಿಗೆ	ಬಿಳಿ	ಸಾಂಬಾರು ಪುಡಿಗೆ ಬಳಸುತ್ತಾರೆ. ಹಕ್ಕಿಗಳ ಕಾಟ ಜಾಸ್ತಿ
ಮುತ್ತಿನ ಜೋಳ	ಮುಂಗಾರು	೪	೬	೪	೩	ಪುರಿ, ರೊಟ್ಟಿ, ಮುದ್ದೆ, ಹಪ್ಪಳ, ಶ್ಯಾವಿಗೆ	ಬಿಳಿ	ಮೊದಲ ಕಡ್ಡಿಯನ್ನು ಕತ್ತರಿಸಿದರೆ ೮ ರಿಂದ ೧೦ ತೆಂಡೆಗಳು ಬರುತ್ತವೆ.
ಇಬ್ಬನಿ ಜೋಳ	ಹಿಂಗಾರು	೩	೬	೮	೬	ರೊಟ್ಟಿ, ಮುದ್ದೆ, ಹಪ್ಪಳ, ಜೋಳದ ಕಿಚಡಿ	ಬಿಳಿ	ಎಲೆ, ತೆನೆ ಅಂಟು ಬರುತ್ತದೆ. ಕವಳ ಬಿದ್ದಾಗ ಮಾತ್ರ ಉತ್ಕೃಷ್ಟಮೇವು
ಬಾಲದಂಡೆ ಜೋಳ	ಹಿಂಗಾರು	೩.೫	೬ರಿಂದ ೭	೭	೭	ರೊಟ್ಟಿ, ಮುದ್ದೆ, ಹಪ್ಪಳ, ಜೋಳದ ಕಿಚಡಿ	ಬಿಳಿ	ಎಲೆ, ತೆನೆ ಅಂಟು ಬರುತ್ತದೆ. ಕವಳ ಬಿದ್ದಾಗ ಮಾತ್ರ ಉತ್ಕೃಷ್ಟಮೇವು

ಹಿಂಗಾರು ಜೋಳದ ತಳಿಗಳು


ಬಿಜಾಪುರ ಜೋಳ: ೩ ತಿಂಗಳ ತಳಿ, ತೆರೆದ ತೆನೆ, ಟೊಳ್ಳು ಕಾಳು, ರೊಟ್ಟಿ/ಅಂಬಲಿ ತಯಾರಿಕೆಗೆ ಉತ್ತಮ.

ನಂದ್ಯಾಲ: ಬ್ಯಾಹಟ್ಟಿ ಪ್ರದೇಶದ ತಳಿ. ರೊಟ್ಟಿ ಮತ್ತು ಕಿಚಡಿಗೆ ಸೂಕ್ತ, ರೊಟ್ಟಿ ಮೃದುವಾಗಿರುತ್ತದೆ. ಒಳ್ಳೆಯ ಮೇವೂ ಹೌದು.

ಕರಿಗೋನಿ ಜೋಳ: ೩ ತಿಂಗಳ ತಳಿ, ಗಟ್ಟಿ ತೆನೆ, ರೊಟ್ಟಿ/ಅಂಬಲಿಗೆ ಉತ್ತಮ, ಮೇವು ಉತ್ತಮ.

ಬಿಳಿಗೋನಿ ಜೋಳ : ೩ ತಿಂಗಳ ಗಂಜಿಗಟ್ಟಿ ಪ್ರದೇಶದ ತಳಿ. ಗಟ್ಟಿ ತೆನೆ ರೊಟ್ಟಿ ಉತ್ತಮ, ಮೇವು ಉತ್ತಮ.

ಕೋಡ ಮುರಕ: ೩ ತಿಂಗಳ ತಳಿ, ತೆರೆದ ತೆನೆ ರೊಟ್ಟಿಗೆ ಉತ್ತಮ, ಮೇವು ಉತ್ತಮ.




ಮಾಲದಂಡಿ: ಉತ್ತರ ಕರ್ನಾಟಕದ ಜನಪ್ರಿಯ ತಳಿ. ಹಿಂಗಾರಿ ಜೋಳಗಳಲ್ಲೇ ಹೆಚ್ಚು ಇಳುವರಿ ಕೊಡುವ, ಕಪ್ಪುಮಣ್ಣಿನ ಹೊಲಕ್ಕೆ ಹೊಂದಿಕೊಳ್ಳುವ ತಳಿ. ದಪ್ಪನಾದ ತೆನೆಗಳು, ಒಳ್ಳೆಯ ಮೇವು, ಉತ್ತಮ ರುಚಿಯ ರೊಟ್ಟಿ ಈ ತಳಿಯ ವಿಶೇಷ. ಹೊಸ ತಳಿಗಳ ಅಬ್ಬರದಲ್ಲೂ ಉಳಿದಿರುವ ಅಪ್ಪಟ ದೇಸಿಯ ಜೋಳದ ತಳಿ. ೩ ತಿಂಗಳ ತಳಿ. ಮೇವು ಉತ್ತಮ.

ರ್‍ಯಾಗಡ ಜೊನ್ನಲು: ಮಧುಗಿರಿ, ಪಾವಗಡ, ಗೌರಿಬಿದನೂರು ತಾಲ್ಲೂಕುಗಳ ಗಡಿಭಾಗದ ಹಳ್ಳಿಗಳ ಹಿಂಗಾರು ಜೋಳದ ತಳಿ. ಒಂದೆರಡು ಮಳೆಗೆ ಬೆಳೆಯುವ ಸಾಮರ್ಥ್ಯ ಇದೆ. ಬೂದು ಬಣ್ಣದ ಮತ್ತು ಬಿಳಿಯ ಕಾಳಿನ, ಮುದ್ದೆಯಾಕಾರದ ತೆನೆಗಳು.

ಬಿಜಾಪುರ ಭಾಗದ ಜೋಳದ ವೈವಿಧ್ಯ: ಬಿಳಿಜೋಳ, ಗುಂಡುತೆನೆ ಜೋಳ, ಮಾಲದಂಡಿ ಸಣ್ಣ, ಮುದ್ದೆ ಮಾಲದಂಡಿ, ಮುತ್ಯಾಲ ಜೋಳ, ಕೆಂಪುಜೋಳ, ಹೋಳಿಗೆ ಕೆಂಪು ಜೋಳ, ಹಲ್ಲಿನ ಜೋಳ, ಜಮಕಿ ಜೋಳ, ಹಾಲು ಜೋಳ ಮತ್ತು ಗುಂಡು ಜೋಳದ ತಳಿಗಳಿವೆ.

ಜಮಖಂಡಿ ಭಾಗದಲಿ ಬಿಳಿ ಜೋಳ, ಮಾನದಂಡಿಗೆ, ಗುಂಡುತೆನಿ, ಕಾಗಿ ಮೇತಿ, ಸಕ್ಕರಿ ಮುಕ್ಕರಿ ಜೋಳ ಇವೆ.



ಬಿಳಿ ಜೋಳ



ಸಜ್ಜೆಯ ತಳಿ ವೈವಿಧ್ಯ

ಕಡಿಮೆ ಮಳೆಬೀಳುವ ಒಣಪ್ರದೇಶದ ಜನರ ಆಹಾರ ಧಾನ್ಯವಾದ 'ಸಜ್ಜೆ' ಮಳೆ ಆಶ್ರಿತ ಮುಂಗಾರು ಬೆಳೆ. ಆಳೆತ್ತರ ಮೀರಿ ಬೆಳೆಯುವ ಸಜ್ಜೆಯ ತೆನೆಗಳು ಉದ್ದವಿದ್ದು ನೋಡಲು ಆಕರ್ಷವಾಗಿರುತ್ತವೆ. ಉತ್ತರ ಕರ್ನಾಟಕದ ಕೊಪ್ಪಳ ಜಿಲ್ಲೆಯಲ್ಲಿ ಸಜ್ಜೆಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ರಾಗಿಯ ಜೊತೆ ಸಾಲುಬೆಳೆಯಾಗಿ ಬೆಳೆಯುವ ಪದ್ಧತಿ ಇದೆ.


ಸಜ್ಜೆಯ ಕಾಳನ್ನು ತೆನೆಯಿಂದ ಬೇರ್ಪಡಿಸಿ, ಕಾಳನ್ನು ಹಿಟ್ಟು ಮಾಡಿಸಿ ವಿವಿಧ ಬಗೆಯ ಅಡುಗೆಗೆ ಬಳಸಲಾಗುತ್ತದೆ. 'ಸಜ್ಜೆರೊಟ್ಟಿ' ಅತ್ಯಂತ ರುಚಿಕರ ಆಹಾರ. ವಾರಗಟ್ಟಲೆ ಕೆಡದಂತೆ ಇಡಬಹುದು. ಸಜ್ಜೆಯನ್ನು ನೀರಲ್ಲಿ ನೆನೆಸಿ ಮೊಳಕೆಕಟ್ಟಿ, ಹುರಿದು ಪುಡಿಮಾಡಿ ತಯಾರಿಸುವ 'ಮಾದಳಿ' ಹಬ್ಬಗಳಲ್ಲಿ ವಿಶೇಷ ಸಿಹಿತಿಂಡಿ. ಸಜ್ಜೆಯಲ್ಲಿರುವ ತಳಿ ವೈವಿಧ್ಯ ಬಹುದೊಡ್ಡದು. ಅಧಿಕ ಇಳುವರಿ ತಳಿಗಳ ದಾಳಿಗೆ ಸಿಕ್ಕಿ ಸ್ಥಳೀಯ ತಳಿಗಳು ನಾಶದ ಜಾಡು ಹಿಡಿದಿವೆ.

ಮರ ಸಜ್ಜೆ : ತೆನೆ ಮೇಲೆ ಮುಳ್ಳು, ಎತ್ತರವಾಗಿ ಬೆಳೆಯುವ ಉದ್ದನಾದ ತೆನೆಯ ಗಟ್ಟಿ ದಂಟಿನ ತಳಿ. ರೋಹಿಣಿಗೆ ಬಿತ್ತನೆ ಮಾಡಿ ದೀಪಾವಳಿಗೆ ಕೊಯ್ಲು ಮಾಡುತ್ತಾರೆ.

ಹಾಲು ಸಜ್ಜೆ: ಕುಷ್ಟಗಿ ಭಾಗದ ಮುಖ್ಯ ಆಹಾರ ಬೆಳೆ.ಊಟಕ್ಕೆ ಶ್ರೇಷ್ಠ, ಮಾದಳಿ ಮಾಡಲು ಉತ್ತಮ, ದನಗಳಿಗೆ ಒಳ್ಳೆಯ ಮೇವೂ ಹೌದು.

ಬಿಳಿ ಸಜ್ಜೆ : ೪ ತಿಂಗಳಲ್ಲಿ ಕಟಾವಿಗೆ ಬರುವ ಕಂಪ್ಲಿಕೊಪ್ಪದ ಪ್ರದೇಶದ ತಳಿ. ಗಿಡ್ಡ ತಳಿ, ರೊಟ್ಟಿಗೆ ಉತ್ತಮ, ಮೇವು ಬಿರಿಸು, ಸ್ವಲ್ಪ ಜಿಗಿಟಾಗಿರುತ್ತದೆ.

ಕೆಂಪು ಸಜ್ಜೆ : ೪ ತಿಂಗಳ ಕಲಘಟಗಿ ಪ್ರದೇಶದ ತಳಿ. ಎತ್ತರವಾಗಿ ಬೆಳೆಯುತ್ತದೆ, ಅಂಬಲಿ ಮತ್ತು ರೊಟ್ಟಿಗೆ ಸೂಕ್ತ.



ಮುಳ್ಳು ಸಜ್ಜೆ: ಸಾಧಾರಣ ಮಳೆಗೆ ಉತ್ತಮ ಇಳುವರಿಕೊಡುವ ಈ ತಳಿಯ ತೆನೆಗಳ ಮೇಲೆ ಸಣ್ಣಮುಳ್ಳುಗಳ ರಚನೆ ಇರುತ್ತದೆ. ಪಕ್ಷಿಗಳು ತೆನೆಯ ಮೇಲೆ ಕೂರುವ ಭಯವಿಲ್ಲ. ಹೆಚ್ಚು ತೆಂಡೆ ಒಡೆಯುವ, ಒಂದಾಳೆತ್ತರ ಬೆಳೆಯುವ ತಳಿ. ಒಳ್ಳೆಯ ಇಳುವರಿ..

ದೊಡ್ಡ ಸಜ್ಜೆ: ಎತ್ತವಾಗಿ ಬೆಳೆಯುವ ಉದ್ದನೆಯ ತೆನೆಯ ತಳಿ ಬೆಂಗಳೂರು ಗ್ರಾಮಾಂತರದಲ್ಲಿ ಕಾಣಸಿಗುತ್ತದೆ. ದನಗಳ ಮೇವು ಬಿರುಸು.

ಹುಲ್ಲು ಸಜ್ಜೆ: ಎತ್ತರವಾಗಿ ಬೆಳೆಯ್ಯುವ ಈ ತಳಿಯು ಸಣ್ಣ ಕಾಂಡದಿಂದ ಕೂಡಿರುತ್ತದೆ. ಕಾಳು ಕಡಿಮೆ ಹುಲ್ಲು ಜಾಸ್ತಿ. ನೀರಾವರಿ ಪ್ರದೇಶದಲ್ಲಿ ಮೇವಿಗೆ ಉತ್ತಮ ತಳಿ.

ಕೊಂಬಿನ ಅಕ್ಕಿ: ಕನಕಪುರ ಭಾಗದ ಜನಪ್ರಿಯ ತಳಿ. ರಾಗಿಯ ಜೊತೆ ಸಾಲು ಬೆಳೆಯಾಗಿ ಈ ತಳಿಯನ್ನು ಬೆಳೆಯುತ್ತಾರೆ. ತೆನೆಯು ತೆಳ್ಳಗೆ ಉದ್ದವಾಗಿರುತ್ತದೆ. ಬೀಜಗಳು ಕವಚದಿಂದ ಆವೃತವಾಗಿರುತ್ತವೆ. ರೊಟ್ಟಿಗೆ ಅಷ್ಟು ಸೂಕ್ತವಲ್ಲದ ತಳಿ ಮೇವಿಗೆ ಉತ್ತಮ.

ಕಣ್ಣು ಸಜ್ಜೆ : ಬೀದರ್ ಭಾಗದ ವಿಶೇಷ ಸಜ್ಜೆ ತಳಿ. ಮನೆ ಮದ್ಯ ತಯಾರಿಕೆಗೆ ಬಳಕೆಯಾಗುವ ತಳಿ ಇದು. ಗರ್ಭಿಣಿ ಹೆಂಗಸರಿಗೆ ಒಳ್ಳೆಯ ಆಹಾರ ಕೂಡ. ಬೀಜಾಪುರ ಭಾಗದಲ್ಲಿ ಇದರ ಗಂಜಿಯನ್ನು ಮಕ್ಕಳಿಗೆ ಕೊಡುತ್ತಾರೆ. ಹಕ್ಕಿಗಳಕಾಟದಿಂದ ಈ ತಳಿ ಮುಕ್ತ. ತೆನೆಯ ಮೇಲೆ ಮುಳ್ಳುಗಳಿರುವ ಕಾಟದಿಂದ ಇದರ ಕೊಯಲು ಮತ್ತು ಒಕ್ಕಣೆ ತ್ರಾಸದಾಯಕ.





ನವಣೆ ತಳಿ ವೈವಿಧ್ಯ

ಜಡೆಯಂತೆ ಇಳಿಬಿದ್ದು, ಗಾಳಿಗೆ ತೊನೆಯುವ ನವಣೆ ಬಹುಪಾಲು ಎಲ್ಲ ಪ್ರದೇಶದ ರೈತರಿಗೂ ಪರಿಚಯವಿರುವ ಕಿರುಧಾನ್ಯ. ೩-೫ ಅಡಿ ಎತ್ತರ ಬೆಳೆಯುವ, ಎಲ್ಲ ಥರದ ಮಣ್ಣಿನಲ್ಲೂ ಬೆಳೆಯುವ ಸಾಮರ್ಥ್ಯವಿರುವ ನವಣೆ ಮಳೆ ಆಶ್ರಿತ ಬೆಳೆ. ರಾಗಿ ಮತ್ತು ಜೋಳದ ಸಾಲು ಬೆಳೆಯಾಗಿ ಅಥವಾ ಮಿಶ್ರ ಬೆಳೆಯಾಗಿ ಇದನ್ನು ಬೆಳೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ನವಣೆಯನ್ನು ಏಕಬೆಳೆಯಾಗಿ ಬೆಳೆಯುವ ಪದ್ಧತಿಯೂ ಇದೆ.


ಹಸನು ಮಾಡಿದ ಹೊಲಕ್ಕೆ ಬಿತ್ತಿ ನಂತರ ಒಂದೆರಡು ಸಾರಿ ಕುಂಟೆ ಹೊಡೆದರೆ ಮುಗಿಯಿತು. ಇನ್ನು ರೈತರು ಹೊಲ ನೋಡುವುದು ಕಟಾವಿನ ಸಮಯದಲ್ಲಿ ಮಾತ್ರ. ಇದು ಎಕರೆಗೆ ನಾಲ್ಕರಿಂದ ಐದು ಚೀಲ ಗ್ಯಾರಂಟಿ ಇಳುವರಿ ಕೊಡುವ ಬೆಳೆ. ಚಿಕ್ಕಮಗಳೂರು, ಕಡೂರು, ತರೀಕೆರೆ ತಾಲೂಕುಗಳಲ್ಲಿ ಇಂದೂ ಕೂಡ ಎಕರೆಗಟ್ಟಲೆ ನವಣೆ ಬೆಳೆಯುತ್ತಾರೆ.

ದನದ ಬಾಲದ ಕುಚ್ಚಿನ ರೀತಿ ದಪ್ಪಗಿರುವ ಕುಚ್ಚು ನವಣೆ, ಜಡೆಯಂತೆ ಇಳಿಬಿದ್ದ ಜಡೆನವಣೆ, ಕುಯಿಲು ನವಣೆ ಹೀಗೆ ಆಯಾ ಪ್ರದೇಶಕ್ಕೆ ಸೂಕ್ತವಾಗುವ ತಳಿಗಳಿವೆ. ಊಟಕ್ಕೆ ಅನ್ನ, ದನಗಳಿಗೆ ಮೇವು ಒದಗಿಸುವ ನವಣೆಗೆ ರೋಗ ಕೀಟಗಳ ಕ್ವಾಟವಿಲ್ಲದೆ ಬೆಳೆವ ಸಾಮರ್ಥ್ಯ ಇದೆ.

ಎಡೆಯೂರು ನವಣೆ : ಒಳ್ಳೆಯ ರುಚಿ, ಒಳ್ಳೆಯ ಮೇವು. ಮನೆಬಳಕೆಗೆ ಒಳ್ಳೆಯ ತಳಿ. ಕೊಪ್ಪಳ ಜಿಲ್ಲೆಯ ತಳಿ.

ಕೆಂಪು ನವಣೆ: ಕೆಂಪು ಕಾಳಿನ ತಳಿ, ಬಿಚ್ಚಿದ ತೆನೆಯ ತಳಿ. ಅನ್ನ ಬಿರುಸಾಗಿರುತ್ತದೆ. ಕಾಂಡ ದಪ್ಪ. ಎತ್ತರವಾಗಿ ಬೆಳೆಯುವ ಮುಂಗಾರು ತಳಿ.

ಮರ ನವಣೆ: ಎತ್ತರ ಜಾಸ್ತಿ, ಕಾಳು ಕಂದು ಬಣ್ಣ, ಕಾಂಡ ಬಿಳಿ ಬಣ್ಣಕ್ಕಿರುತ್ತದೆ. ತೆನೆಯಲ್ಲಿ ತೆಳುವಾಗಿ ಮುಳ್ಳುಗಳಿರುತ್ತವೆ. ಅನ್ನ ಬಿರುಸು, ಇಳುವರಿ ಉತ್ತಮ. ತೆನೆ ಉದ್ದ, ಬರಗಾಲ ನಿರೋಧಕ, ಎರಡು ಮಳೆ ಆದರೆ ಸಾಕು.


ಹಾಲು ನವಣೆ

ಹಾಲು ನವಣೆ: ತೆನೆ ಅಪ್ಪಟ ಬಿಳಿ, ಚಿಕ್ಕ ಚಿಕ್ಕ ತೆನೆಗಳು, ಮಧ್ಯಮ ಎತ್ತರ, ಹಾಲುದುಂಬುವಾಗ ತೆನೆಗಳನ್ನು ಹಿಂಡಿದರೆ ಹಾಲು ಬರುತ್ತದೆ. ಈ ಕಾರಣಕ್ಕೆ ಕರು ಇರುವ ಹಸುಗಳಿಗೆ ಮತ್ತು ಸಣ್ಣ ಕರುಗಳಿಗೆ ಹುಲ್ಲು ಮತ್ತು ಕಾಳು ಉಣಿಸುತ್ತಾರೆ. ಅನ್ನ ಮೃದು, ರುಚಿ ಇತ್ತಮ, ಒಳ್ಳೆ ಮೇವು, ಇಳುವರಿ ಸಾಧಾರಣ, ತೆನೆ ಸಣ್ಣ. ಮನೆಬಳಕೆಗೆ ಒಳ್ಳೆಯ ತಳಿ.

ಉರುಬಲ: ಕುಷ್ಟಗಿ ಭಾಗದ ವಿಶೇಶ ನವಣೆ ತಳಿ. ಒಳ್ಳೆ ಇಳುವರಿ. ದೊಡ್ಡ ತೆನೆ, ಕೆಂಪು ಮಣ್ಣಿಗೆ ಸೂಕ್ತ.


ಹುರಕಲ ನವಣೆ: ಬಿಳಿಯ ಕಾಳಿನ ಉದ್ದ ತೆನೆಚು ಮುಂಗಾರು ತಳಿ, ಬಿಳಿಯ ಕಾಳು, ಸಿಪ್ಪೆ ಕೂಡ ಬಿಳಿ ಇರುತ್ತದೆ. ಇಳುವರಿ ಹೆಚ್ಚು, ಅನ್ನ ಬಿರುಸಾಗುತ್ತದೆ.

ಕುಚ್ಚು ನವಣೆ: ಗರಿ ಅಗಲ, ದಪ್ಪ ತೆನೆ ಕುಚ್ಚಿನ ಹೋಲಿಕೆ, ಒಳ್ಳೆ ರುಚಿ.

ಹುಲ್ಲು ನವಣೆ: ಮಧ್ಯಮ ಎತ್ತರ ತೆನೆಯಲ್ಲಿ ಮುಳ್ಳುಗಳ ರಚನೆ ಇರುತ್ತದೆ ಕಡ್ಡಿಸಣ್ಣ. ಒಳ್ಳೆಯ ಮೇವು. ಕುಷ್ಟಗಿ ಭಾಗದಲ್ಲಿ ಸಾಮಾನ್ಯ.


ಕುಚ್ಚು ನವಣೆ

ಕುಯಿಲು ನವಣೆ: ಕಾವೇರಿ ಹೊಳೆ ಬಯಲಿನ ಕಾಡು ಹಳ್ಳಿಯ ರೈತರು ಬೇಗ ಕಟಾವಿಗೆ ಬರುವ ಕುಯಿಲು ನವಣೆಯನ್ನು 'ಕಣದ' ಜಾಗದಲ್ಲಿ ಬಿತ್ತುತ್ತಾರೆ. ಮೂರು ತಿಂಗಳಿಗೆ ಕುಯಿಲಿಗೆ ಬರುವ ಈ ತಳಿಯ ಕಟಾವು ಮಾಡಿ ಒಕ್ಕಣೆಗೆ ಕಣ ಸಿದ್ದಮಾಡುತ್ತಾರೆ. ರೈತರ ಜಾಣ್ಮೆಯ ಪ್ರತೀಕ ಈ ನವಣೆ.




ಮರನವಣೆ

ಜಡೆ ನವಣೆ: ನಾಲ್ಕು ತಿಂಗಳ ಅವಧಿಯ ಈ ತಳಿಯು ಇದು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸಾಮಾನ್ಯ. ಈ ತಳಿಯನ್ನು ರಾಗಿಯ ಜೊತೆ ಸಾಲು ಬೆಳೆಯಾಗಿ ಬೆಳೆಯುತ್ತಾರೆ. ತೆನೆಗಳು ಉದ್ದವಾಗಿದ್ದು ಕೆಂಪು ಕಾಳಿನಿಂದ ಕೂಡಿರುತ್ತವೆ.

ತುಪ್ಪದ ನವಣೆ: ದಪ್ಪತೆನೆ, ದನದ ಬಾಲದ ಕುಚ್ಚಿನ ರೀತಿ, ಕಡ್ಡಿದಪ್ಪ. ಅಗಲವಾದ ಎಲೆ.

ಕೆಂಪು ನವಣೆ: ಎತ್ತರಜಾಸ್ತಿ, ಕಾಳುಕಂದು, ತೆನೆಯಲ್ಲಿ ಮುಳ್ಳುಗಳಿರುತ್ತವೆ.


ಕರಿನವಣೆ: ಕಪ್ಪು ಬಣ್ಣದ ಕಾಳಿನ ತಳಿ. ಬಲಿತ ತೆನೆ ಕಪ್ಪಾಗಿ ಕಾಣುತ್ತದೆ. ಚಿಕ್ಕನಾಯಕನಹಳ್ಳಿ, ತುರುವೆಕೆರೆ ಭಾಗಗಳಲ್ಲಿ ಸಾಮಾನ್ಯವಾಗಿದ್ದ ತಳಿ ಈಗ ಕಾಣಸಿಗುವುದು ಅಪರೂಪ.



ಕರಿನವಣೆ

ಬಿಳಿ ನವಣೆ: ಈ ತಳಿಯು ಬಿಜಾಪುರ ಪ್ರದೇಶದ ಜನಪ್ರಿಯತೆಯ ನವಣೆ ತಳಿ. ಬೀಜಗಳು ಒಣಹುಲ್ಲಿನ ಬಣ್ಣಕ್ಕಿರುತ್ತವೆ. ಕಾಳಿನ ಸಿಪ್ಪೆ ಮೃದುವಾಗಿರುವುದರಿಂದ ಅಕ್ಕಿ ಮಾಡುವುದು ಸುಲಭ. ಅನ್ನ ಮತ್ತು ಉಪ್ಪಿಟ್ಟು ತಯಾರಿಕೆಗೆ ಸೂಕ್ತ.

ಜೊತಗು ನವಣೆ: ಕುಚ್ಚು ನವಣೆಯನ್ನು ಹೋಲುವ ದಪ್ಪತೆನೆಯ ತಳಿ ಭಾರಕ್ಕೆ ಇಡೀ ಪೈರೆ ಭಾಗುತ್ತದೆ. ಏಕ ಬೆಳೆಯಾಗಿ ಬೆಳೆಯಲು ಸೂಕ್ತ.



ಜೊತಗುನವಣೆ

ಕಲಘಟಗಿ ಮತ್ತು ಹುಬ್ಬಳ್ಳಿ ತಾಲೂಕಿನ ಕಾಮಧೇನು, ಪಾಲಿಕೊಪ್ಪ, ತಿರುಮಲಕೊಪ್ಪ, ಸೂರಶೆಟ್ಟಿಕೊಪ್ಪ, ನಾಗನೂರ ಮತ್ತು ವರೂರು ಗ್ರಾಮಗಳಲ್ಲಿ ಹಾಲು ನವಣೆ, ಕೆಂಪು ನವಣೆ, ಹುರಕಲ ನವಣೆ ಸಿಗುತ್ತವೆ. ಕೊಳ್ಳೇಗಾಲ ಭಾಗದಲಿ ಕೊಕ್ಕು ನವಣೆ, ಕೆಂಪು (ಚಂದ್ರ) ನವಣೆ ಇವೆ.

ನವಣೆ ಅಕ್ಕಿಯ ಅಡುಗೆಗಳು

೧. **ನವಣೆ ಉಂಡೆ :** ನವಣೆ ಅಕ್ಕಿಯನ್ನು ಹುರಿದು ಕುಟ್ಟಿ ಪುಡಿ ಮಾಡಿ ನೀರಿನಲ್ಲಿ ನೆನೆಸಿ ಬೆಲ್ಲ, ಏಲಕ್ಕಿ, ಕೊಬ್ಬರಿ, ಎಳ್ಳು ಸೇರಿಸಿ ಉಂಡೆ ಕಟ್ಟಿ. ಮಕ್ಕಳಿಗೆ ಇಷ್ಟವಾಗುತ್ತದೆ.

೨. **ನವಣೆ ಆಲಮಂಡಿಗೆ :** ನವಣೆ ಅಕ್ಕಿಯನ್ನು ರಾತ್ರಿ ಪೂರಾ ನೀರಿನಲ್ಲಿ ನೆನೆಸಿ ಚೆನ್ನಾಗಿ ರುಬ್ಬಿ ಅದನ್ನು ಬೆಲ್ಲ ಹಾಕಿ ಕುದಿಸಿದ ನೀರಿಗೆ ಹಾಕಿ, ಗಟ್ಟಿಪಾಕ ಬಂದ ಮೇಲೆ ದ್ರಾಕ್ಷಿ, ಗೋಡಂಬಿ ಸೇರಿಸಿ. ನಂತರ ಒಂದು ಪಾತ್ರೆಗೆ ಎಣ್ಣೆ ಹಚ್ಚಿ ಪಾಕವನ್ನು ತೆಳುವಾಗಿ ಸುರಿಯಿರಿ. ಮೇಲೆ ಕೊಬ್ಬರಿ, ಗಸಗಸೆ ಹಾಕಿ ಬೇಕಾದ ಅಳತೆಗೆ ಕತ್ತರಿಸಿ.


೩. **ನವಣೆ ರೊಟ್ಟಿ :** ನವಣೆ ಅಕ್ಕಿಯನ್ನು ಹಿಟ್ಟು ಮಾಡಿ ನೀರಿನಲ್ಲಿ ಕಲಸಿ ಮಾಮೂಲಿ ರೊಟ್ಟಿ ತಟ್ಟುವಂತೆ ತಟ್ಟಿ ಹೆಂಚಿನ ಮೇಲೆ ಬೇಯಿಸಿ.

೪. **ನವಣೆ ಹಪ್ಪಳ :** ನವಣೆ ಅಕ್ಕಿಯನ್ನು ತೊಳೆದು ನೆನೆಹಾಕಿ ನಂತರ ರುಬ್ಬಿ ಹಿಟ್ಟಿನಂತೆ ಮಾಡಿ ಅದಕ್ಕೆ ಜೀರಿಗೆ ಸೋಡಾಪುಡಿ ಸೇರಿಸಿ ಹಪ್ಪಳ ಮಾಡುವುದು.

೫. **ನವಣೆ** ಗಿಣ್ಣು : ನವಣೆ ಅಕ್ಕಿ ತೊಳೆದು ಚೆನ್ನಾಗಿ ಒಣಗಿಸಿ ಹಿಟ್ಟು ಮಾಡಿ ಹಸುವಿನ ಹಾಲಿನ ಜೊತೆ ಬೆರೆಸಿ ಅದಕ್ಕೆ ಒಣಶುಂಠಿ, ಏಲಕ್ಕಿ, ಕೊಬ್ಬರಿ, ಬೆಲ್ಲ ಸೇರಿಸಿ ಹದವಾಗಿ ಬೇಯಿಸಿ ಬಳಸಬೇಕು.

೬. **ನವಣೆ ಹೋಳಿಗೆ :** ನವಣೆ ಅಕ್ಕಿಯನ್ನು ಹುರಿದು ಹಿಟ್ಟು ಮಾಡಿಸಿ, ಆ ಹಿಟ್ಟಿಗೆ ಬೆಲ್ಲ, ಹುರಿಗಡಲೆ, ಏಲಕ್ಕಿ ಸೇರಿಸಿ ಚೆನ್ನಾಗಿ ರುಬ್ಬಿ ಹೂರಣ ಮಾಡಿ ಅದಕ್ಕೆ ಮೈದಾ ಹಿಟ್ಟು ಸೇರಿಸಿ. ಹೆಂಚಿನ ಮೇಲೆ ಎಣ್ಣೆ ಮಿಶ್ರ ಮಾಡಿ ಬೇಯಿಸಿ. ಬೇಳೆ ಹೋಳಿಗೆಯಂತೆಯೇ ಇದನ್ನು ಮಾಡಬೇಕು.





ಆರಕ

ಹೆಚ್ಚು ಕಮ್ಮಿ ರೈತರ ಹೊಲಗಳಿಂದ ಕಣ್ಮರೆಯಾಗಿರುವ, 'ಬರಗಾಲದ ಮಿತ್ರ' ಎಂದು ಈಗಲೂ ಕರೆಸಿಕೊಳ್ಳುವ ಆರಕ ಅಪರೂಪದ ಕಿರುಧಾನ್ಯ. ಪಾಳುಬಿಟ್ಟ ಜಮೀನು, ಕಲ್ಲುಮಿಶ್ರಿತ ಕೆಂಪುಮಣ್ಣು, ಸಾರವಿಲ್ಲದ ಬಂಜರು ನೆಲಕ್ಕೆ ಹೇಳಿಮಾಡಿಸಿದ ತಳಿ. ಒಂದೆರಡು ಮಳೆ ಬಿದ್ದರೆ ಸಾಕು, ಗುಂಪುಗುಂಪಾಗಿ ತೆಂಡೆ ಹೊಡೆದು ಎದ್ದುನಿಲ್ಲುತ್ತದೆ. ೨ ರಿಂದ ೩ ಅಡಿ ಎತ್ತರ ಬೆಳೆವ, ಕಾಫಿ ಬಣ್ಣದ ಬೀಜಗಳ ಆರಕಕ್ಕೆ ಕೀಟ-ರೋಗಗಳ ಕಾಟವಿಲ್ಲ. ಮಳೆಗೆ ಸಿಕ್ಕರೆ ಈ ಬೆಳೆ ವಿಷವಾಗುತ್ತದೆ ಎಂಬ ಕುರುಡು ನಂಬಿಕೆಯೇ ಇದರ ಅವಸಾನಕ್ಕೆ ಕಾರಣವಾಗಿರುವುದು ದುರಂತ. ಈಗಲೂ ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳಲ್ಲಿ ಎಕರೆಗಟ್ಟಲೆ ಆರಕ ಬೆಳೆವ ರೈತರಿದ್ದಾರೆ. ಇತರ ಕಿರುಧಾನ್ಯಗಳಿಗಿಂತ ದೀರ್ಘಾವಧಿಯ, ನಾಲ್ಕರಿಂದ ನಾಲ್ಕೂವರೆ ತಿಂಗಳಲ್ಲಿ ಕುಯಿಲಿಗೆ ಬರುವ ಆರಕದ ಹುಲ್ಲು ಬಹು ಉಪಯೋಗಿ. ಮನೆಯ ಮಾಡಿಗೆ, ಬೀಜ ಬಚ್ಚಿಡುವ ಮೂಡೆ ಕಟ್ಟಲು ಬಳಕೆಯಾಗುವ ಇದರ ಹುಲ್ಲನ್ನು ದನಗಳು ಅಷ್ಟಾಗಿ ಇಷ್ಟಪಡವು.

ಆರಕದಿಂದ ಅಕ್ಕಿ ಮಾಡುವ ವಿಧಾನ: ಆರಕವನ್ನು ಕೊಯ್ದು ಕಾಳನ್ನು ಬೇರ್ಪಡಿಸಿದ ಮೇಲೆ ಅವುಗಳಿಗೆ ಬೂದಿ ಹಚ್ಚಿ ಬೀಸುವ ಕಲ್ಲಿನ ಮಧ್ಯಕ್ಕೆ ಮರ ಹರಡಬೇಕು. ಅದರ ಮೇಲೆ ಆರಕ ಹರಡಬೇಕು. ಬೀಸುತ್ತಾ ಬೀಸುತ್ತಾ ಒಂದೊಂದೇ ಪದರಗಳು ಬಿಚ್ಚಿಕೊಳ್ಳುತ್ತವೆ. ಹೀಗೆ ಆರಕದಿಂದ ಅಕ್ಕಿ ತಯಾರಿಸಬಹುದು. ಈ ಅಕ್ಕಿಯಿಂದ ತಯಾರಿಸಿದ ಪದಾರ್ಥಗಳು ದೇಹಕ್ಕೆ ತಂಪು ನೀಡುತ್ತವೆ. ಹಾಗಾಗಿ ಬೇಸಿಗೆಯಲ್ಲೇ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.



ಕೊರಲು

ಪನಿವೆರಗು ಎಂದೂ ಕರೆಸಿಕೊಳ್ಳುವ ಕೊರಲು ಕಣ್ಮರೆಯಾಗುತ್ತಿರುವ ಮತ್ತೊಂದು ಕಿರುಧಾನ್ಯ. ಬೇಗ ಕುಯ್ಲಿಗೆ ಬರುವ, ಬರ ನಿರೋಧಕ ಗುಣದ, ಎಲ್ಲ ಮಣ್ಣು ಮತ್ತು ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುವ ಕೊರಲು ಅಪರೂಪದ ಧಾನ್ಯ. ಮರದ ನೆರಳಿನಲ್ಲಿ, ಹೆಚ್ಚುಕಳೆ ಇರುವ ಜಮೀನಿಗೆ ಸೂಕ್ತವಾದುದು. ಎರಡು ವರ್ಷ ಬೆಳೆಯುವುದರೊಳಗೆ ಕಳೆ ನಿಯಂತ್ರಣಕ್ಕೆ ಬರುತ್ತದೆ ಎಂಬುದು ಅನುಭವಿ ರೈತರ ಮಾತು. ರಾಗಿ, ಜೋಳದ ಬಿತ್ತನೆ ಮಾಡಲಾಗದ ಹೊಲಗಳಿಗೆ ಹಿಂಗಾರಿನ ಆರಂಭಕ್ಕೆ ಚೆಲ್ಲಬಹುದು. ಇಬ್ಬನಿಯ ನೆರವಿನಿಂದಲೇ ಬೆಳೆಯುವ ಸಾಮರ್ಥ್ಯ ಇದಕ್ಕಿದೆ.

ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ ತಾಲೂಕುಗಳಲ್ಲಿ ಹೊಲದ ಮಧ್ಯದ ಮರಗಳ ಕೆಳಗೆ ಅದರಲ್ಲೂ ಹುಣಸೇಮರದ ಸುತ್ತ ಕೊರಲು ಬೆಳೆ ತೆಗೆಯುವುದನ್ನು ಈಗಲೂ ಕಾಣಬಹುದು. ಹುಲ್ಲಿನಂತೆ ಒತ್ತಾಗಿ, ಮೊಳಕಾಲೆತ್ತರ ಬೆಳೆವ ಕೊರಲು ಹೆಚ್ಚು ತೆಂಡೆ ಹೊಡೆಯುತ್ತದೆ. ಇದಕ್ಕೆ ಹಕ್ಕಿಗಳ ಕಾಟ ಇರುತ್ತದೆ. ೬೦ ರಿಂದ ೯೦ ದಿನಗಳಿಗೆ ಕೊಯಿಲಿಗೆ ಬರುತ್ತದೆ. ಕುಯ್ಲಿಗೆ ಬಂದ ಬೆಳೆಯನ್ನು ಬುಡಕ್ಕೆ ಕುಯ್ದು, ದನಗಳಿಂದ ತುಳಿಸಿ ಕಾಳು ಬೇರ್ಪಡಿಸುತ್ತಾರೆ.

ಕಾಳನ್ನು ರಾಗಿ ಕಲ್ಲಿನಲ್ಲಿ ಬೀಸಿ, ಇಲ್ಲವೇ ಮಿಲ್ ಮಾಡಿಸಿ ಅಕ್ಕಿ ಮಾಡಬಹುದು. ಶ್ರೀಲಂಕಾದಲ್ಲಿ ಇದರ ಅಕ್ಕಿಯಿಂದ ಬಿರಿಯಾನಿ ಮಾಡುತ್ತಾರೆ. ಕೊರಲು ರೊಟ್ಟಿಯನ್ನು ವಾರಗಟ್ಟಲೆ ಕೆಡದಂತೆ ಇಡಬಹುದು. ಹಳ್ಳಿಯಿಂದ ಪಟ್ಟಣಕ್ಕೆ ಓದಲು ಬರುವ ಮಕ್ಕಳ ಬ್ಯಾಗಲ್ಲಿ ಕೊರಲು ರೊಟ್ಟಿ ಇದ್ದೇ ಇರುತ್ತಿದ್ದ ಕಾಲವೊಂದಿತ್ತು. ಈಗ ಕೊರಲು ಇಲ್ಲ. ಅದರ ರೊಟ್ಟಿಯ ಪರಿಮಳವೂ ಇಲ್ಲ.



ಸಾವೆ ತಳಿ ವೈವಿಧ್ಯ

ಚಾಮೆ, ಸಾಮೆ ಎಂದೆಲ್ಲಾ ಕರೆಯಲ್ಪಡುವ ಸಾಮೆ ಎಲ್ಲರಿಗೂ ಚಿರಪರಿಚಿತ ಕಿರುಧಾನ್ಯ. ರೈತರ ಕಣ್ಣುತಪ್ಪಿಸಿಯೇ ರಾಗಿ ಹೊಲದಲ್ಲಿ ನುಸುಳುವ ಸಾಮೆ, ಇವತ್ತಿಗೂ ಉಳಿದುಕೊಂಡಿದೆ. ಶೀಘ್ರವಾಗಿ ಕುಯಿಲಿಗೆ ಬರುವ, ಬರಗಾಲ ಎದುರಿಸುವ ಸಾಮರ್ಥ್ಯವಿರುವ, ಸಾರವಿಲ್ಲದ ಮಣ್ಣಲ್ಲೂ ಹುಲುಸಾಗಿ ಬೆಳೆಯುವ ಸಾಮೆಯನ್ನು ರಾಗಿಯ ಮಿಶ್ರ ಬೆಳೆಯಾಗಿ ಇಲ್ಲವೇ, ಸಾಲು ಬೆಳೆಯಾಗಿ ಬೆಳೆಯಬಹುದು. ಒಂದರಿಂದ ನಾಲ್ಕು ಅಡಿ ಎತ್ತರ ಬೆಳೆಯಬಲ್ಲ ಸಾಮೆ ಕಾಳು ಸಣ್ಣಗಿದ್ದು ಬಿಸಿಲಿಗೆ ಹೊಳೆಯುತ್ತವೆ.

ಹರಿ, ಕರಿ, ಬಿಳಿ ಸಾವೆಗಳೆಂದು ಮೂರು ಬಗೆಯಾಗಿದೆ. ರಾಗಿಗೆ ಹದಗೊಳಿಸುವ ಹಾಗೆಯೇ ಹರಿ ಸಾವೆಗೂ ಭೂಮಿಯನ್ನು ಹದಗೊಳಿಸಿ, ಗೊಬ್ಬರ ಹಾಕಿ, ಚೆಲ್ಲಿ ಬಿತ್ತಬೇಕು. ಇದು ಮೂರು ತಿಂಗಳಲ್ಲಿ ಪಕ್ವವಾಗುವುದು. ಕರಿ, ಬಿಳಿ ಸಾವೆಗಳಿಗೆ ಆಷಾಢದಲ್ಲಿ ೨–೩ ಜಾರಿ ಉತ್ತು ದೊಡ್ಡಮಳೆ ಬಂದೊಡನೆ ಬೀಜವನ್ನು ಚೆಲ್ಲಿ ಉತ್ತಿ ನೇಗಿಲು ಹೊಡೆದು ಹಲುಬೆಯನ್ನು ಹೊಡೆಯಬೇಕು. ಇವುಗಳಿಗೆ ಗೊಬ್ಬರ ಬೇಕಾಗಿಲ್ಲ. ಇವು ಮೂರು ತಿಂಗಳಲ್ಲಿ ಪಕ್ವಕ್ಕೆ ಬರುತ್ತವೆ. ಹುಲ್ಲನ್ನು ದನಗಳಿಗೆ ಹಾಕಬಹುದು. ರಾಗಿ, ಭತ್ತದ ಹುಲ್ಲಿಗಿಂತ ಕಡಿಮೆ ಗುಣಮಟ್ಟದ್ದು. ಇದನ್ನು ಕೂರಿಗೆಯಲ್ಲೂ ಬಿತ್ತಬಹುದು. ಆಗ ಜತೆಯಲ್ಲಿ ಅವರೆ, ತೊಗರಿ ಹುರುಳಿ ಇವನ್ನೂ ಬಿತ್ತಬಹುದು.

ಕಾಳನ್ನು ಕುಟ್ಟಿ ಇಲ್ಲವೆ ಮಿಲ್ ಮಾಡಿಸಿ ಅಕ್ಕಿ ಮಾಡಬೇಕು. ಸಾಮೆ ಅಕ್ಕಿಯ ಅನ್ನ ಬಲುರುಚಿ. ಒಣಭೂಮಿ ರೈತರು ಮರೆಯಬಾರದ ತಳಿ ಇದು. ಊಟಕ್ಕೆ ಅಕ್ಕಿ, ದನಕ್ಕೆ ಮೇವು ಕೊಡುವ ಸಾಮೆ ಕೀಟ, ರೋಗಬಾಧೆಯಿಂದ ಮುಕ್ತ.

ಮಲ್ಲಿಗೆ ಸಾವೆ : ಕಲಘಟಗಿ ಮತ್ತು ಹುಬ್ಬಳ್ಳಿ ತಾಲೂಕಿನ ತಳಿ. ಬೆಳೆ ೨ ಪೂಟ್ ಎತ್ತರ, ಖರ್ಚು ಕಡಿಮೆ, ಉತ್ತಮ ಮೇವು, ೩ ತಿಂಗಳ ಬೆಳೆ. ಉತ್ತಮ ಆಹಾರ, ರೋಗ ನಿರೋಧಕ ಶಕ್ತಿ ಇರುತ್ತದೆ. ತಗ್ಗು ಪ್ರದೇಶಗಳಿಗೆ ಸೂಕ್ತ. ಆಶ್ಲೇಷ ಮಳೆ ಬಿತ್ತನೆಗೆ ಸೂಕ್ತ. ನವಣೆ ಕಾಲಕ್ಕೆ ಕೊಯ್ಲು

ಕರೆ ಸಾವೆ: ಕೊಟ್ಟೂರು ಹಾಗೂ ಹಡಗಲಿ ತಾಲೂಕಿನಲ್ಲಿ ಸಿಗುತ್ತವೆ.ಮುಂಗಾರಿ ಬೆಳೆ, ಇಳುವರಿ ಹೆಚ್ಚು, ಈ ಬೆಳೆಗೆ ಮಸಾರಿ ಮಣ್ಣು ಸೂಕ್ತ.

ಹೆಜ್ಜಾಮೆ: ಕನಕಪುರ ಭಾಗದ ಎತ್ತರವಾಗಿ ಬೆಳೆಯುವ ತಳಿ. ಉದ್ದನಾದ ತೆನೆಗಳು, ನಿಧಾನವಾಗಿ ಕುಯಿಲಿಗೆ ಬರುತ್ತದೆ. ರಾಗಿಯ ಮಿಶ್ರ ಬೆಳೆಯಾಗಿ ಬೆಳೆಯುವುದು ರೂಢಿ.

ಕರಿಸಾಮೆ: ಐದು ತಿಂಗಳ ಅವಧಿಯ ಸಾವೆ. ಕಾಂಡದ ಗೆಣ್ಣುಗಳ ಬಳಿ ಕಪ್ಪು ಉಂಗುರದ ರಚನೆ ಇರುತ್ತದೆ. ಗರಿಗಳ ದಿಂಡಿನ ಮೇಲೂ ಕಪ್ಪಾಗಿರುತ್ತದೆ. ಕಾಳು ಕಪ್ಪು ಬಣ್ಣ.

ಮೂರುತಿಂಗಳ ಸಾಮೆ: ಬೇಗ ಕುಯಿಲಿಗೆ ಬರುವ, ಗಿಡ್ಡನಾದ ತಳಿ. ಹುಲ್ಲಿನ ಪ್ರಮಾಣ ಕಡಿಮೆ. ಇಳುವರಿಯೂ ಕಡಿಮೆ.

ಮುಂಗಾರಿ ಸಾಮೆ: ಮೂರು ತಿಂಗಳ ತಳಿ. ಕಣ ಮಾಡುವ ಜಾಗದಲ್ಲಿ ಬೆಳೆಯುತ್ತಾರೆ. ಕಾಳುಗಳು ನುಣುಪು. ಗಿಡ್ಡನಾದ ತಳಿ.

ಪನಿವೆರಗು: ಇಬ್ಬನಿಗೆ ಬೆಳೆಯುವ ಸಾವೆಗಿಂತ ದೊಡ್ಡನಾದ ಹೊಳೆಯುವ ಕಾಳಿನ ತಳಿ. ಬಂಗಾರಪೇಟೆ, ಚಿಂತಾಮಣಿ, ಕೆ.ಜಿ.ಎಫ್ ಭಾಗದ ಮಳೆ ಆಶ್ರಿತ ಪ್ರದೇಶದಲ್ಲಿ ಈಗಲೂ ಬೆಳೆಯುತ್ತಾರೆ.

ಹೆಜ್ಜಾಮೆ






ಊದಲು

ಜಪಾನ್ ಮೂಲದ ಈ ಊದಲು ನಮ್ಮ ದೇಶಕ್ಕೆ ಬಂದು ಸಾವಿರಾರು ವರ್ಷಗಳೇ ಕಳೆದಿವೆ. ಈಜಿಪ್ಟಿನ ಪಿರಮಿಡ್‌ಗಳಲ್ಲಿ ಮಮ್ಮಿಗಳ ಕರುಳಿನಲ್ಲಿ ಇದ್ದ ಧಾನ್ಯಗಳನ್ನು ಪರೀಕ್ಷಿಸಿದಾಗ, ಊದಲೂ ಇತ್ತು ಅಂದರೆ ಇದರ ಪ್ರಾಚೀನತೆ ಮತ್ತು ಜನಪ್ರಿಯತೆ ಅರ್ಥವಾಗುತ್ತದೆ.

ಎರಡರಿಂದ ಆರು ಅಡಿ ಎತ್ತರ ಬೆಳೆಯಬಲ್ಲ ಊದಲಿನ ತೆನೆಯ ಎರಡೂ ಮಗ್ಗುಲಿಗೆ ಇಲುಕುಗಳಿರುತ್ತವೆ. ಎಲೆಗಳು ಬುಡದಲ್ಲಿ ಅಗಲವಾಗಿದ್ದು, ತುದಿ ಚೂಪಾಗಿರುತ್ತದೆ. ತೆನೆಯು ಕುದುರೆ ಬಾಲದಂತೆ ಕಾಣುವುದರಿಂದ ತಮಿಳಿನಲ್ಲಿ 'ಕುದುರೆವಾಲಿ' ಎಂಬ ಹೆಸರಿದೆ. ಬಿಳಿ ಮತ್ತು ಕೆಂಪು ಬಣ್ಣದ ಎರಡು ತಳಿಗಳಿದ್ದು ಬಿಳಿಬಣ್ಣದ ತಳಿಯೇ ಹೆಚ್ಚು ಬಳಕೆಯಲ್ಲಿದೆ. ದನಗಳ ಮೇವಿಗೂ ಸೂಕ್ತ.

ಹೆಚ್ಚು ತೆಂಡೆ ಹೊಡೆವ ಗುಣವಿರುವ ಊದಲು ಮೂರು ತಿಂಗಳಿಗೆಲ್ಲಾ ಕುಯಿಲಿಗೆ ಬರುತ್ತದೆ. ಹಕ್ಕಿಗಳ ಕಾಟ ಉಂಟು. ಒಣಭೂಮಿ ಭತ್ತದ ಜೊತೆ ಮಿಶ್ರ ಮಾಡಿ ಇಲ್ಲವೆ, ಹೊಲದ ಮೂಲೆಯೊಂದರ ಕಡೆ ಬಿತ್ತಿದರೆ ತನ್ನ ಪಾಡಿಗೆ ತಾನು ಸದ್ದಿಲ್ಲದೆ ಬೆಳೆಯುತ್ತದೆ. ಕಳೆ ಇಲ್ಲದಂತೆ ನೋಡಿಕೊಳ್ಳಬೇಕಾದ್ದು ಮುಖ್ಯ. ಕಾಳಿನ ಮೇಲೆ ಐದಾರು ಪದರಗಳಿರುವುದರಿಂದ ಕುಟ್ಟಿ ಅಕ್ಕಿ ಮಾಡುವುದು ಕಷ್ಟದ ಕೆಲಸ. ಮಿಲ್‌ಗೆ ಹಾಕಿಸಿ ಅಕ್ಕಿ ಮಾಡುವುದನ್ನು ರೈತರು ಕಲಿತಿದ್ದಾರೆ. ಅಕ್ಕಿಯಿಂದ ಅನ್ನ ಮಾಡಬಹುದು.



ಗೋಧಿ

ಗೋಧಿ ಕರ್ನಾಟಕಕ್ಕೆ ಹೊಸದೇನೂ ಅಲ್ಲ. ಉತ್ತರ ಕರ್ನಾಟಕದ ಹಿಂಗಾರು ಬೆಳೆಯಾಗಿ ಜನಪ್ರಿಯ. ಬಿಳಿ ಗೋಧಿ, ಕೆಂಪು ಗೋಧಿ, ಬಿಜ್ಜಿಗ, ಗುಂಡು ಗೋಧಿ, ಕಪಲಿ ಗೋಧಿ, ಗಿಡ್ಡ ಗೋಧಿ. ಹೀಗೆ ತಳಿ ವೈವಿಧ್ಯದ ಭಂಡಾರವೇ ಇಲ್ಲಿದೆ. ದಕ್ಷಿಣ ಬಯಲು ಸೀಮೆಯಲ್ಲೂ ಪರಂಪರಾಗತವಾಗಿ ಜವೆಗೋಧಿ ಮತ್ತು ಹೊಟ್ಟೆಗೋಧಿ ಎಂಬ ಎರಡು ಗೋಧಿ ತಳಿಗಳನ್ನು ಬೆಳೆಯುತ್ತಾರೆ.

ಪುಷ್ಯಮಾಸದ ಆದಿಯಲ್ಲಿ ಮೂರುನಾಲ್ಕು ಸಲ ಭೂಮಿಯನ್ನು ಉತ್ತು ಗೊಬ್ಬರ ಹಾಕಬೇಕು. ತಿರುಮುರವನ್ನು ಹೊಡೆದು ಬೀಜವನ್ನು ಕೂರಿಗೆಯಿಂದಾಗಲೀ, ಚೆಲ್ಲಿ ಆಗಲೀ ಬಿತ್ತಬಹುದು. ಪೈರು ಬೆಳೆಯುವಾಗ ಕಳೆ ತೆಗೆಯುವುದು ಅವಶ್ಯಕ. ಅನುಕೂಲವಿದ್ದರೆ ಆಗಾಗ್ಗೆ ನೀರನ್ನು ಕಟ್ಟಬೇಕು. ನಾಲ್ಕು ತಿಂಗಳಿಗೆ ಪಯಿರು ಕಟಾವಿಗೆ ಬರುವುದು.

ಗೋಧಿ ಹುಲ್ಲನ್ನು ಕತ್ತರಿಸಿ, ಮಣ್ಣಿನೊಂದಿಗೆ ಮಿಶ್ರಮಾಡಿ ಗುಡಿಸಲಿನ ಗೋಡೆಗೆ ಗಿಲಾವಿ ಮಾಡುವ ಸಾಂಪ್ರದಾಯಿಕ ಜಾಣ್ಮೆ ಹಳ್ಳಿಗರಲ್ಲಿದೆ. ಮಣ್ಣಿನ ಗೋಡೆಗಿಂತ ಹೆಚ್ಚು ಬಲ; ಮಳೆ ಗಾಳಿಗೆ ಕರಗುವುದಿಲ್ಲ.

ಜವೆ ಗೋಧಿ–ದಕ್ಷಿಣ ಬಯಲು ಸೀಮೆಯ ವಿಶಿಷ್ಟ ತಳಿ


ಮಳೆ ಆಶ್ರಿತ ಮತ್ತು ನೀರಾವರಿಗೆ ಸೂಕ್ತವಾದ ಜವೆಗೋಧಿ ಹಿಂಗಾರು ಬೆಳೆ. 'ಬುಡ್ಡು ಗೋಧಿ' ಎಂಬ ಹೆಸರಿನಿಂದಲೂ ಗುರುತಿಸುತ್ತಾರೆ. ಜವೆ ಗೋಧಿಯ ಕಾಳಿನ ಸುತ್ತ ಬಿರುಸಾದ ಕವಚವಿರುವುದು ವಿಶೇಷ. ಪ್ರತಿ ಕವಚದಲ್ಲೂ ಎರಡು ಇಲ್ಲವೆ ಮೂರು

ಕಾಳುಗಳಿರುತ್ತವೆ. ತುಮಕೂರು ಜಿಲ್ಲೆಯ ಮಧುಗಿರಿ, ಪಾವಗಡ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು ಮತ್ತು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಜವೆಗೋಧಿಯನ್ನು ಬೆಳೆಯುತ್ತಾರೆ. ಉತ್ತರ ಕರ್ನಾಟಕದ ಗದಗ, ಬಾಗಲಕೋಟೆ, ಬಿಜಾಪುರ, ಬೆಳಗಾಂ ಜಿಲ್ಲೆಗಳಲ್ಲೂ ಜವೆಗೋಧಿ ಕಾಣಸಿಗುತ್ತದೆ.


ಬೀರೂರು ಮತ್ತು ತರೀಕೆರೆ ತಾಲ್ಲೂಕಿನ ಅಜ್ಜಂಪುರ, ಶಿವನಿ, ಹಿರೇನಲ್ಲೂರು, ಚಿಕ್ಕನಲ್ಲೂರು ಭಾಗಗಳಲ್ಲಿ ಕಡಲೆಯ ಸಾಲು ಬೆಳೆಯಾಗಿ ಜವೆಗೋಧಿಯನ್ನು ಬೆಳೆಯುತ್ತಾರೆ. ಸೂರ್ಯಕಾಂತಿ ಬೆಳೆಯ ಸಾಲುಗಳ ಮಧ್ಯೆ ಕೂಡ ಜವೆಗೋಧಿ ಬಿತ್ತಬಹುದು. ಮಧುಗಿರಿ ತಾಲ್ಲೂಕಿನಲ್ಲಿ ಮೆಣಸಿನ ತೋಟದ ಬದುಗಳ ಮೇಲೆ ಗೋಧಿ ಬೆಳೆಯುತ್ತಾರೆ.

ಕಪ್ಪುಮಣ್ಣಿಗೆ ಸೂಕ್ತವಾದ ಜವೆಗೋಧಿಯನ್ನು ನೀರಾವರಿ ಸೌಕರ್ಯವಿದ್ದರೆ ಕೆಂಪು ಮಣ್ಣಿನಲ್ಲೂ ಬೆಳೆಯಬಹುದು. ಅಕ್ಟೋಬರ್ ಮಧ್ಯಭಾಗದಿಂದ ಆರಂಭಿಸಿ ನವೆಂಬರ್ ಕೊನೆಯವರೆಗೆ (ಸ್ವಾತಿ ಮಳೆಯಿಂದ ಅನುರಾಧ ಮಳೆವರೆಗೆ) ಬಿತ್ತಬಹುದು. ಉತ್ತು ಹದವಾದ ನೆಲಕ್ಕೆ ಗೋಧಿಯನ್ನು ಕವಚದ ಸಮೇತ ಸಾಲುಗಳಲ್ಲಿ ಬಿತ್ತಬೇಕು; ಕಾಳು ಬಿಡಿಸಿ ಬಿತ್ತುವ ಅಗತ್ಯವೇನಿಲ್ಲ. ಸರಾಸರಿ ನಾಲ್ಕರಿಂದ ಐದು ಅಡಿ ಎತ್ತರ ಬೆಳೆಯುವ ಜವೆಗೋಧಿ ಮೂರೂವರೆಯಿಂದ-ನಾಲ್ಕು ತಿಂಗಳಿಗೆ ಕೊಯಿಲಿಗೆ ಬರುತ್ತದೆ. ಎಕರೆಗೆ ೬ ರಿಂದ ೮ ಚೀಲದವರೆಗೆ ಇಳುವರಿ ನೀಡುತ್ತದೆ. ಹೇಳಿಕೊಳ್ಳುವಂತ ರೋಗ ರುಜಿನಗಳಿಲ್ಲ. ಒಂದು ರೀತಿ ಒರಟು ತಳಿ.

ಜವೆಗೋಧಿಯ ತೊಂದರೆ ಇರುವುದು ಬೆಳೆಯುವುದರಲ್ಲಲ್ಲ; ಒಕ್ಕಣೆ ಮಾಡುವುದರಲ್ಲಿ. ಗಟ್ಟಿಕವಚದ ನಡುವೆ ಸಿಕ್ಕಿಬಿದ್ದಂತಿರುವ ಕಾಳುಗಳನ್ನು ಒನಕೆಯಿಂದ ಕುಟ್ಟಿ




ಬೇರ್ಪಡಿಸಬೇಕಾಗುತ್ತದೆ. ಈ ಗೋಧಿಯ ಹಿಟ್ಟು ಮಾಮೂಲಿ ಗೋಧಿ ಹಿಟ್ಟಿಗಿಂತ ಹೆಚ್ಚು ಜಿಗುಟು, ಚಪಾತಿ ಸ್ವಲ್ಪ ಒರಟು. ಆದರೆ ಇದರ ರವೆಯಿಂದ ತಯಾರಿಸಿದ ತಿಂಡಿಗಳು ಬಲು ಸೊಗಸು. ಉಪ್ಪಿಟ್ಟು, ಪಾಯಸ ತಯಾರಿಯಲ್ಲಿ ಜವೆಗೋಧಿ ಹೆಚ್ಚು ಬಳಕೆಯಾಗುತ್ತದೆ. ಸಕ್ಕರೆ ಕಾಯಿಲೆ ರೋಗಿಗಳಿಗೆ ಅಗತ್ಯವಾದ ಒಡಕು ಗೋಧಿ (ದಲಿಯಾ)ಗೆ ಹೆಚ್ಚುಸೂಕ್ತ.


ಬಿಳಿ ಗೋಧಿ

ಜೋಳಗೋಧಿ: ಜೋಳದ ಕಾಳನ್ನು ಹೋಲುವ ಅಪರೂಪದ ಗೋಧಿತಳಿ. ಗುಂಡು ಗೋಧಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ನೀರಾವರಿ ತಳಿ. ಐದು ತಿಂಗಳಿಗೆ ಕುಯಿಲಾಗುತ್ತದೆ. ಗಟ್ಟಿಯಾದ ಕಾಂಡ ಸಾಧಾರಣ ಎತ್ತರದ ತಳಿ. ಬಿಳಿಯ ಬಣ್ಣದ ಕಾಳು ವಿಶೇಷವಾಗಿ ಇದರ ರವೆಯಿಂದ ಹಾಲುಗ್ಗಿ ಮಾಡುತ್ತಾರೆ. ಒಕ್ಕಣೆ ತ್ರಾಸದಾಯಕ.

ಬಿಳಿಗೋಧಿ: ನೀರಾವರಿ ತಳಿ. ಒಳ್ಳೆಯ ಇಳುವರಿ ಕೊಡುವ ತಳಿ. ಮಾರುಕಟ್ಟೆಗೆ ಸೂಕ್ತ.

ಕೆಂಪುಗೋಧಿ: ಗದಗ್, ರಾಯಚೂರು, ಕೊಪ್ಪಳ ಪ್ರದೇಶದ ಮಳೆ ಆಶ್ರಿತ ತಳಿ. ಬರ ಮತ್ತು ಕೀಟನಿರೋಧಕ. ಮನೆ ಬಳಕೆಗೆ ಉತ್ತಮ.



ಕೆಂಪು ಗೋಧಿ

ಶಾವಿಗೆ ಗೋಧಿ: ಹಾವೇರಿ ಭಾಗದ ಉದ್ದ ತೆನೆ ಮತ್ತು ಕಾಳಿನ ತಳಿ ದೀರ್ಘಾವಧಿ ತಳಿ. ಶಾವಿಗೆ ಮಾಡಲು ಬಳಸುತ್ತಾರೆ.

ಸದಕ: ಬಾಗಲಕೋಟೆಯ ನೀರಾವರಿ ತಳಿ ಇಳುವರಿಗೆ ಹೆಸರುವಾಸಿ. ಮಾರುಕಟ್ಟೆ ಬೇಕೆನ್ನುವವರ ತಳಿ.

ಬುಡ್ಡಗೋಧಿ: ಹಾವೇರಿ ಭಾಗದ ಬಿಳಿಯ ಬಣ್ಣದ ಗುಂಡನೆ ಕಾಳಿನ ತಳಿ

ಕಪಲೆಗೋಧಿ: ಗಟ್ಟಿಯಾದ ಕವಚದ ಬೀದರ್ ತಳಿ.


ಬಿಳಿ ಗೋಧಿ

ಹೊಟ್ಟೆಗೋಧಿ: ಒರಟಾದ ತೆನೆಯ ರೋಗನಿರೋಧ ತಳಿ.

ಇವಲ್ಲದೆ ಮುಳ್ಳುಜವೆಗೋಧಿ, ಹುಡಿಯಲ್ಲಿ ಗೋಧಿ, ಬನ್ಸಿಗೋಧಿ, ಹೊಟ್ಟೆಗೋಧಿ, ಗುಂಡುಗೋಧಿ ಮೊದಲಾದ ತಳಿಗಳಿವೆ.

ಜಮಖಂಡಿ ಭಾಗದ ತಳಿಗಳಲ್ಲಿ ಬನಸಿಗೋಧಿ, ಕರಿಪುಚ್ಚ ಗೋಧಿ, ಕೀರ್ತಿ ಗೋಧಿ, ಸದಕನ ಗೋಧಿ, ಬಿಳಿ ಗೋಧಿ, ಕೆಂಪು ಗೋಧಿ ಮುಖ್ಯವಾದವುಗಳು.


ಹೊಟ್ಟೆ ಗೋಧಿ



ಮುಸುಕಿನ ಜೋಳ

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ, ಕೃಷಿ ವೈವಿಧ್ಯಕ್ಕೆ ಹೆಸರುವಾಸಿ. ಇಲ್ಲಿನ ಸೋಲಿಗರ ಪೋಡು(ಪೋಡು ಎಂದರೆ ಸೋಲಿಗರು ನೆಲೆಸಿರುವ ಹಳ್ಳಿ)ಗಳಲ್ಲಿ ಇವತ್ತಿಗೂ ಹತ್ತಾರು ಥರದ ಮೂಲ ತಳಿಗಳನ್ನು ಕಾಣಬಹುದು. ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಪೋಡುಗಳಲ್ಲಿ ಬಹುವರ್ಣದ ಮುಸುಕಿನ ಜೋಳದ ತಳಿ ಭಂಡಾರವೇ ಇದೆ. ನಾಗರೀಕ ಜಗತ್ತಿನ ರೈತರು ತಮ್ಮೂರಿನ ಮುಸುಕಿನ ಜೋಳದ ತಳಿಗಳನ್ನು ಕಳೆದುಕೊಂಡಿದ್ದರೆ, ಸೋಲಿಗರೂ ಇವತ್ತಿಗೂ ಅವನ್ನ ಜೋಪಾನ ಮಾಡಿಟ್ಟಿದ್ದಾರೆ.

ಕರಿ ಬಿಳಿ ಬೀಜ ಮಿಶ್ರಿತವಾದ 'ಮಲೆ ಜೋಳ', ಸಣ್ಣ ತೆನೆಯ ಗುಂಡು ಕಾಳಿನ ಮಾಸಲು ಕೆಂಪಿನ 'ಕುರಿಪಿಕ್ಕೆ ಜೋಳ', ಕಪ್ಪೆ ಕಣ್ಣ ಜೋಳ, ಕೆಂಪು ಇಲಿಗಾ, ಸಣ್ಣ ಜೋಳ, ಕೂರೆ ಜೋಳ, ಕೆಂಪು ಜೋಳ, ಬಿಳಿ ಟೋಳ... ಹೀಗೆ ಮುಸುಕಿನ ಜೋಳದ ತಳಿಗಳ ಹೆಸರಿನ ಪಟ್ಟಿ ಬೆಳೆಯುತ್ತದೆ. ತಳಿಯಿಂದ ತಳಿಗೆ ಪರಾಗಸ್ಪರ್ಶಕ್ರಿಯೆ ನಡೆಧು ಚಿತ್ತ ಚಿತ್ತಾರದ ತೆನೆಯ ತಳಿಗಳು ಸೃಷ್ಟಿಯಾಗಿವೆ.


ಸೋಲಿಗರು ಮಳೆ ಆಶ್ರಿತ ಬೆಳೆಯಾಗಿ, ಅಪ್ಪಟ ಸಾವಯವದಲ್ಲಿ ಮುಸುಕಿನ ಜೋಳವನ್ನು ಬೆಳೆಯುತ್ತಾರೆ. ರೇವತಿ ಮಳೆ (ಮೇ ತಿಂಗಳು) ಬಣ್ಣದ ಮುಸುಕಿನ ಜೋಳ ಬಿತ್ತನೆಗೆ ಸೂಕ್ತ. ಸಗಣಿ ಗೊಬ್ಬರ ಹಾಕಿ ಹಸನು ಮಾಡಿದ ಹೊಲಕ್ಕೆ ರಾಗಿಯ ಜೊತೆಯಲ್ಲಿ ಸಾಲುಬೆಳೆಯಾಗಿ ಜೋಳವನ್ನು ಬಿತ್ತುತ್ತಾರೆ. ಬೀಜದಿಂದ ಬೀಜಕ್ಕೆ ಒಂದು ಅಡಿ ಅಂತರ ಕೊಡುತ್ತಾರೆ. ಇದು ನಾಲ್ಕರಿಂದ ನಾಲ್ಕೂವರೆ ತಿಂಗಳ ಬೆಳೆ. ಗೌರಿಹಬ್ಬ ಮುಗಿಸಿಕೊಂಡು ಕುಯಿಲಾಗುತ್ತದೆ. ಒಂದಾಳೆತ್ತರ ಮೀರಿ ಬೆಳೆಯುವ ಈ ಜೋಳಕ್ಕೆ ಕನಿಷ್ಟ ಮೂರು ಒಳ್ಳೆಯ

ಮಳೆಯಾದರೂ ಬೇಕು. ಹೆಚ್ಚು ಮಳೆಯಾದರೆ ಇಳುವರಿಯೂ ಹೆಚ್ಚು. ಸಾಲು ಬೆಳೆಯಾಗಿ ಎಕರೆಗೆ ೧೦ ಕ್ವಿಂಟಾಲ್ ಇಳುವರಿ ಬರುತ್ತದೆ. ಏಕ ಬೆಳೆಯಾಗಿ ಮುಸುಕಿನ ಜೋಳ ಬೆಳೆಸುವ ಪದ್ಧತಿ ಸೋಲಿಗರಲ್ಲಿ ಇಲ್ಲ. ಅವರದೇನಿದ್ದರೂ ಬಹುಬೆಳೆ ಪದ್ಧತಿ.

ಬಿಳಿಗಿರಿರಂಗನ ಬೆಟ್ಟ ಸಾಲಿನ ಯರಕನಗದ್ದೆ, ಕನ್ನೇರಿ, ಗೊಂಬೆಗಲ್ಲು, ಕೆರೆ ದಿಂಬ, ಹಿರಿಯಂಬಲ ಪೋಡುಗಳಲ್ಲಿ ಬಣ್ಣದ ಮುಸುಕಿನ ಜೋಳದ ಕೃಷಿ ವ್ಯಾಪಕವಾಗಿದೆ. ಬಿತ್ತನೆಗೆ ಎತ್ತಿಡುವಾಗ, ತೆನೆಯ ಮೇಲಿನ ಸಿಪ್ಪೆ ಸುಲಿಯದೆ ಇಡೀ ತೆನೆಯನ್ನೇ ಗುಂಪು ಗುಂಪಾಗಿ ಮನೆಯ ತೊಲೆಗೆ ಸಾಲಾಗಿ ಕಟ್ಟುತ್ತಾರೆ. ಬಿತ್ತನೆ ಕಾಲಕ್ಕೆ ಸಿಪ್ಪೆ ಬಿಡಿಸಿ, ಬೀಜ ಮಾಡಿಕೊಳ್ಳುತ್ತಾರೆ. 'ಒಂದೇ ಬಣ್ಣದ ಬೀಜ ಬಿತ್ತಿದರೂ, ಮುಂದಿನ ವರ್ಷ ಮತ್ತೆ ಬಣ್ಣ ಬಣ್ಣದ ಬೀಜಗಳೇ ಬರ್ತವೆ' ಎಂಬ ಅನುಭವದ ಮಾತು ಸೋಲಿಗರ ತಾಂಡದಲ್ಲಿರುವ ಅಜ್ಜ ಜಡೆಯಪ್ಪನವರದು.

ಬಣ್ಣದ ಮುಸುಕಿನ ಜೋಳದಿಂದ ಸೋಲಿಗರು ಮುದ್ದೆ, ದೋಸೆ, ರೊಟ್ಟಿ, ಉಪ್ಪಿಟ್ಟು ಮಾಡ್ತಾರೆ. ಸಣ್ಣ ಜೋಳ, ಮಲೆಜೋಳ, ಹುರಿದು ಪಾಪ್‌ಕಾರ್ನ್ ಮಾಡಿ ತಿನ್ತಾರೆ! "ಹದವಾಗಿ ಉರೀಬೇಕು, ಹವಲಾಗ್ತದೆ, ಕಡಲೆಪಪ್ಪು ತಿಂದಂಗಾಯ್ತದೆ ಎನ್ನಿ" ಹೀಗೆನ್ನುತ್ತಾ ಹಿರಿಯಂಬಳ ಪೋಡಿನ ರಾಜಮ್ಮ ಬಾಯಿ ಚಪ್ಪರಿಸುತ್ತಾರೆ.

ಎಳೆಯ ತೆನೆಗಳನ್ನು ಸುಟ್ಟು ತಿನ್ನುವುದು, ಬೇಯಿಸಿ ತಿನ್ನುವುದು ಸೋಲಿಗರ ಮಕ್ಕಳ ಮೆಚ್ಚಿನ ಆಟ-ಊಟ. ಈ ಜೋಳದಿಂದ ಮಾಡುವ ಮುದ್ದೆ ಕೆಂಪು ಬಣ್ಣಕ್ಕಿದ್ದು, ರುಚಿಯಾಗಿರ್ತದೆ, ಬಿಸಿಯಾಗಿದ್ದಾಗಲೇ ತಿನ್ನಬೇಕು.ಬಣ್ಣದ ಮುಸುಕಿನ ಜೋಳ ಸೋಲಿಗರಿಗೆ ಪವಿತ್ರವಾದದ್ದು, ದೇವರಿಗೆ ಎಡೆ ಇಡುವವರೆಗೂ, ಹೊಲದಿಂದ ತೆನೆ ಮುರಿದು ತಿನ್ನುವಂತಿಲ್ಲ. ಕುಯಿಲಿಗೆ ಮುನ್ನ ಐದು ಜೋಳದ ತೆನೆ ಮುರಿದು, ದೇವರಿಗೆ ಇಟ್ಟು ನಂತರ ತಿನ್ನಬೇಕು ಎಂದೆಲ್ಲಾ ಸೋಲಿಗರು ನಂಬಿದ್ದಾರೆ.





ತೊಗರಿ ತಳಿ ವೈವಿಧ್ಯ

ಇದರಲ್ಲಿ ತುರುಕ ತೊಗರಿ, ಹೊಲದ ತೊಗರಿ ಎಂದು ಎರಡು ವಿಧ. ತುರುಕ ತೊಗರಿಯನ್ನು ಗದ್ದೆ ತೋಟಗಳಲ್ಲಿ ನೀರಾವರಿಯಿಂದ ಬೆಳೆಯುತ್ತಾರೆ. ಹೊಲದ ತೊಗರಿಯನ್ನು ರಾಗಿಯ ಜೊತೆ ವಿಶೇಶವಾಗಿ ಬೆಳೆಯುವರು. ಒಕ್ಕುವಾಗ ಕಾಯಿಗಳನ್ನು ತರಿಯಬೇಕೇ ಹೊರತು ಗಿಡಗಳನ್ನು ಕೀಳಕೂಡದು. ತೊಗರಿಯ ಹೊಟ್ಟು ದನಗಳಿಗೆ ಒಳ್ಳೆಯ ಮೇವಾಗಿದೆ. ಕಡ್ಡಿಗಳು ಒಲೆಗೆ ಉಪಯೋಗವಾಗುತ್ತವೆ.

ಕೆಂಪು ತೊಗರಿ: ರಾಗಿ ಬೆಳೆಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಜನಪ್ರಿಯ ತೊಗರಿತಳಿ. ಕೆಂಪನೆಯ ಸಣ್ಣಕಾಳುಗಳು ಬೇಳೆಗೆ ಅತ್ಯಂತ ರುಚಿ. ಅಕ್ಕಡಿ ಬೇಳೆಯಾಗಿ ಬೆಳೆಯುತ್ತಾರೆ.

ಬಿಳಿತೊಗರಿ: ಬಿಳಿಬಣ್ಣದ ಕಾಳು, ಕೊಂಚ ಮಬ್ಬಗಿರುತ್ತಾದೆ. ಇಳುವರಿಯಲ್ಲಿ ಕೆಂಪು ತೊಗರಿಗಿನ ಉತ್ತಮ. ಐದರಿಂದ ಆರುತಿಂಗಳ ಅವಧಿ.

ಮರ ತೊಗರಿ: ಕೆಂಪು ಮಿಶ್ರಿತ ಕಂದು ಬಣ್ಣದ ಬೀಜ ಗಾತ್ರದಲ್ಲಿ ಕೆಂಪು ತೊಗರಿ ಮತ್ತು ಬಿಳಿತೊಗರಿಗಿಂತ ದಪ್ಪ. ಬಹುವಾರ್ಷಿಕ ಬೇಳೆ. ಚಿಕ್ಕ ಮರವಾಗಿ ಬೆಳೆಯುತ್ತದೆ. ವರ್ಷಪೂರ ತೊಗರಿಕಾಯಿ ತರಕಾರಿಗೆ ಸಿಗುತ್ತದೆ.

ಮಾಗಡಿ ತೊಗರಿ: ಮಾಗಡಿ ತಾಲ್ಲೂಕಿನ ಜನಪ್ರಿಯ ತೊಗರಿ ತಳಿ ಬೆಂಗಳೂರಿನ ನಿವಾಸಿಗಳು ಈ ತೊಗರಿ ಮಾರುಕಟ್ಟೆಗೆ ಬರುವುದನ್ನೇ ನಿರಿಕ್ಷಿಸುತ್ತಾರೆ. ತರಕಾರಿಗೆ ಉತ್ತಮವಾದ ತಳಿ ಬೂದುಬಣ್ಣದ ಕಾಳಿನ ಮೇಲೆ ಕಂದು ಮಚ್ಚೆಗಳು ಇರುತ್ತವೆ. ಗಿಡ ಆಳೆತ್ತರ ಬೆಳೆಯುತ್ತದೆ. ಮೊದಲ ಮಳೆಗೆ ಬಿತ್ತನೆ ಗೌರಿಹಬ್ಬಕ್ಕೆ ಕೊಯಲು.

ಚುಕ್ಕಿತೊಗರಿ: ಕಾಳಿನ ಮೇಲಿನ ಆಕಾರ್ಷಕ ಚುಕ್ಕಿಗಳು ಇರುತ್ತವೆ. ದಪ್ಪಕಾಳಿನ ತಳಿ ಎತ್ತರ ಬೆಳೆಯುತ್ತದೆ. ಬಠಾಣಿಯ ಸಾಲು ಬೆಳೆಯಾಗಿ ಬೆಳೆಯುವುದು ರೂಢಿ.

ಹೆಸರು

ಕಪ್ಪು ಹೆಸರು, ಹಸಿರು ಹೆಸರು ಎಂದು ಎರಡು ವಿಧ. ಇದನ್ನು ಹೈನುಕಾರು ಬೆಳೆಗಳಾಗಿ ಬೆಳೆಯಬಹುದು. ಖುಷ್ಕಿ ನೆಲಕ್ಕೆ ಅಥವಾ ಗದ್ದೆ ಪೈರು ತೆಗೆದ ನಂತರ ಬೆಳೆಯಬಹುದು. ಗೊಬ್ಬರ ಬೇಕಾಗಿಲ್ಲ. ವೈಶಾಖದಲ್ಲಿ ಭೂಮಿಯನ್ನು ಎರಡಾವೃತ್ತಿ ಉತ್ತು ಬೀಜ ಚೆಲ್ಲಿ ನೇಗಿಲು ಹೊಡೆದು, ಹಲುಬೆ ಹೊಡೆಯಬೇಕು. ಇನ್ನೇನು ಕೆಲಸವನ್ನೂ ಮಾಡಬೇಕಾದ್ದಿಲ್ಲ. ಮೂರು ತಿಂಗಳಲ್ಲಿ ಬೆಳೆ ಕೊಯಿಲಿಗೆ ಬರುವುದು.

ಕರಿ ಹೆಸರು : ಉತ್ತರ ಕರ್ನಾಟಕದ ನಾಟೀ ಹೆಸರು ತಳಿ.

ಚಿಕ್ಕ ಗಾತ್ರದ ಕಪ್ಪು ಬಣ್ಣದ ಕಾಳು. ಸ್ವಲ್ಪ ಮಟ್ಟಿಗೆ ಉದ್ದಿನ ಕಾಳನ್ನು ಹೋಲುತ್ತದೆ. ಇದನ್ನು ತೊಗರಿಯ ಜೊತೆಗೆ ಅಕ್ಕಡಿ ಸಾಲಿನಲ್ಲಿ ಬೆಳೆಸುತ್ತಾರೆ. ಇದು ಬಳ್ಳಿಯ ರೂಪದಲ್ಲಿ ಬೆಳೆಯುತ್ತದೆ. ಇದರ ಕಾಳಿನಿಂದ ಗುಗ್ಗರಿ, ಬೇಳೆ ಪಾಯಸ, ಹಾಗೂ ಉಂಡೆಯನ್ನು ಮಾಡುತ್ತಾರೆ.

ಮರಿ ಹೆಸರು ಅಥವಾ ಗಡ್ಡಿ ಹೆಸರು: ಇದನ್ನು ಹಿಂಗಾರಿನಲ್ಲಿ ಜೋಳದ ಜೊತೆಗೆ ಕೃಷ್ಣಾ ನದೀ ತೀರದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಹಳ್ಳಿಗಳಲ್ಲಿ ಹಾಗೂ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೆಲವೇ ಹಳ್ಳಿಗಳಲ್ಲಿ ಬೆಳೆಯುತ್ತಾರೆ.ಇದರ ಕಾಳು ಕಪ್ಪಾಗಿದ್ದು ಹೊಳಪಿರುತ್ತದೆ. ಇದರ ಕಾಳನ್ನು ಗುಗ್ಗರಿ, ಬೇಳೆ ಪಾಯಸ, ಉಂಡೆಗಳನ್ನು ಮಾಡಲು ಉಪಯೋಗಿಸುತ್ತಾರೆ.

ಅಚ್ಚ ಹೆಸರು: ಕುಷ್ಟಗಿ ಭಾಗದ ಅಚ್ಚ ಕಾಳಿನ ಅಚ್ಚ ಬಣ್ಣದ ತಳಿ.

ಕರಿ ಹೆಸರು: ಕರಿ ಬಣ್ಣದ ಕಾಳು, ಮುಂಗಾರಿನ ಅಕ್ಕಡಿ ಬೆಳೆ

ಮಿಂಚು ಹೆಸರು: ಕುಷ್ಟಗಿ ಭಾಗದ ದಪ್ಪ ಕಾಳು ತಳಿ.



ಅವರೆ

ಇದರಲ್ಲಿ ದಬ್ಬೆ, ಬಿಳಿ, ಕೆಂಪು, ಮಣಿ ಅವರೆಗಳೆಂದು ನಾಲ್ಕು ವಿಧ. ಇದನ್ನು ಒಂಟಿಯಾಗಿ ಬೆಳೆಯುವುದಿಲ್ಲ. ರಾಗಿಯ ಜೊತೆಯಲ್ಲಿ ಬೆಳೆಯುವರು. ಇದು ಕರೆಯುವ ದನಗಳಿಗೆ ಉತ್ತಮ ಆಹಾರವಾಗಿದೆ.

ದೊಡ್ಡ ಅವರೆ : ಕೊಳ್ಳೇಗಾಲ ಭಾಗದ ಅವರೆ ತಳಿ.

ಚಿನಗಲ ಅವರೆ : ರುಚಿಯಾದ ಹಸಿಕಾಳು, ಗಾತ್ರದಲ್ಲಿ ಸಣ್ಣ.

ಕೆಂದವರೆ ತಳಿ: ಕೊಳ್ಳೇಗಾಲ ಭಾಗದ ತಳಿ.

ದಬ್ಬ ಅವರೆ: ಅಗಲವಾದ ಕಾಯಿ, ಬೇಳೆಗೆ ಉತ್ತಮ.

ಗಂಟವರೆ: ಕಲಘಟಗಿ ಪ್ರದೇಶದ ತಳಿ

ತಳ್ಳ ಅವರೆ: ಕಲಘಟಗಿ ಪ್ರದೇಶದ ತಳಿ

ಚಳ್ಳವರೆ : ಕಲಘಟಗಿ ಪ್ರದೇಶದ ತಳಿ

ಅಲಸಂದೆ

ಇದರಲ್ಲಿ ಕರಿ, ಬಿಳಿ, ಕೆಂಪು ಎಂದು ಮೂರುಬಗೆಯ ಕಾಳುಗಳಿವೆ.ಸಾಧಾರಣವಾಗಿ ಹರಳು ಗಿಡದ ಜೊತೆಯಲ್ಲಿ ಬೆಳೆಯಬಹುದು.

ಬಿಳಿ ಅಲಸಂದಿ: ಕಲಘಟಗಿ ಮತ್ತು ಹುಬ್ಬಳ್ಳಿ ಪ್ರದೇಶದ ತಳಿ

ಕೆಂಪು ಅಲಸಂದಿ: ಕೆಂಪುಬಣ್ಣದ ಕಾಯಿ.

ಕರಿ ಅಲಸಂದಿ: ಕರಿಬಣ್ಣದ ಕಾಯಿ.

ಕಡಲೆ

ಇದರಲ್ಲಿ ಕರಿ, ಬಿಳಿ, ಎಂದು ೨ ವಿಧಗಳಿವೆ. ಇದನ್ನು ಗೋಧಿಯ ಜತೆಯಲ್ಲಿ ಅಥವಾ ಒಂಟಿಯಾಗಿ ಬೆಳೆಯಬಹುದು. ಸಾಮಾನ್ಯವಾಗಿ ಯಾವ ವಿಧವಾದ ಭೂಮಿಯಲ್ಲಿ ಬೆಳೆಯುವುದಾದರೂ, ಕಪ್ಪು ನೆಲದಲ್ಲಿ ಬೆಳೆದಷ್ಟು ಹುಲುಸಾಗಿ ಇನ್ನು ಯಾವುದರಲ್ಲಿಯೂ ಬೆಳೆಯುವುದಿಲ್ಲ. ಸೆಪ್ಟೆಂಬರ್, ಅಕ್ಟೋಬರ್ ನಲ್ಲಿ ಬಿತ್ತಬೇಕು. ಪೈರು ನಾಲ್ಕು ತಿಂಗಳಲ್ಲಿ ಪಕ್ವಕ್ಕೆ ಬರುತ್ತದೆ. ಸಾಧಾರಣ ವ್ಯವಸಾಯವೇ ಸಾಕು. ಗೊಬ್ಬರ ಬೇಕಾಗಿಲ್ಲ. ಕಳೆ ಕೀಳುವುದಿಲ್ಲ. ಹೂ ಬಿಡುವುದಕ್ಕೆ ಮುಂಚೆ ಕುಡಿಗಳನ್ನು ಕಿತ್ತು ಬೇಯಿಸಿ ತಿನ್ನಬಹುದು. ತುದಿ ಕೀಳುವುದರಿಂದ ಗಿಡಗಳು ಕವಲೊಡೆದು ಫಸಲು ಹೆಚ್ಚುವುದು.

ಉದ್ದು

ಇದರಲ್ಲಿ ಚಿಕ್ಕದು ದೊಡ್ಡದು ಎಂದು ಎರಡು ಬಗೆ.

ಚಿಕ್ಕ ಉದ್ದು ಬೆಳೆಯಬೇಕಾದರೆ ಶಿವರಾತ್ರಿಯಾದ ಏಳನೇ ದಿವಸದ ನಂತರ ಒಂದು ಹದ ಮಳೆ ಬಿದ್ದ ಮೇಲೆ ಭೂಮಿಯನ್ನು ಮೂರು ಸಲ ಉತ್ತಿ ಬೀಜವನ್ನು ಚೆಲ್ಲಿ ಮತ್ತೊಂದಾವೃತ್ತಿ ಉತ್ತಿ ಬಿಡುವರು. ನೀರುಕಟ್ಟುವುದು, ಗೊಬ್ಬರ ಹಾಕುವುದು, ಕಳೆ ತೆಗೆಯುವುದು ಇವು ಯಾವುವೂ ಅವಶ್ಯಕವಿಲ್ಲ.

ದೊಡ್ಡ ಉದ್ದಿಗೆ ಹೈನು ಉದ್ದು ಎಂದು ಹೆಸರು.ಗೌರೀ ಹಬ್ಬವಾದ ಮೇಲೆ ಭೂಮಿಯನ್ನು ಉತ್ತು ಹದಿನೈದು ದಿವಸಗಳ ನಂತರ ಬಿತ್ತಬೇಕು. ಇದು ಚಿಕ್ಕ ಉದ್ದಿಗಿಂತ ಒಳ್ಳೆಯದು. ಇವುಗಳನ್ನು ಕೂರಿಗೆಯಿಂದಲೂ ಬಿತ್ತಬಹುದು. ಚಿಕ್ಕ ಉದ್ದು ನಾಲ್ಕು ತಿಂಗಳಲ್ಲಿಯೂ, ದೊಡ್ಡ ಉದ್ದು ಮೂರು ತಿಂಗಳಲ್ಲಿಯೂ ಪಕ್ವಕ್ಕೆ ಬರುವುದು. ಗಿಡಗಳನ್ನು ಕಿತ್ತು ಒಣಗಿಸಿ ಒಕ್ಕಬೇಕು. ಕಾಳು ತೆಗೆದು ನಂತರದ ಹೊಟ್ಟು ದನಗಳಿಗೆ ಒಳ್ಳೆಯ ಮೇವಾಗಿದೆ.

ಕಲಘಟಗಿ ಮತ್ತು ಹುಬ್ಬಳ್ಳಿ ತಾಲೂಕಿನಲ್ಲಿ ಕರಿ ಉದ್ದು ಇದೆ.



ಮಾಲೆಡ್ಡ

ರಾಜಗೀರ

ಆಕರ್ಷಕ ತೆನೆಗಳ ಧಾನ್ಯದ ಸೊಪ್ಪಿನ ತಳಿ. ರಾಗಿಯ ಮಿಶ್ರ ಬೆಳೆಯಾಗಿ ಬೆಳಯುತ್ತಾರೆ. ಬಿಳಿ ಮತ್ತು ಕೆಂಪುಬಣ್ಣದ ತಳಿಗಳಿವೆ. ಬಿಳಿಗಿರಿರಂಗನ ಬೆಟ್ಟದ ಸಾಲಿನಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಗಸೆಗಸೆ ಬೀಜಗಳನ್ನು ಹೋಲುವ ರಾಜಗೀರದ ಕಾಳನ್ನು ಹುರಿದು, ಹವಲು ಮಾಡಿ ಬೆಲ್ಲದ ಪಾಕ ಸೇರಿಸಿ ಉಂಡೆ ಮಾಡಿ ತಿನ್ನುತ್ತಾರೆ.

ಮಾಲೆಡ್ಡ, ಯಡ್ಡನಕೀರ ಎಂಬ ತಳಿಗಳಿವೆ.

ಹುರುಳಿ

ಕರಿ, ಬಿಳಿ, ಕೆಂಪು ಹುರುಳಿಗಳೆಂದು ಮೂರು ಬಗೆ.ಇದನ್ನು ಕುದುರೆಗಳಿಗೆ ವಿಷೇಶವಾಗಿ ಉಪಯೋಗಿಸುತ್ತಾರೆ. ಇದನ್ನು ಪಾಳು ಭೂಮಿಯಲ್ಲಿಯೂ ಬೆಳೆಯಬಹುದು. ಹೆಚ್ಚು ವ್ಯವಸಾಯ ಬೇಕಾಗಿಲ್ಲ.ಶ್ರಾವಣ, ಕಾರ್ತಿಕಗಳಲ್ಲಿ ಭೂಮಿಯನ್ನು ಎರಡಾವೃತ್ತಿ ಉತ್ತು ಒಂದು ಹದ ಮಳೆಬಂದೊಡನೆ ಬಿತ್ತಿ ನೇಗಿಲು ಹೊಡೆಯುವರು. ಮಳೆ ಬಾರದಿದ್ದರೆ ಕಾಳನ್ನು ಮೂರುಗುಂಟೆ ಹೊತ್ತು ನೀರಿನಲ್ಲಿ ನೆನೆಹಾಕಿ ಬಿತ್ತಬೇಕು.

ಬಟಾಣಿ

ಇದನ್ನು ಹೊಲಗಳಲ್ಲಿ ವಿಷೇಶವಾಗಿ ಬೆಳೆಯುವುದಿಲ್ಲ. ಕಾಯಿ ಪಲ್ಯದಂತೆ ತೋಟಗಳಲ್ಲಿ ಬೆಳೆಯುತ್ತಾರೆ. ಹೊಲದಲ್ಲಿ ಬೆಳೆದರೆ ಕಡಲೆಯ ಹಾಗೆ ಬೆಳೆಯಬೇಕು. ಇಲ್ಲವಾದರೆ ನೇಗಿಲು ಸಾಲಿನಲ್ಲಿ ಬಿತ್ತಿ ಗಿಡಗಳು ಒಂದಡಿ ಉದ್ದವಾದ ನಂತರ ಬದುಗಳನ್ನು ಕಟ್ಟಿ ಬಳ್ಳಿಗಳು ಹಬ್ಬುವುದಕ್ಕೆ ಊರೆಗಳನ್ನು ಕೊಡಬೇಕು. ಮತ್ತು ಗೊಬ್ಬರವನ್ನು ಹಾಕಬೇಕು.

ಮಾಗಡಿ ತಾಲ್ಲೂಕಿನಲ್ಲಿ ಬಠಾಣಿ ಕೃಷಿ ವ್ಯಾಪಕವಾಗಿದೆ. ಮುಂಗಾರು ಮಳೆಗೆ ಬೀಜ ಬಿತ್ತಿ, ಗೌರಿಹಬ್ಬಕ್ಕೆ ಕುಯಲು ಮಾಡುತ್ತಾರೆ. ಚುಕ್ಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ

ಹಳ್ಳಿಗಳಲ್ಲಿ ತೊಗರಿ, ನೆಲೆಗಡಲೆಯ ಜೊತೆಗೆ ಬಠಾಣಿ ಬಿತ್ತುವ ಪದ್ಧತಿ ಇದೆ.



ಬೋಡು ಹರಳು

ಹರಳು (ಔಡಲ)

ಇದರಲ್ಲಿ 'ಚಿಟ್ಟ ಹರಳು, ದೊಡ್ಡ ಹರಳು' ಎಂದು ೨ ವಿಧ. ಚಿಟ್ಟ ಹರಳು ಮರವಾಗಿ ಬಹಳ ದಿವಸಗಳವರೆಗೂ ಫಲ ಬಿಡುತ್ತದೆ. ದೊಡ್ಡ ಹರಳಿನಲ್ಲಿ ಚಿಟ್ಟ ಹರಳಿಗಿಂತ ಎಣ್ಣೆ ಬಹಳ ಕಮ್ಮಿಯಾಗಿರುತ್ತದೆ. ಹರಳನ್ನು ಒಂಟಿಯಾಗಿ ಬೆಳೆಯುವುದಲ್ಲದೆ ಹತ್ತಿ, ಕಬ್ಬು ಬೆಳೆಗಳ ಹೊಲಗಳ ಸುತ್ತಲೂ ಬೆಳೆಯಬಹುದು. ಒಂಟಿಯಾಗಿ ಬೆಳೆದರೆ ಅದರ ಮಧ್ಯೇ ಅಲಸಂದಿ, ಹೆಸರು, ಅವರೆ ಹಾಕಬಹುದು. ಇದು ಸಾಧಾರಣವಾಗಿ ಕಲ್ಲುಭೂಮಿಯಲ್ಲಿಯೂ, ಮರಳುಭೂಮಿಯಲ್ಲೂ ಚೆನ್ನಾಗಿ ಬೆಳೆಯುತ್ತದೆ.

ವೈಶಾಖದಲ್ಲಿ ಭೂಮಿಯನ್ನು ನಾಲ್ಕುವೃತ್ತಿ ಉತ್ತು ಮಳೆ ಬಂದೊಡನೆ ಒಂದು ಮೊಳೆ ಅಂತರದಲ್ಲಿ ನೇಗಿಲು ಸಾಲು ಹೊಡೆದು ಅದರಲ್ಲಿ ೧೮-೨೦ ಅಂಗುಲಗಳ ಅಂತರಕ್ಕೆ ಬೀಜಗಳನ್ನು ಬಿತ್ತಿ ನೇಗಲಿಂದಾಗಲಿ ತಿರುಮರದಿಂದಾಗಲಿ ಮುಚ್ಚಬೇಕು. ಗಿಡಗಳು ಗೇಣುದ್ದವಾದಾಗ, ಎಡೇಕುಂಟೆ ಹೊಡೆಯಬೇಕು ಗಿಡಗಳಿಗೆ ಬದುಗಳನ್ನು ಕಟ್ಟಬಹುದು. ಎರಡು ತಿಂಗಳ ನಂತರ ಮಣ್ಣು ಸಡಿಲಿಸಿ ಕಳೇ ತೆಗೆಯಬೇಕು. ೫ ತಿಂಗಳಲ್ಲಿ ಕಾಯಿಗಳು ಬಲಿಯುತ್ತವೆ. ಬೀಜಗಳನ್ನು ಒಂದೇ ಸಲ ಕೂಡುಹಾಕುವುದಕ್ಕಾಗುವುದಿಲ್ಲ. ಕಾಯಿಗಳು ಬಲಿತು ಹೊಣಗಿದ ಹಾಗೆಲ್ಲಾ ಕಿತ್ತು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಬಡಿದು ಬೀಜಗಳನ್ನು ಬೇರೆಮಾಡಬೇಕು. ಕಾಯಿಗಳು ಬಲಿತಹಾಗೆಲ್ಲಾ ವಾರಕ್ಕೊಂದು ಆವೃತ್ತಿ ಮೂರುತಿಂಗಳವರೆಗೂ ಬಿಡಿಸಬೇಕಾಗುತ್ತದೆ. ಇದರ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸಬಹುದು.

"ಕೈಯೆಣ್ಣೆ ಹಾಕಿರಿ ತಂಪಾಗಿರುತ್ತದೆ" ಎನ್ನುವ ಮಾತು ಹಳ್ಳಿಗರದು. ಹಳೆಯ ಕಾಲದಲ್ಲಿ ಒಗ್ಗರಣೆಗೂ ಹರಳೆಣ್ಣೆ ಹಾಕುತ್ತಿದ್ದರು.

ಕೆಂಪು ಹರಳು: ತಿಪಟೂರು ಭಾಗದ ಅಪರೂಪಕ್ಕೆ ಕಂಡು ಬರುತ್ತದೆ. ಬಹುವಾರ್ಷಿಕ ತಳಿ. ೫ ವರ್ಷ ಇರುತ್ತದೆ. ಹರಳಿನ ಗೊನೆ, ಕೊಳಪೆ, ಕಾಯಿ ಎಲ್ಲ ಕೆಂಪು. ತಿಪ್ಪೇ ಮೇಲೆ ಅವಷ್ಟಕ್ಕೆ ಅವೇ ಹುಟ್ಟಿಕೊಳ್ಳುತ್ತವೆ. ತೋಟ, ಮಡಿಕೆ, ಹೊಲಗಳ ಏರಿಮೇಲೆ ಇವನ್ನು ಹಾಕುತ್ತಾರೆ.


ಬಹುವಾರ್ಷಿಕ ತಳಿ, ಕೆಂಪನೆ ಬಣ್ಣದ ಆಕರ್ಷಕ ಗೊನೆಯತಳಿ, ಗೊನೆ, ಎಲೆ, ಕೊಂಬೆ ಎಲ್ಲವೂ ಕೆಂಪು. ಎಣ್ಣೆ ಅಂಶ ಜಾಸ್ತಿ. ಇತರ ಹರಳಿಗಿಂತ ಹೆಚ್ಚು ತಂಪು. ತಿಪ್ಪೇ ಮೇಲೆ ಅವಾಗಿ ಹುಟ್ಟುವುದು ಸಾಮಾನ್ಯ. ತಿಪಟೂರು, ದೇವದುರ್ಗದ ಭಾಗದಲ್ಲಿ ಕಾಣಸಿಗುತ್ತದೆ.

ಚಿಟ್ಟಹರಳು: ತಿಳಿನೀಲಿ ಬಣ್ಣದ, ಸಣ್ಣಗಾತ್ರದ ಕಾಯಿ ಬೀಜಗಳ ಗಾತ್ರ ಚಿಕ್ಕದು.


ಬೋಡು ಹರಳು: ಕಾಯಿಗಳ ಮೇಲೆ ಮುಳ್ಳಿಲ್ಲದೆ ಸಪುರವಾಗಿ ಇರುವ ತಳಿ ಕಾಯಿಗೊಂಚಲು ಬೂದು ಮಿಶ್ರಿತ ನೀಲಿ ಬಣ್ಣಕ್ಕಿರುತ್ತದೆ. ತಿಪಟೂರು ಪ್ರದೇಶದಲ್ಲಿ ಸಾಮಾನ್ಯ.



ರುದ್ರಾಕ್ಷಿ ಹರಳು: ದೆವ್ವದ ಹರಳು ಅಥವಾ ಬಣ್ಣದ ಹರಳು ಎಂಬ ಹೆಸರುಗಳು ಇದಕ್ಕಿವೆ. ಗಿಡವು ಸಣ್ಣ ಹರಳಿಗಿಂತ ಅಗಲ, ಎತ್ತರಕ್ಕೆ ಬೆಳೆಯುತ್ತದೆ. ಬೇರುಗಳು ಹೆಚ್ಚಾಗಿ ಅಗಲಕ್ಕೆ ಹರಡಿಕೊಂಡು ಮಣ್ಣನ್ನು ಸಡಿಲಗೊಳಿಸುತ್ತವೆ. ತಿಪಟೂರು,ಬೆಂಗಳೂರು ಗ್ರಾಮಾಂತರ, ಹಾಸನ, ಅರಸಿಕೆರೆ, ಚನ್ನರಾಯಪಟ್ಟಣದಲ್ಲಿ ಬದುಗಳಲ್ಲಿ ಅಥವಾ ಇತರ ಬೆಳೆಗಳ ಮಧ್ಯೆ ಮಿಶ್ರ ಬೆಳೆಯಾಗಿ ಬೆಳೆಯಲಾಗುತ್ತದೆ. ರುದ್ರಾಕ್ಷಿ ಹರಳಿನ ವಿಶಿಷ್ಟತೆ ಎಂದರೆ ಇದನ್ನು ಕೋಯ್ಲು ಮಾಡುವುದು ತಡವಾದರು ಸಣ್ಣ ಹರಳಿನಂತೆ ದೂರ ಸಿಡಿಯುವುದಿಲ್ಲ. ಗಿಡದ ಸುತ್ತ ಮುತ್ತಿನಂತೆ ಬಿದ್ದಿರುತ್ತವೆ. ಸುಲಭವಾಗಿ ಆರಿಸಿಕೊಳ್ಳ ಬಹುದು.



ಮರಹರಳು: ಬಹುವಾರ್ಷಿಕ ತಳಿ ಸಣ್ಣ ಮರವಾಗಿ ಬೆಳೆಯುತ್ತದೆ. ಮೊಳಕೈ ಉದ್ದದ ಗೊನೆಗಳು ದಪ್ಪಕಾಳು. ಎಲೆಗಳು ಮೇಕೆ ಕುರಿಗಳಿಗೆ ಒಳ್ಳೆಯ ಮೇವು.



ಕಾಡು ಎಳ್ಳು

ಎಳ್ಳು

ಯುಗಾದಿ ಕಳೆದ ನಂತರ ಮೊದಲ ಮಳೆಗೆ ಎಳ್ಳು ಬಿತ್ತುವ ಪದ್ಧತಿ ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ. ಎಳ್ಳು ಕಿತ್ತು ರಾಗಿ ಬಿತ್ತುತ್ತಾರೆ. ಬಿಳಿ ಮತ್ತು ಕಪ್ಪು ಎಳ್ಳು ತಳಿಗಳಿವೆ. ಬಿಳಿ ಎಳ್ಳಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದೆ. ತಿಪಟೂರು ಭಾಗದಲ್ಲಿ ಕಾಡುಎಳ್ಳು ಕಳೆಯಾಗಿ ಬೆಳೆಯುತ್ತದೆ.

ಕುಸುಬೆ

ಇದನ್ನು ಗೋಧಿಯ ಜತೆಯಲ್ಲಿಯೂ, ಕಡಲೆಯ ಜತೆಯಲ್ಲಿಯೂ ಮತ್ತು ಒಂಟಿಯಾಗಿಯೂ ಬೆಳೆಯಬಹುದು. ಒಂಟಿಯಾಗಿ ಬೆಳೆಯುವುದಾದರೆ ಜ್ಯೇಷ್ಠಾಷಾಢದಲ್ಲಿ ಭೂಮಿಯನ್ನು ಉತ್ತು ಒಂದು ಹದ ಮಳೆ ಬಿದ್ದೊಡನೆ ಕೂರಿಗೆಯಿಂದ ಅಥವಾ ಚೆಲ್ಲಿ ಬಿತ್ತನೆ ಮಾಡಿ ತಿರುಮರ ಹೊಡೆಯಬೇಕು. ಪೈರು ೫-೬ ತಿಂಗಳಲ್ಲಿ ಪಕ್ವವಾಗುವುದು. ಪೈರು ಚೆನ್ನಾಗಿ ಒಣಗಿದರೆ ಬೀಜಗಳು ಉದುರಿ ಹೋಗುವುದರಿಂದ ಸ್ವಲ್ಪ ಮುಂಚೆಯೇ ಕುಯಿದು ರಾಶಿ ಮಾಡಬೇಕು. ಎಣ್ಣೆ, ದನಗಳಿಗೆ ಹಿಂಡಿ.

ಹತ್ತಿ

ಜೈದರ ಹತ್ತಿ: ಉತ್ತರಕರ್ನಾಟಕ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಕಪ್ಪು ಮಣ್ಣಿನ ತಳಿ ಸಾವಯವ ಕೃಷಿಗೆ ಸುಲಭವಾಗಿ ಒಗ್ಗುತ್ತದೆ.

೫.೧/೨ ತಿಂಗಳ ಬೆಳೆ, ಎಣ್ಣೆ, ದನಗಳಿಗೆ ಹಿಂಡಿ.

ಮರಹತ್ತಿ: ಕೆಂಪು ಬಣ್ಣದ ಹೂವಿನ ಬಹುವಾರ್ಷಿಕತಳಿ ಮನೆಬಳಕೆಗೆ ಸೂಕ್ತ. ಆಳೆತ್ತರ ಮೀರಿ ಬೆಳೆಯುತ್ತದೆ.



ಶೇಂಗಾ (ನೆಲಗಡಲೆ)

ಇದಕ್ಕೆ ಮರಳು ಭೂಮಿ, ಮರಳು ಮಿಶ್ರಿತಕೆಬ್ಬೆ ಅಥವಾ ಎರೆಭೂಮಿ ಉತ್ತಮವಾದವು. ಎರೇ ಭೂಮಿಯಲ್ಲಿ ಬೆಳೆದ ಕಾಯಿಗಳನ್ನು ಆಯಿಸುವುದಕ್ಕೆ ಕಷ್ಟ ಹೆಚ್ಚು.


ಗೆಜ್ಜೆಶೇಂಗಾ: ನಾಲ್ಕು ತಿಂಗಳ ಬೆಳೆ ಸಣ್ಣಕಾಯಿ. ಬೇಗ ಕಟಾವಿಗೆ ಬರುತ್ತದೆ. ಉತ್ತಮ ಇಳುವರಿ. ಮಾರುಕಟ್ಟೆಗೆ ಸೂಕ್ತ.

ಅಂಬುಶೇಂಗಾ: ಬಳ್ಳಿ ಕಡಲೆಕಾಯಿ, ಹಬ್ಬುಶೇಂಗಾ ಎಂಬ ಹೆಸರುಗಳಿವೆ. ಅಗಲವಾಗಿ ಹರಡಿಕೊಳ್ಳುತ್ತದೆ. ಮೂರು ಬೀಜ ಮತ್ತು ಎರಡು ಬೀಜದ ತಳಿಗಳಿವೆ. ಮೊಳಕಾಲ್ಮೂರು, ಗದಗ, ಪಾವಗಡ, ದೇವದುರ್ಗ, ಮಧುಗಿರಿ ಭಾಗದಲ್ಲಿ ಕಾಣಸಿಗುತ್ತದೆ. ತಳಿ ಈಗ ಕಣ್ಮರೆಯಾಗುತ್ತಿದೆ. ಎಣ್ಣೆ ಅಂಶ ಕಮ್ಮಿ. ಮನೆ ಬಳಕೆಗೆ ಸೂಕ್ತ.

ಪುಂಡಿ:

೫.೧/೨ ತಿಂಗಳ ಬೆಳೆ, ಎಣ್ಣೆ, ದನಗಳಿಗೆ ಹಿಂಡಿ, ನಾರು (ಹಗ್ಗ) ತಯಾರಿಸಲು ಬಳಕೆಯಾಗುತ್ತದೆ. ಬಿಳಿ ಮತ್ತು ಕೆಂಪು ತಳಿಗಳಿವೆ. ಎಳೆಯ ಎಲೆ ಮತ್ತು ಹೂ ಅಡಿಗೆಗೆ ಬಳಕೆಯಾಗುತ್ತದೆ.

ಪುಂಡಿಯನ್ನು ಮಿತ್ರ ಕೀಟಗಳನ್ನು ಆಕರ್ಷಿಸಲು ಹೊಲದ ನಡುವೆ ಅಲ್ಲಲ್ಲಿ ಒಂದೊಂದು ಗಿಡ ಹಾಕುತ್ತಾರೆ.



ಕಬ್ಬು

ಇದರಲ್ಲಿ ರಸತಾಳೆ, ಪಟ್ಟಾಪಟ್ಟಿ, ಮರಕಬ್ಬು, ಕರೀಕಬ್ಬು, ಕಟ್ಟೇಕಬ್ಬು ಎಂದು ಐದು ವಿಧಗಳಿವೆ. ಇದಕ್ಕೆ ಕಪ್ಪು ಭೂಮಿ, ಗೋಡು, ಮರಳುಗೋಡು ಇವು ತಕ್ಕ ಭೂಮಿಗಳಾಗಿವೆ. ಎರೇ ಭೂಮಿಯಲ್ಲಿ ಬೆಳೆದ ಕಬ್ಬಿನಿಂದ ಹೆಚ್ಚಾದ ಬೆಲ್ಲ ಬಂದರೂ ಉತ್ತಮವಾದುದಲ್ಲ. ಮರಳು ಗೋಡಿನಲ್ಲಿ ಬೆಳೆದ ಕಬ್ಬಿನಿಂದ ಸ್ವಲ್ಪ ಬೆಲ್ಲ ಬಂದರೂ ಉತ್ತಮವಾಗಿರುವುದು.

ಸಕ್ಕರೆ ಕಾರ್ಖಾನೆಗಳು ಶುರುವಾಗುವ ಮುನ್ನ ಕನ್ನಡನಾಡಿನ ರೈತರು ವಿವಿಧ ಕಬ್ಬಿನ ಜಾತಿಗಳನ್ನು ಬೆಳೆಸುತ್ತಿದ್ದರು. ಬೆಲ್ಲ ಮಾಡಲು ಮತ್ತು ಮನೆ ಬಳಕೆಗೆ ಹೊಂದಿಕೊಳ್ಳುವ ವಿಶೇಷ ಗುಣದ ಕಬ್ಬಿನ ತಳಿಗಳ ಕೃಷಿ ನಡೆಯುತ್ತಿತ್ತು. ಇವತ್ತು ಬಹಳಷ್ಟು ತಳಿಗಳು ನಾಶದ ಜಾಡು ಹಿಡಿದಿದೆ.

ಮಂಡ್ಯ ಜಿಲ್ಲೆಯಲ್ಲಿ ರಸತಾಳೆಯನ್ನು ಚೈತ್ರ ಮಾಸದಲ್ಲೂ, ಪಟ್ಟಾ ಪಟ್ಟಿ ಕಬ್ಬನ್ನು ಶ್ರಾವಣ ಮಾಸದಲ್ಲಿ ಬಿತ್ತುತ್ತಿದ್ದರು.

ಕೋಲಾರ ಜಿಲ್ಲೆಯಲ್ಲಿ ಮರ ಕಬ್ಬು, ಕಟ್ಟೆ ಕಬ್ಬು ಎಂಬ ಬೆರಳಿಗಿಂತ ಕೊಂಚ ದಪ್ಪನಿದ್ದ ತಳಿಗಳ ಕೃಷಿ ನಡೆಯುತ್ತಿತ್ತು. ಹೆಚ್ಚು ನೀರು ಕೇಳದ ತಳಿಗಳಿವು.

ತುಮಕೂರು ಜಿಲ್ಲೆಯಲ್ಲಿ ಕರೀಕಬ್ಬು ಎಂಬತಳಿ ಬೆಳೆಸುತ್ತಿದ್ದರು.

ಹೊಳೆನರಸೀಪುರದಲ್ಲಿ ಪಟಾವಳಿ ಕಬ್ಬು ಈಗಲೂ ಬೆಳೆಯುವ ರೈತರಿದ್ದಾರೆ. ಕಬ್ಬಿನ ಮೇಲೆ ನಾಮದಂತ ಗೆರೆಗಳಿರುವುದು ವಿಶೇಷ.



ತರಕಾರಿ ಬೆಳೆಗಳ ವೈವಿಧ್ಯ

ಹಿತ್ತಲು ತೋಟವೆಂದರೆ ಅದೊಂದು ಜೀವಂತ ಕಾಡು ಇದ್ದಂತೆ. ಅಡುಗೆಗೆ ಬೇಕಾದ ಕಾಯಿಪಲ್ಲೆ, ಪೂಜೆಗೆ ಬೇಕಾದ ಹೂವು, ಪತ್ರೆ, ಸಣ್ಣಪುಟ್ಟ ರೋಗಕ್ಕೆ ಬೇಕಾದ ಗಿಡಮೂಲಿಕೆಗಳು, ಆಡು ಕುರಿಗಳಿಗೆ ಬೇಕಾದ ಮೇವು, ಗೆಡ್ಡೆ–ಗೆಣಸು, ಹಣ್ಣು–ಹಂಪಲು, ಬಾಳೆ ಎಲೆ, ಮಕ್ಕಳಾಟಕ್ಕೆ ಪಾರ್ಕ್. ಹೀಗೆ ಮನೆ ಮಂದಿಯ ಅಗತ್ಯಗಳನ್ನೆಲ್ಲಾ ಹಿತ್ತಲು ತೋಟ ಪೂರೈಸುತ್ತದೆ.

ಸೊಪ್ಪು, ಪಡುವಲ, ಹೀರೆ,ಹಾಗಲ, ಬೆಂಡೆ, ಗಜ್ಜರಿ ಬೆಳೆಯಬಹುದು. ಮುಳ್ಳುಗಾಯಿ, ಬೆಂಡೆ, ಕುಂಬಳ, ಚವಳಿಕಾಯಿ, ಸೊಪ್ಪುನ್ನು ವರ್ಷವಿಡೀ ಬೆಳೆಯಬಹುದು. ಹಿತ್ತಲ ಅವರೆ ವರ್ಷಪೂರ್ತಿ ಕೊಡುವ ತರಕಾರಿಗಳು. ಕರಿಬೇವು, ಹಣ್ಣಿನಗಿಡಗಳನ್ನು ಹಾಕಿಕೊಂಡರೆ ವರ್ಷ ಪೂರ್ತಿ ಫಲ ಕೊಡುತ್ತವೆ.

ತರಕಾರಿ ಬೆಳೆಗಳ ವೈವಿಧ್ಯ ದೊಡ್ಡದು. ರೈತರು ವಿವಿಧ ತಳಿಗಳನ್ನು ಈಗಲೂ ಬೆಳೆಸುತ್ತಾ ಬಂದಿದಾರೆ. ತಿಗಳ ಜನಾಂಗದವರು ತರಕಾರಿ ಕೃಷಿಯಲ್ಲಿ ಎತ್ತಿದ ಕೈ. ಸೊಪ್ಪು ಬೆಳೆಯುವುದರಲ್ಲಿ ಇವರನ್ನು ಮೀರಿಸುವವರಿಲ್ಲ. ಹಾಲಕ್ಕಿ ಒಕ್ಕಲಿಗರು ಕೂಡ ತರಕಾರಿ ಕೃಷಿಯಲ್ಲಿ ನಿಪುಣರು. ತರಕಾರಿ ಬೆಳೆದೇ ಜೀವನ ಸಾಗಿಸುವ ಕುಟುಂಬಗಳಿವೆ.

ತರಕಾರಿ ಬೆಳೆಗಳ ಕಾಲಚಕ್ರ

ತಿಂಗಳು	ಬೆಳೆಸಬಹುದಾದ ತರಕಾರಿ
ಜನವರಿ	ಪಡುವಲ, ಕುಂಬಳ, ಹೀರೆ, ಹಾಗಲ, ಬದನೆ, ಟೊಮೆಟೋ, ಬೀನ್ಸ್, ಕಲ್ಲಂಗಡಿ, ಸೌತೆ, ಮೂಲಂಗಿ, ಮೆಣಸಿನಕಾಯಿ, ಗಜ್ಜರಿ
ಫೆಬ್ರವರಿ	ಬೂದುಗುಂಬಳ ಮತ್ತು ಮೇಲಿನ ಎಲ್ಲಾ ಬೆಳೆಗಳು
ಮಾರ್ಚ್	ಈರುಳ್ಳಿ, ನವಿಲುಕೋಸು, ಬೂದುಗುಂಬಳ, ಮೂಲಂಗಿ, ಪಡುವಲ, ಬೀನ್ಸ್, ಸೋರೆ ಮತ್ತು ಎಲ್ಲಾ ತರಹ ಸೊಪ್ಪು.
ಎಪ್ರಿಲ್	ಬೀನ್ಸ್, ಹಾಗಲ, ಸೌತೆ, ಬೆಂಡೆ, ಗಜ್ಜರಿ, ಎಲೆಕೋಸು, ಸುವರ್ಣಗೆಡ್ಡೆ ಮತ್ತು ಸೊಪ್ಪು.
ಮೇ	ಟೊಮೆಟೋ, ಈರುಳ್ಳಿ, ಬದನೆ, ಮೆಣಸಿನಕಾಯಿ, ಹಾಗಲ, ಕುಂಬಳ, ಸೋರೆ, ಕೊತ್ತಂಬರಿ ಸೊಪ್ಪು, ಆಲೂಗೆಡ್ಡೆ,
ಜೂನ್	ಬೀನ್ಸ್, ಮೆಣಸಿನಕಾಯಿ, ಗೋರಿಕಾಯಿ, ಚೌಳಿ, ಸೋರೆ, ಹೀರೆ, ಬಸಳೆ, ಬದನೆ, ಸೌತೆ, ಕರಿಬೇವು, ಪಪ್ಪಾಯ, ಈರುಳ್ಳಿ, ಟಮೆಟೋ, ಗಜ್ಜರಿ, ನವಿಲುಕೋಸು, ಮೂಲಂಗಿ, ಗೆಣಸು, ನುಗ್ಗೆಬೀಜ, ತೊಂಡೆ, ಶುಂಠಿ, ಅರಿಶಿಣ, ಬೆಳ್ಳುಳ್ಳಿ, ಕುಂಬಳ, ಬೂದುಗುಂಬಳ, ಬೆಂಡೆ, ಬಟಾಣಿ,
ಜುಲೈ	ಮೇಲಿನ ಎಲ್ಲಾ ಬೆಳೆಗಳು.
ಆಗಸ್ಟ್	ಟೊಮೆಟೋ, ಅರಿಶಿಣ, ಆಲೂಗೆಡ್ಡೆ, ಬೀನ್ಸ್, ಕುಂಬಳ, ಮೆಣಸಿನಕಾಯಿ.
ಸೆಪ್ಟೆಂಬರ್	ಗೆಜ್ಜರಿ, ಮೆಣಸಿನಕಾಯಿ, ನವಿಲುಕೋಸು, ಮೂಲಂಗಿ, ಹಾಗಲ, ಬೂದಗುಂಬಳ, ಪಾಲಕ್‌ಸೊಪ್ಪು.
ಅಕ್ಟೋಬರ್	ಆಲೂಗೆಡ್ಡೆ, ಪಾಲಕ್‌ಸೊಪ್ಪು, ಗಜ್ಜರಿ, ಬೆಳ್ಳುಳ್ಳಿ, ನವಿಲುಕೋಸು,ಬದನೆ, ಬೀನ್ಸ್, ಬಟಾಣಿ, ಸೊಪ್ಪು.
ನವೆಂಬರ್	ಮೇಲಿನ ಎಲ್ಲಾ ಬೆಳೆಗಳು ಮತ್ತು ಟೊಮೆಟೋ.
ಡಿಸೆಂಬರ್	ಮೂಲಂಗಿ, ಗಜ್ಜರಿ, ಗೋರಿಕಾಯಿ, ಆಲೂಗೆಡ್ಡೆ, ಮೆಣಸಿನಕಾಯಿ, ಕಲ್ಲಂಗಡಿ, ಗೆಣಸು.

ಸೊಪ್ಪು ಇಡೀ ವರ್ಷ ಬೆಳೆದುಕೊಳ್ಳಬಹುದು.



ಕೊತ್ತಿತಲೆ ಬದನೆ

ಬದನೆ ತಳಿ ವೈವಿಧ್ಯ

ಮಟ್ಟಿಗುಳ್ಳ – ಉಡುಪಿ ಸಮೀಪದ ಮುಟ್ಟು ಪ್ರದೇಶದಲ್ಲಿ ಬೆಳೆಯುವ ಬದನೆ 'ಮಟ್ಟಿಗುಳ್ಳ' ಎಂಬ ಹೆಸರಿನಿಂದಲೇ ಪ್ರಸಿದ್ಧಿ. ದಕ್ಷಿಣಕನ್ನಡದ ಮಂದಿ ತಾವು ಹೋದೆಡೆಯೆಲ್ಲಾ ಇದನ್ನು ಪರಿಚಯಿಸಿದ್ದಾರೆ.

ದುಂಡಗೆ ಇದ್ದು ಚೆನ್ನಾಗಿ ಬೆಳೆದರೆ ಬೊಗಸೆ ತುಂಬಾ ಕೂತುಕೊಳ್ಳುವ ಮಟ್ಟಿಗುಳ್ಳ ಸ್ವಾದಿಷ್ಠ ಬದನೆ. ಗುಳ್ಳದ ಮುಕ್ಕಾಲು ಭಾಗ ಕಡು ಹಸಿರು, ತೊಟ್ಟಿನ ಭಾಗ ಸೂರ್ಯನ ಕಿರಣದಂತೆ ಚೂಪು ಚೂಪಾಗಿ ಬಿಳಿಯ ಪಟ್ಟೆಗಳಿರುತ್ತವೆ. ತೊಟ್ಟಿನ ಮೇಲೆ ಮುಳ್ಳುಗಳಿರುತ್ತವೆ.

ಕರಾವಳಿಯ ಬದನೆ ತಳಿ

ನೀಲಿ ಗೆರೆ ಇರುವ ಬದನೆ ಒಂದು ಜಾತಿಯದು. ಇನ್ನೊಂದು ಜಾತಿಯ ಬದನೆ ಸುಮಾರು ಒಂದು ಕೆ.ಜಿ. ಗಾತ್ರದ ಕಾಯಿ ಕೊಡುತ್ತದೆ. ಇದನ್ನು ಪೇಐಂಪಳ್ಳಿ ಬದನೆ ಎಂದೂ ಹೇಳುವುದುಂಟು.

ಮುಸುಕು ಬದನೆ : ತೊಟ್ಟಿನಭಾಗ ಮುಚ್ಚಿಕೊಂಡಿರುವ ಬಹುವಾರ್ಷಿಕ ಬದನೆ. ನೋಡಿದವರು ಬದನೆಯೇ ಎಂದು ಸಂಶಯಿಸುವ ತಳಿ. ಮನೆ ಬಳಕೆಗೆ ಸೂಕ್ತ. ಕಾಯಿ ಮೃದುವಾಗಿದ್ದು ಅಡಿಗೆಗೆ ರುಚಿಕರವಾಗಿರುತ್ತದೆ.

ಕೊತ್ತಿತಲೆ ಬದನೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಹುವಾರ್ಷಿಕ ಬದನೆತಳಿ ಮಾಗಡಿ, ರಾಮನಗರ ಹಳ್ಳಿಗಳ ರೈತರ ಮನೆ ಮುಂದೆ ಒಂದೆರಡು ಗಿಡಗಳು ಕಾಣಸಿಗುತ್ತವೆ.

ವರ್ಷಪೂರ ಮನೆಬಳಕೆಗೆ ಕಾಯಿ ಸಿಗುತ್ತದೆ. ಕಾಯಿಗಳು ಬೆಕ್ಕಿನತಲೆಯ ಗಾತ್ರಕ್ಕೆ ಇರುವುದರಿಂದ 'ಕೊತ್ತಿತಲೆ ಬದನೆ' ಎಂಬ ಹೆಸರು ಬಂದಿದೆ. ಹಳ್ಳಿಗರ ಭಾಷೆಯಲ್ಲಿ ಕೊತ್ತಿ ಎಂದರೆ ಬೆಕ್ಕು.

ಈರಂಗೆರೆ ಬದನೆ: ಮೈಸೂರಿನ ಮೂಲದ ತಳಿ. ನೀಳವಾದ ಹಸಿರು ಕಾಯಿ ಹಾವನ್ನು ಹೋಲುತ್ತದೆ. ತಿಪಟೂರು ಭಾಗದಲ್ಲಿ ಬಹುವಾರ್ಷಿಕ ತಳಿಯಾಗಿ ಮನೆ ಮುಂದೆ ಬೆಳೆಸಿಕೊಳ್ಳುತ್ತಾರೆ.

ಸಿರ್ಸಿ ತಾಲ್ಲೂಕಿನಲ್ಲಿ ಜೋಳಬದನೆ, ಬಿಳಿ ಬದನೆ, ಗುಂಡು ಬದನೆ, ಮುಳ್ಳುಗಾಯಿ ತಳಿಗಳಿವೆ. ಹಾಲಕ್ಕಿ ಒಕ್ಕಲಿಗರು ಕೆಂಪು ಬದನೆ, ಬಿಳಿ ಬದನೆ, ಜೋಳ ಬದನೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಾರೆ. ಯಲ್ಲಾಪುರ ಭಾಗದಲ್ಲಿ ಕರಿಬದನೆ, ಬಿಳಿಬದನೆ, ಪಟ್ಟೆಬದನೆ, ಬಾಸಲಬದನೆ ತಳಿಗಳಿವೆ. ಜಮಖಂಡಿ ಭಾಗದಲ್ಲಿ ಕಡಬಟ್ಲ ಬದನೆ, ಬೆಟಗೇರಿ ಕಾಯಿ ತಳಿ ಇವೆ. ಕಲಘಟಗಿ ಪ್ರದೇಶದಲ್ಲಿ ಹಸಿರು ಬದನೆ, ಕರಿ ಬದನೆ, ಹಿತ್ತಲ ಬದನೆ, ಮರ ಬದನೆ ತಳಿ ಇವೆ. ಬೆಳಗಾಂ ಭಾಗದಲ್ಲಿ ಬೆಳವಂಕಿ ಬದನೆ ಗೋರಬಾಳ ಬದನೆ ಎಂಬ ತಳಿಗಳಿದ್ದವು ಈಗ ಕಣ್ಮರೆಯಾಗಿವೆ.

ಕುಂಟುಬದನೆ

ಬಂದಳಿಕೆ ಬಂದ ಕೂಳೆ ಬದನೆಯ ಗಿಡವನ್ನು ಬೇರು ಸಮೇತ ಕಿತ್ತುತಂದು, ರೆಂಬೆಗಳನ್ನು ಕತ್ತರಿಸಿ ನೆಟ್ಟರೆ, ಮುಂದಿನ ಮೂರು-ನಾಲ್ಕು ವರ್ಷ ಕಾಯಿ ಬಿಡುತ್ತಿರುತ್ತದೆ. ಬೆಂಗಳೂರು ಗ್ರಾಮಾಂತರ ಭಾಗದ ಅಪರೂಪದ ಪದ್ಧತಿ.




ಜೋಳಬದನೆ



ಮುಸುಕು ಬದನೆ



ಪಟ್ಟೆಬದನೆ



ಮದನಪಲ್ಲಿ ಟೊಮೊಟೋ

ಟೊಮೊಟೊ ತಳಿಗಳು

ಮದನಪಲ್ಲಿ ಟೊಮೊಟೋ: ಹೆಚ್ಚು ಜನಪ್ರಿಯವಾಗಿದ್ದ ಈ ತಳಿ ಈಗ ಕಾಡು ಹಳ್ಳಿಗಳಲ್ಲಿ ಮಾತ್ರ ಕಾಣಸಿಗುತ್ತದೆ. ಅಂಗೈಯಲ್ಲಿ ಕೂರುವಷ್ಟು ದೊಡ್ಡ ಗಾತ್ರದ ಹಣ್ಣು ಈ ತಳಿಯ ವಿಶೇಷ. ಹುಳಿಯಾದ ರುಚಿ. ಈ ತಳಿ ಮನೆ ಬಳಕೆಗೆ ಉತ್ತಮ.

ಕೆನ್ನೀಲಿ ಟೊಮೊಟೋ: ಅಗಲವಾಗಿ ವಕ್ರವಕ್ರವಾಗಿ ಹರಡಿಕೊಂಡು, ಹಣ್ಣಾದಾಗ ಕೆನ್ನೀಲಿ ಬಣ್ಣಕ್ಕೆ ತಿರುಗುತ್ತದೆ. ಹೆಚ್ಚು ಸಿಹಿ ಇರುವುದರಿಂದ ಸಲಾಡ್‌ಗೆ ಸೂಕ್ತವಾದ ತಳಿ ಇದು.

ಗುಳಿ ಟೊಮೊಟೋ: ಮೂಲತಃ ಕಳೆ ಸಸ್ಯವಾದ ಈ ಟೊಮೊಟೋ ಬೇಲಿಯ ಅಂಚು, ತಿಪ್ಪೆಗಳ ಸುತ್ತಮುತ್ತ ತನ್ನ ಪಾಡಿಗೆ ತಾನು ಮುಂಗಾರಿನ ಮಳೆಗೆ ಹುಟ್ಟಿ, ಬಳ್ಳಿಯಾಗಿ ಬೆಳೆಯುತ್ತದೆ. ಕೆಂಪು ಮತ್ತು ಹಳದಿ ಬಣ್ಣದ, ಗೋಲಿ ಗಾತ್ರದ ಹಣ್ಣುಗಳನ್ನು ಗೊಂಚಲು ಗೊಂಚಲಾಗಿ ಬಿಡುತ್ತದೆ. ಈ ತಳಿ ಔಷಧೀಯ ಸಸ್ಯಕೂಡ.


ಬಲ್ಬ್ ಟೊಮೊಟೋ: ಬಂಗಾರ ಬಣ್ಣದ, ವಿದ್ಯುತ್ ಬಲ್ಬಿನ ಆಕಾರದ ಗೊಂಚಲು ಗೊಂಚಲಾಗಿ ಕಾಯಿ ಬಿಡುವ ಅಪರೂಪದ ತಳಿ. ೫೦ ದಿನಗಳಿಗೂ ಮೀರಿ ಸಂಗ್ರಹಿಸಿಡಬಹುದು.

ಚೆರ್ರಿ ಟೊಮೊಟೋ: ಸಣ್ಣ ಸಣ್ಣ ಹಣ್ಣುಗಳ ಬಳ್ಳಿಯಾಗಿ ಹಬ್ಬುವ ತಳಿ. ರುಚಿಯಾದ ಕೆಂಪು ಬಣ್ಣದ ಗೋಲಿ ಗಾತ್ರದ ಹಣ್ಣುಗಳು ಬಿಡುತ್ತವೆ. ಸಾವಯವ ತೋಟಗಳಲ್ಲಿ ಬೆಳೆಸಬಹುದು.

ಚಕ್ರ ಟೊಮೊಟೋ: ಚಕ್ರದ ರೀತಿ ಅಗಲವಾದ ಕಾಯಿಗಳ ತಳಿ. ಹುಳಿ ರುಚಿಯ ಈ ಟೊಮೊಟೋಗೆ ಮಾರುಕಟ್ಟೆಯಲ್ಲಿ ಬಾರಿ ಬೇಡಿಕೆಇದೆ.



ಬೆಂಡೆ ತಳಿಗಳು



ದೊಡ್ಡ ಬೆಂಡೆ

ಮೆಣಸಿನಕಾಯಿ ಹೊಲಗಳಲ್ಲಿ ನೀರಿನ ಕಾಲುವೆಯ ಮೇಲೆ ಬೆಳೆಸುವುದು ರೂಢಿ. ಮಾರುಕಟ್ಟೆಗಾಗಿ ಏಕಬೆಳೆಯಾಗಿ ಬೆಳೆವ ಪದ್ಧತಿ ಈಗೀಗ ಸಾಮಾನ್ಯ. ಒಣಗಿದ ಕಾಯಿಗಳನ್ನು ಸುಲಿಯದೆ, ಬೀಜಕ್ಕೆ ಎತ್ತಿಟ್ಟರೆ ಒಳ್ಳೆಯದು.

ಬೆಂಡೆಗಿಡದ ಕಾಂಡವನ್ನು ಜಜ್ಜಿ ರಸ ತೆಗೆದು ಬೆಲ್ಲದ ಪಾಕದಲ್ಲಿ ಸೇರಿಸುವ ಪದ್ಧತಿ ಇದೆ. ಕಬ್ಬಿನ ಹಾಲಿನಲ್ಲಿರುವ ಕಲ್ಮಶ ತೇಲುತ್ತವೆ ಎಂಬುದು ರೈತರ ಅನುಭವ.

ಮರ ಬೆಂಡೆ: ಆಳೆತ್ತರ ಮೀರಿ ಬೆಳೆಯುವ, ಹೆಚ್ಚು ಕವಲುಗಳ ತಳಿ. ಮಧುಗಿರಿ, ಪಾವಗಡ ಪ್ರದೇಶಗಳಲ್ಲಿ ಸಾಮಾನ್ಯ.


ಮಿಕದ ಕೊಂಬಿನ ಬೆಂಡೆ: ಸಾಗರ ತಾಲ್ಲೂಕಿನ ಉದ್ದನಾದ ಕಾಯಿಗಳ ಅಪರೂಪದ ತಳಿ. ಇಳುವರಿ ಕಡಿಮೆ.

ಮುಳ್ಳ ಬೆಂಡೆ: ಕಾಯಿಯ ಮೇಲೆ ಮುಳ್ಳು ಇರುವ ತಳಿ.

ಹಸಿರು ಬೆಂಡೆ: ಹಸಿರು ಬಣ್ಣದ, ಮೃದುವಾದ, ಅಡಿಗೆಗೆ ಉತ್ತಮವಾದ ತಳಿ.



, ಮರ ಬೆಂಡೆ




ಕುಂಬಳ ತಳಿ ವೈವಿಧ್ಯ

ಬಿಳಿ ಕುಂಬಳ : ಕುಷ್ಟಗಿ ಭಾಗದ ಕುಂಬಳ ತಳಿ. ಸಂಗ್ರಹಣೆ ೧ ವರ್ಷಕ್ಕೂ ಮಿಗಿಲು. ಕೆನೆ ಬಣ್ಣದ ಸಾಧಾರಣ ಗಾತ್ರದ ಕುಂಬಳ.


ಹಸಿರು ಕುಂಬಳ: ಚಕ್ರವನ್ನು ಹೋಲುವ ಕಾಯಿಯ ಸೀಳಿನಲ್ಲಿ ಬಿಳಿಯ ಗೀರುಗಳಿರುತ್ತವೆ. ರೊಟ್ಟಿಗೆ ಪಲ್ಯ ಮಾಡಲು ಬಳಕೆಯಾಗುತ್ತದೆ. ಸಿಹಿ ಜಾಸ್ತಿ. ತಿರುಳು ಕೆಂಪಗಿರುತ್ತದೆ. "ಮುಕ್ಕಿ ನೀರು ತಪ್ಪಾಲೆಗೆ ಇಕ್ಕಿ, ಮೇಲೆ ಗಂಗಳ ಮುಚ್ಚಿ ಊರಿ ಬಿಡಬೇಕು. ಕುದ್ದು ಬಿಡುತ್ತದೆ. ಖಂಡ ಇದ್ದಂಗೆ ಕೆಂಪಾಗಿ ಬಲೇ ರುಚಿ ಇರ್ತದೆ" ಜೂಲಕುಂಟಿ ಹನುಮಮ್ಮ ಬಾಯಿ ಚಪ್ಪರಿಸುತ್ತಾ ಹೇಳುತ್ತಾರೆ.

ಹೊಲದ ತಗ್ಗಿನ ಪ್ರದೇಶದಲ್ಲಿ ಕಡ್ಡಿಯಿಂದ ಚುಚ್ಚಿ ಬೀಜ ಊರುತ್ತಾರೆ. ಎಲೆಗೊಂದು ಕಾಯಿ ಬಿಡುತ್ತೆ. ತಿಪ್ಪೇ, ಒಡ್ಡುಗಳ ಬಳಿ ಎಲ್ಲಾ ಕಡೆ ಬರುತ್ತೆ. ಮಳೆ ಒಂದು ತಿಂಗಳು ಬರದಿದ್ದರೂ ನಡೆಯುತ್ತೆ.



ಮಂತು ಕುಂಬಳ : ದಕ್ಷಿಣ ಕರ್ನಾಟಕದ ಜನಪಿಯ ತಳಿ. ಗಾತ್ತದಲ್ಲಿ ಚಿಕ್ಕದು. ತುಂಬಾ ರುಚಿ. ಗಿಡದ ತುಂಬಾ ಕಾಯಿಗಳ ಸುಗ್ಗಿ.

ಕುಂಬಳದಲ್ಲಿ ಚಕ ಕುಂಬಳ, ಕೊಡತಿ ಕುಂಬಳ, ಬಿಂದಿಗಿ ಕುಂಬಳ ಎಂಬ ತಳಿಗಳೂ ಇವೆ.


ಕಾಡು ಹಾಗಲ

ಹಾಗಲ

ಹಾಗಲದಲ್ಲಿ ಕರಿ ಹಾಗಲ ಮತ್ತು ಬಿಳಿ ಹಾಗಲ ಎಂಬ ಎರಡು ತಳಿಗಳಿವೆ.

ಕಾಡು ಹಾಗಲ: ಕಾಡು ಹಾಗಲಕಾಯಿಯ ಬಳ್ಳಿ, ಎಲೆ, ಹೂ ಎಲ್ಲಾ ನಾಡಹಾಗಲ ಕಾಯಿಯಂತೆ ಕಾಣುತ್ತದೆ. ಆದರೆ ಕಾಡುಹಾಗಲ ಕಾಯಿ ಪುಟ್ಟಗೆ ಗುಂಡಗಿರುತ್ತದೆ. ಬುಗುರಿಯನ್ನು ನೆನಪಿಸುವ ಕಾಯಿಯ ತಳಭಾಗ ಒಂದಿಷ್ಟು ಚೂಪು. ಅಸಾಧ್ಯ ಕಹಿ, ಔಷಧೀಯ ಗುಣದ ಕಾಡುಹಾಗಲ ಗೊಜ್ಜು, ಸಾಂಬಾರ್, ಪಲ್ಯಕ್ಕೆ ಬಳಕೆಯಾಗುತ್ತದೆ.

ಗೆಜ್ಜರಿ

ಫಲವತ್ತಾದ, ಮೃದುವಾದ, ಕಲ್ಲುಗಳಿಲ್ಲದ ನೆಲದಲ್ಲಿ ಬೆಳೆಯುವ ಬೆಳೆ. ಗದಗ ಭಾಗದಲ್ಲಿ ಕಳೆಯಾಗಿ ಬೆಳೆಯುವ ತಳಿ ಇದೆ. ಕಂದುಬಣ್ಣದ ಒಗರು ಗುಣದ ತಳಿ ಕೂಡ ಕಾಣಸಿಗುತ್ತದೆ.

ಅಲಸಂದೆ

ಬಳ್ಳಿ ಅಲಸಂದೆ: ಕರಾವಳಿಯ ತರಕಾರಿ ಅಲಸಂದೆ ತಳಿ. ಕಪ್ಪು ಬಣ್ಣದ ಬಳ್ಳಿಯ ಇದರ ಕಾಯಿ ಹಸಿರು. ಒಂದೊಂದು ಕಾಯಿ ಸುಮಾರು ಹತ್ತು ಹನ್ನೆರಡು ಇಂಚು ಇರುತ್ತದೆ. ಇದರ ಕಾಯಿ ಮತ್ತು ಕಾಳು ಎರಡೂ ಉಪಯೋಗ. ಐದು ತಿಂಗಳ ತಳಿ.

ಗಿಡ್ಡ ಪೊದೆ ಅಲಸಂದೆ: ಬೀಜದ ಮೇಲೇ ಗೆರೆ ಇರುತ್ತದೆ. ಬಗಡೆ ಅಥವಾ ಅವಡೆ ಎಂದೂ ಕರೆಯುವ ಇದನ್ನು ಕಾಳಿಗಾಗಿಯೆ ಬೆಳೆಸುತ್ತಾರೆ.



ಮೆಣಸಿನಕಾಯಿ ತಳಿ ವೈವಿಧ್ಯ

ಮೆಣಸಿನಕಾಯಿಯಲ್ಲಿ ಪ್ರಾದೇಶಿಕವಾಗಿ ವಿವಿಧ ತಳಿಗಳಿವೆ. ಹೊಲದ ಮೂಲೆಯಲ್ಲಿ, ಸಣ್ಣ ಪ್ರಮಾಣದಲ್ಲಿ ಮನೆ ಬಳಕೆಗೆ ಬೆಳೆದುಕೊಳ್ಳುವುದು ರೂಢಿ. ಮಲೆನಾಡಿನ ತೋಟಗಳಲ್ಲಿ ವಿವಿಧ ಬಣ್ಣದ ಬಹುವಾರ್ಷಿಕ ಮೆಣಸಿನ ತಳಿಗಳನ್ನ ಕಾಣಬಹುದು.

ಬ್ಯಾಡಗಿ ಮೆಣಸಿನಕಾಯಿ:

ಕರ್ನಾಟಕದ ಹೆಮ್ಮೆಯ ತಳಿ. ಬ್ಯಾಡಗಿ ತಾಲ್ಲೂಕು ಇದರ ಮೂಲ, ಗಾಢ ಕೆಂಪುಬಣ್ಣದ ಕಾರದಪುಡಿ ಅಡಿಗೆಗೆ ಆಕರ್ಷಕ ಬಣ್ಣ ನೀಡುತ್ತದೆ. ವಿದೇಶದಲ್ಲಿ ಬೇಡಿಕೆ ಇರುವ ತಳಿ. ಸೊರಗು ರೋಗದ ಕಾರಣ ಬೆಳೆಯುವವರು ಕಮ್ಮಿಯಾಗುತ್ತಿದ್ದಾರೆ.

ಗಾಂಧಾರಿ ಮೆಣಸು:

ಚೋಟ ಮೆಣಸು, ಸಣ್ಣ ಮೆಣಸು ಎಂದೆಲ್ಲಾ ಹೆಸರಿರುವ ಬಹುವಾರ್ಷಿಕ ಮೆಣಸಿನಕಾಯಿ ತಳಿ. ಸಣ್ಣ-ಸಣ್ಣ ಕಾಯಿಗಳು ಗಿಡದ ತುಂಬ ಇರುತ್ತವೆ. ನೋಡುಗರನ್ನು ಆಕರ್ಷಿಸುತ್ತವೆ. ಅಪಾರ ಖಾರದ ಈ ತಳಿ ಗ್ಯಾಸ್ಟ್ರಿಕ್ ರೋಗಿಗಳಿಗೆ ರಾಮಬಾಣ!



ಮಜ್ಜಿಗೆ ಮೆಣಸು: ಬಹುವಾರ್ಷಿಕ ತಳಿ, ಬಿಳಿ ಬಣ್ಣದ ಕಾಯಿಗಳು ಆಕಾಶಕ್ಕೆ ಮುಖ ಮಾಡಿ ಬೆಳೆಯುತ್ತವೆ. ಹಿತ್ತಲಿನಲ್ಲಿ ಬೆಳೆದುಕೊಳ್ಳುವುದು ಸಾಮಾನ್ಯ.

ಉತ್ತರ ಕರ್ನಾಟಕದಲ್ಲಿ ಮಾರುಕಟ್ಟೆಗೆ ಸೂಕ್ತವಾಗಬಲ್ಲ ಅನೇಕ ತಳಿಗಳಿವೆ.



ಕಹಿಸೋರೆ

ಸೋರೆಕಾಯಿ ತಳಿ ವೈವಿಧ್ಯ

ಮುಂಗಾರಿನ ಮೊದಲ ಮಳೆಗೆ (ಮೇ-ಜೂನ್) ಬಿತ್ತನೆ ಮಾಡಬೇಕು. ಬಳ್ಳಿಯಾಗಿ ಹರಿಯಲು ಆರಂಭವಾದ ನಂತರ ಆಸರೆಕೊಟ್ಟು ಮನೆ, ಮರ, ಬೇಲಿಗೆ ಹಬ್ಬಿಸಬೇಕು. ಗೌರಿ ಹಬ್ಬದ ನಂತರ ಕಾಯಿ ಸಿಗಲು ಪ್ರಾರಂಭವಾಗುತ್ತದೆ. ಬಳ್ಳಿಯಲ್ಲೇ ಒಣಗಲು ಬಿಟ್ಟು ಕಾಯಿಯನ್ನು ಎತ್ತಿಟ್ಟು ಬಿತ್ತನೆ ಕಾಲಕ್ಕೆ ಹೊಡೆದರೆ ಬಿತ್ತನೆ ಬೀಜ ಸಿಗುತ್ತದೆ.


ಕೊಂಬು ಸೋರೆ: ಸಾಮಾನ್ಯವಾಗಿ ಕಾಣಸಿಗುವ ಮೊಳಕೈ ಉದ್ದದ ತಳಿ. ಮನೆ ಬಳಕೆಗೆ ಉತ್ತಮ. ಚಪ್ಪರ ಅಥವಾ ಮನೆಮೇಲೆ ಹಬ್ಬಿಸುತ್ತಾರೆ.

ಕಹಿಸೋರೆ : ಬೇಲಿಯ ಮೇಲೆ ನೈಸರ್ಗಿಕವಾಗಿ ಬೆಳೆಯುವ ಕಳೆಸೋರೆ ತುಂಬ ಕಹಿಗುಣವಿರುವ. ತಳಿ ಸೋರೆಯನ್ನು ಔಷಧಿಯಾಗಿ ಬಳಸುತ್ತಾರೆ. ಮಕ್ಕಳ ಆಟಿಕೆಯಾಗಿ, ತರಕಾರಿಬೀಜ, ಗಿಡಮೂಲಿಕೆ ಬಚ್ಚಿಡುವ ಗುಡಾಣವಾಗಿ ಬಳಕೆ ಯಾಗುತ್ತದೆ !

ಮುಂಡೆಸೋರೆ-ಕನಕಪುರ

ಸೋರೆಯ ಇತರೆ ತಳಿಗಳು:

ಕೊಂಬು ಸೋರೆ, ಕಿನ್ನರಿ ಸೋರೆ (ತಂಬೂರಿ), ಬಿಂದಿಗೆ ಸೋರೆ, ಗುಬುಟು ಸೋರೆ.



ಕೊಂಬು ಸೋರೆ



ಹಾವು ಪಡವಲ

ಪಡುವಲ

ಕಾಯಿಯ ಗಾತ್ರದ ಮೇಲಿನಿಂದ ಹೇಳುವುದಾದರೆ ಉದ್ದ ಹಾಗೂ ಚಿಕ್ಕ ಗಾತ್ರದ ಕಾಯಿ ಬಿಡುವ ತಳಿಗಳಿವೆ.

ಹೋಳಿ ಹುಣ್ಣಿಮೆಯಂದು (ಫೆಬ್ರವರಿ-ಮಾರ್ಚ್) ಬಿತ್ತನೆಗೆ ಶ್ರೇಷ್ಠದಿನ. ಮೂರು ಅಡಿ ಆಳದ ಗುಂಡಿಗೆ ಹಸಿರೆಲೆ ಸೊಪ್ಪು ತುಂಬಿ ಕೊಳೆಯಲು ಬಿಡಬೇಕು. ನಂತರ ಕೊಟ್ಟಿಗೆ ಗೊಬ್ಬರ ಮತ್ತು ಮಣ್ಣು ಮಿಶ್ರ ಮಾಡಿ, ಅರ್ಧ ಅಡಿಬಿಟ್ಟು ಗುಂಡಿ ತುಂಬಿಸಿ, ಬೀಜ ಬಿತ್ತಬೇಕು. ತೇವ ಆರದಂತೆ ನೀರುಣಿಸುತ್ತಿರಬೇಕು. ಬಳ್ಳಿ ಹರಿಯಲಾರಂಭಿಸಿದಾಗ ಗೂಡು ಕಟ್ಟಿ ಬಳ್ಳಿಯನ್ನು ಮೂರು ಅಡಿ ಎತ್ತರದ ಚಪ್ಪರದ ಮೇಲೆ ಹಬ್ಬಿಸಬೇಕು. ಮುಂದಿನ ಎರಡು ತಿಂಗಳಿಗೆಲ್ಲಾ ಕಾಯಿ ಕೊಯ್ಲಿಗೆ ಸಿದ್ಧವಾಗುತ್ತದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಹಾವು ಪಡವಲ ಎಂಬ ಅಪರೂಪದ ತಳಿ ಇದೆ. ಆರು ಅಡಿ ಉದ್ದ ಬೆಳೆಯುವ, ಸಣ್ಣ ಗಾತ್ರದ ಕಾಯಿಗಳು ಹಾವನ್ನು ನೆನೆಪಿಸುತ್ತವೆ.



ಪುಟ್ಟ ಪಡವಲ

ಸೌತೆ

ಮಳ್ಳುಸೌತೆ: ಇದನ್ನು ಏಳು ಎಲೆ ಸೌತೆ ಎಂದು ಕರೆಯುತ್ತಾರೆ. ಏಳು ಎಲೆಗಳ ನಂತರ ಹೂ ಬಿಡುವುದರಿಂದ ಈ ಹೆಸರು. ಸುಮಾರು ೪೦ ದಿವಸಕ್ಕೆ ಕಾಯಿ ಹಿಡಿಯಲು ಆರಂಭಿಸುತ್ತದೆ. ಸಣ್ಣ ಮತ್ತು ದೊಡ್ಡಕಾಯಿಯ ಎರಡು ಜಾತಿಗಳಿವೆ.

ಬಣ್ಣದಸೌತೆ: ಅಡಿಗೆಗೆ ಬಳಸುವ ಈ ಸೌತೆ ಬಹಳ ಕಾಲ ಕೆಡದೆ ಉಳಿಯುತ್ತದೆ.

ಮೊಗೆ ಸೌತೆ: ಇದು ಬಣ್ಣದ ಸೌತೆಯಂತೆ ಇರುತ್ತದೆ. ಆದರೆ ಸ್ವಲ್ಪ ಸಪೂರ ಹಾಗೂ ಇದರಲ್ಲಿ ಬಣ್ಣದ ಸೌತೆಗಿಂತ ನೀರಿನ ಅಂಶ ಸ್ವಲ್ಪ ಕಡಿಮೆ.

ಕಲಘಟಗಿ ಪ್ರದೇಶದಲ್ಲಿ ಮುಳ್ಳು ಸೌತೆ, ಗುಳ್ಳಸೌತೆ, ಗೊಬ್ಬರ ಸೌತೆ ತಳಿಗಳಿವೆ.

ಬುಡುಮೆಕಾಯಿ: ರಾಯಚೂರು ಜಿಲ್ಲೆಯಲ್ಲಿ ಸಜ್ಜೆ, ಹತ್ತಿಹೊಲದಲ್ಲಿ ಹಾಕುತ್ತಾರೆ. ಬೀಜದಲ್ಲಿ ಕಲಸಿ ಬಿತ್ತುತ್ತಾರೆ. ಇದರಲ್ಲಿ ಸಿಹಿಬುಡುಮೆಕಾಯಿ ಮತ್ತು ರಾಮ ಬುಡುಮೆಕಾಯಿ ಎಂಬ ಎರಡು ಜಾತಿಗಳಿವೆ. ಸಂಡಿಗೆಗೆ ಉತ್ತಮ. ಹಸಿ ಇದ್ದಾಗ ಬೀಜ ತೆಗೆದು ತೊಳೆದು ಒಗ್ಗರಣೆ ಹಾಕಿ (ಶೇಂಗಾ, ಗುರಳ್ಳುಪುಡಿ ಹಚ್ಚಿ) ರೊಟ್ಟಿಗೆ ಪಲ್ಯ ಮಾಡುತ್ತಾರೆ. ಹಣ್ಣಾದಮೇಲೂ ತಿನ್ನಬಹುದು.

ಹೀರೆ

ಪಡುವಲದಂತೆ ಇದರಲ್ಲೂ ಕಾಯಿಗಳ ಗಾತ್ರಕ್ಕೆ ಅನುಗುಣವಾಗಿ ಉದ್ದ, ಮಧ್ಯಮ ಹಾಗೂ ಚಿಕ್ಕ ಗಾತ್ರದ ಕಾಯಿ ಬಿಡುವ ಮೂರು ವಿಧದ ತಳಿಗಳಿವೆ.

ತಿಪ್ಪೆರಿಕಾಯಿ ಕಲಘಟಗಿ ಪ್ರದೇಶದ ತಳಿ. ರೈಲು ಬೀರೆಕಾಯಿ ತುಮಕೂರು ಭಾಗದಲ್ಲಿದೆ.

ಆನೆ ಮೆಟ್ಲು: ಬೂದುಗುಂಬಳದಂತೆ ಕಾಣುವ ಸೌತೆ ಜಾತಿಇದು. ಆನೆಮೆಟ್ಲು ಆಕಾರ ಮತ್ತು ಗಾತ್ರದಲ್ಲಿ ಬೂದುಗುಂಬಳಕಾಯಿಯನ್ನು ಹೋಲುತ್ತದೆ. ಮತ್ತೆಲ್ಲ ಯಥಾವತ್ ಮುಳ್ಳು ಸೌತೆಯಂತೆ. ಪಚಡಿ, ಹುಳಿ, ಸಾಂಬರು, ದೋಸೆ, ಕಡಬು, ಸಂಡಿಗೆ ತಯಾರಿಸಬಹುದು.





೩. ಬೆಳೆ ಪದ್ಧತಿಗಳು

"ಗಂಗಮ್ಮ ತಾಯಿ ಹೆಣ್ಣು, ಭೂಮಿ ತಾಯಿ ಹೆಣ್ಣು, ಬೀಜತಾಯಿ ಹೆಣ್ಣು, ಅಕ್ಕಡಿ ಬಿತ್ತುವ ನಾವೂ ಹೆಣ್ಣು, ನಾವೆಲ್ಲ ಜೊತೆ ಸೇರಿದರೆ ಸಮೃದ್ಧಿ ತಾನಾಗೆ ಬರುತ್ತದೆ".

-ಬೀಜಮಾತೆ ಹೊಂಬಾಳಮ್ಮ

ನಾಡು ತಳಿ ಬೀಜಗಳನ್ನು ಸಂರಕ್ಷಿಸುವ ಜೊತೆ ಜೊತೆಗೆ ರೈತರು ತಲೆಮಾರುಗಳಿಂದ ವಿವಿಧ ಕೃಷಿ ವಿಧಾನಗಳನ್ನು ಪ್ರಯೋಗ ಮಾಡುತ್ತಾ ಬಂದಿದ್ದಾರೆ. ಆಯಾಮಣ್ಣು, ವಾತಾವರಣ, ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಮಿಶ್ರಬೆಳೆಸಾಲುಬೆಳೆಗಳನ್ನು ಆವಿಷ್ಕರಿಸಿದ್ದಾರೆ. ಕಾಲಾಂತರದಲ್ಲಿ ಬದಲವಣೆ ಮಾಡುತ್ತಾ ಬಂದಿದ್ದಾರೆ. ಆಧುನಿಕ ಕೃಷಿ ಪದ್ಧತಿಗೆ ಪರ್ಯಾಯವಾಗಬಲ್ಲ ನೂರಾರು ದೇಸಿ ಬೆಳೆ ಪದ್ಧತಿಗಳು, ಕೃಷಿ ಜಾಣ್ಮೆ ಹಳ್ಳಿಗರಲ್ಲಿದೆ. ಅದರತ್ತ ಒಂದು ಇಣುಕುನೋಟ.

ಅಕ್ಕಡಿ

ಮುಖ್ಯ ಬೆಳೆಯ ಜೊತೆಗೆ ಮನೆ ಅಗತ್ಯಕ್ಕೆ ಬೇಕಾದ ಇತರೆ ಧಾನ್ಯಗಳನ್ನು ಜೊತೆಜೊತೆಗೆ ಬೆಳೆಯುವ ವಿಶಿಷ್ಟ ಪದ್ಧತಿ. ದಕ್ಷಿಣ ಕರ್ನಾಟಕದ ರಾಗಿ ಬೆಳೆಯ ಜೊತೆಗೆ ಏಳು ಅಥವಾ ಒಂಭತ್ತು ವಿವಿಧ ಧಾನ್ಯಗಳನ್ನು ಸಾಲು ಮತ್ತು ಮಿಶ್ರ ಬೆಳೆಯಾಗಿ ಒಂದೇ ಹೊಲದಲ್ಲಿ ಬಿತ್ತುತ್ತಾರೆ. ರಾಗಿಯ ಜೊತೆಗೆ ಸಾಸಿವೆಯನ್ನು ಮಿಶ್ರ ಮಾಡುತ್ತಾರೆ. ಜೋಳ, ಅವರೆ, ಹರಳು, ಹಲಸಂದೆ, ತೊಗರಿ ಮತ್ತು ಸಾವೆ, ಸಜ್ಜೆಯನ್ನು ಸಾಲಿಗೆ ಹಾಕುತ್ತಾರೆ. ಬದುವಿನ



ಸುತ್ತ ಹುಚ್ಚೆಳ್ಳು ಬಿತ್ತುತ್ತಾರೆ. ದನಗಳಿಗೆ ಮೇವು, ಸಾರಿಗೆ ಕಾಳು, ತಲೆಗೆ ಎಣ್ಣೆ, ಊಟಕ್ಕೆ ಅನ್ನ, ಖರ್ಚಿಗೆ ಕಾಸು ಬರುವ ಉದ್ದೇಶದಿಂದ 'ಅಕ್ಕಡಿ' ಪದ್ಧತಿಯನ್ನು ಇವತ್ತಿಗೂ ರೈತರು ಪಾಲಿಸುತ್ತಾ ಬಂದಿದ್ದಾರೆ.

ಅಕ್ಕಡಿಯ ಸಾಲು ಬೆಳೆಗಳನ್ನು ಬಿತ್ತುವ ಜವಾಬ್ದಾರಿ ಹೆಣ್ಣು ಮಕ್ಕಳದು, ಮನೆ ಅಗತ್ಯಕ್ಕೆ ತಕ್ಕಂತೆ ಸಾಲು ಬೆಳೆ ಬೀಜದ ಪ್ರಮಾಣವನ್ನು ನಿರ್ಧರಿಸುತ್ತಾರೆ.

- ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಂದೀಪುರ ರೈತರು ಶೇಂಗಾ ಜೊತೆ ಅಕ್ಕಡಿ ಸಾಲಾಗಿ ೬ರಿಂದ೯ ಸಾಲಿಗೆ ಒಂದರಂತೆ ತೊಗರಿ ಹಾಕುತ್ತಾರೆ.
- ಇದೇ ರೈತರು ತೊಗರಿ ಹೊಲದ ಮೇರೆ(ಬದು)ಗೆ ಔಡಲ ಬಿತ್ತನೆ ಮಾಡುತ್ತಾರೆ. ತೊಗರಿ ಕಾಡುವ ಕಾಯಿಕೊರಕ ಹುಳುವನ್ನು ತಿನ್ನಲು ಬರುವ ಹಕ್ಕಿಗಳಿಗೆ ಕೂಡಲು ಆಸರೆಯಾಗುತ್ತದೆ. ಔಡಲ ಹೊಲದ ಒಳಗಿನ ಬೆಳೆಗೆ ದನಗಳಿಂದ ರಕ್ಷಿಸುತ್ತದೆ. ಪಕ್ಕದ ಹೊಲದ ಕೀಟ ಬರದಂತೆ ತಡೆಗೋಡೆಯೂ ಹೌದು.
- ಪೋತ್‌ನಾಳ ರೈತರು ಎಂಟು ಸಾಲು ಜೋಳ ಮತ್ತು ೧ ಸಾಲು ತೊಗರಿ ಬಿತ್ತುತ್ತಾರೆ. ಇದಕ್ಕೆ 'ಬಂಡಿಸಾಲು' ಎನ್ನುತ್ತಾರೆ. ಹಿಂಗಾರಿಗೆ ೨ ಸಾಲು ನವಣೆ ಒಂದು ಸಾಲು ಹತ್ತಿ ಬಿತ್ತುತ್ತಾರೆ. ೫ ಸಾಲು ಸಜ್ಜೆ ಒಂದು ಸಾಲು ತೊಗರಿ ಬಿತ್ತುತ್ತಾರೆ. ಮಧ್ಯೆ ಎಳ್ಳು, ಹೆಸರು, ಮೆಟಗಿ, ಹಲಸಂದೆ, ಸೆಣಬು ಬಿತ್ತುತ್ತಾರೆ.



೪. ಬೀಜೋಪಚಾರ

ಜೋಳದ ಬೀಜೋಪಚಾರ

೧. ಹೊಲದಲ್ಲಿ ದನಕರು ಹಾಕಿದ ಸಗಣಿ ಬಿಸಿಲಿಗೆ ಒಣಗಿರುತ್ತದೆ. ಈ ಒಣಸಗಣಿಯನ್ನು ತಂದು, ಸುಟ್ಟು ಬೂದಿ ಮಾಡಿ, ಅದರೊಂದಿಗೆ ಹಸುವಿನ ಗಂಜಲ ಸೇರಿಸಿ ಜೋಳವನ್ನು ನೆನೆಸಿ ಬಿತ್ತಿದರೆ ಕಾಡಿಗೆ ರೋಗ ಬರದು. ೧೦ಸೇರು ಬೀಜಕ್ಕೆ ೧ ಹಿಡಿ ಬೂದಿ ಮತ್ತು ½ ಲೀಟರ್ ಆಕಳ ಗಂಜಲ ಸಾಕು.

೨. ಉತ್ತರ ಕರ್ನಾಟಕದಲ್ಲಿ ಜೋಳಕ್ಕೆ ವಿಶೇಷವಾಗಿ ಬೀಜೋಪಚಾರ ಮಾಡುತ್ತಾರೆ. ಹತ್ತು ಲೀಟರ್ ನೀರಿಗೆ ಒಂದು ಕೆಜಿ ಸುಣ್ಣ ಹಾಕಿ, ೧೦ ತಾಸುಗಳವರೆಗೆ ನೆನೆಹಾಕುತ್ತಾರೆ. ಈ ಮಿಶ್ರಣದಿಂದ ಬಂದ ಸುಣ್ಣದ ತಿಳಿ ನೀರಿನಲ್ಲಿ ಒಂದು ರಾತ್ರಿ ಇಡೀ ಜೋಳದ ಬೀಜಗಳನ್ನು ನೆನೆಹಾಕುತ್ತಾರೆ. ಮರುದಿನ ಬೆಳಗ್ಗೆ ಬೀಜಗಳನ್ನು ಸುಣ್ಣದ ತಿಳಿನೀರಿನಿಂದ ಹೊರಗೆ ತೆಗೆದು, ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಬಳಸುತ್ತಾರೆ. ಇದು ಬಾಡಗಿ ತಾಲೂಕು ಚಿನ್ನಿಕಟ್ಟೆ ರೈತರ ಜಾಣ್ಮೆ

೩. ಮುದುಗುಣಿಕಿ (ದತ್ತೂರ) ಸೊಪ್ಪಿನ ಬೀಜೋಪಚಾರ

ಹಾವೇರಿ ಜಿಲ್ಲೆ ಹಿರೆಕೆರೂರು ತಾಲ್ಲೂಕು ದೂದಿಹಳ್ಳಿಯ ಹಿರಿಯ ರೈತರಾದ ಮಹದೇವಪ್ಪ ಬಾಳೆಕಾಯಿ ಇವರು ಹಿಂದಿನಿಂದಲೂ ಬಿಳಿ ಜೋಳವನ್ನು ಬೆಳೆಯುತ್ತಿದ್ದಾರೆ. ಹಿಂಗಾರಿ ಬೆಳೆಯಾದ ಬಿಳಿ ಜೋಳವು ಇವರ ಮತ್ತು ಈ ಭಾಗದ ರೈತರ ಮುಖ್ಯ ಆಹಾರ ಬೆಳೆ.ಬಿಳಿ ಜೋಳಕ್ಕೆ ಬರುವ ರೋಗಗಳಲ್ಲಿ ಕಾಡಿಗೆ ರೋಗ ಮುಖ್ಯವಾದುದ್ದು. ತೆನೆ ಕಾಳು ಕಟ್ಟುವ ಸಮಯದಲ್ಲಿ ಈ ರೋಗ ಬರುತ್ತದೆ. ಗಿಡ ನೋಡಲು ಚೆನ್ನಾಗಿದ್ದರೂ ತೆನೆಯಲ್ಲಿ ಕಾಳುಗಳೆಲ್ಲಾ

ಕಪ್ಪಾಗಿ ಮುಟ್ಟಿದರೆ ಕೈಗೆ ಕಪ್ಪು ಮಸಿಯಂತೆ ಅಂಟಿಕೊಳ್ಳುತ್ತದೆ. ಈ ರೋಗವನ್ನು ತಪ್ಪಿಸಲು ಮಹದೇವಪ್ಪನವರು ತಮ್ಮ ಊರಿನಲ್ಲಿ ಪುಕ್ಕಟೆಯಾಗಿ ಸಿಗುವ ಮುದುಗುಣಿಕಿ ಸೊಪ್ಪು ಅಥವಾ ಮುಕ್ಕಿಕಾಯಿ ಸೊಪ್ಪನ್ನು ಬಳಸಿ ಬಿಳಿಜೋಳಕ್ಕೆ ಬೀಜೋಪಚಾರ ಮಾಡುತ್ತಾರೆ.

ವಿಧಾನ : ಒಂದು ಕೆ.ಜಿ ಸೊಪ್ಪನ್ನು ಸಣ್ಣಗೆ ಕತ್ತರಿಸಿ ಜೋಳಕ್ಕೆ ಚೆನ್ನಾಗಿ ತಿಕ್ಕಬೇಕು. ನಂತರ ೫-೧೦ ನಿಮಿಷ ಬಿಟ್ಟು ಬಿತ್ತನೆ ಮಾಡಬೇಕು. ಬಿತ್ತುವ ಮುನ್ನ ಹೊಲದಲ್ಲಿಯೇ ಈ ರೀತಿ ಮಾಡಿದರೆ ಒಳ್ಳೆಯದು. ಒಂದು ಕೆ.ಜಿ ಸೊಪ್ಪಿನಿಂದ ೬ ಕೆಜಿ ಬೀಜಕ್ಕೆ ಉಪಚರಿಸಬಹುದು.

ರಾಗಿಯ ಬೀಜೋಪಚಾರ

೧. ಒಂದು ಲೀಟರ್ ಗಂಜಲಕ್ಕೆ ಹತ್ತು ಲೀಟರ್ ನೀರು ಬೆರಸಬೇಕು. ಬಿತ್ತಬೇಕಾದ ರಾಗಿ ಬೀಜವನ್ನು ಈ ಮಿಶ್ರಣದಲ್ಲಿ ಹಾಕಿ ಹದಿನೈದು ನಿಮಿಷ ನೆನಸಬೇಕು. ನಂತರ ಅದನ್ನು ತೆಗೆದು ನೀರಿನಿಂದ ತೊಳೆದು ನೆರಳಿನಲ್ಲಿ ಒಣಗಿಸಬೇಕು. ಬೀಜ ಒಣಗಿದ ನಂತರ ಬಿತ್ತನೆಗೆ ಬಳಸಬಹುದು. ಇದರಿಂದ ಬೀಜಗಳು ರೋಗ ರಹಿತವಾಗುತ್ತವೆ.

೨. ಮಧುಗಿರಿ ಭಾಗದಲ್ಲಿ ರಾಗಿ ತೆನೆಗಳನ್ನು ದನಗಳಿಗೆ ತಿನ್ನಿಸಿ, ಸಗಣಿಯಲ್ಲಿ ಬರುವ ರಾಗಿ ಕಾಳನ್ನು ತೊಳೆದು ಬಿತ್ತುತ್ತಾರೆ. ಇದರಿಂದ ಸಸಿಗಳು ಆರೋಗ್ಯಪೂರ್ಣವಾಗಿ ಬೆಳೆಯುತ್ತದೆ.

ಭತ್ತದ ಬೀಜೋಪಚಾರ

೧. ಒಂದು ಪಾತ್ರೆಗೆ ಮುಕ್ಕಾಲು ಭಾಗದಷ್ಟು ನೀರು ತುಂಬಿ. ನಾಟಿ ಕೋಳಿ ಮೊಟ್ಟೆಯನ್ನು ನೀರಿನಲ್ಲಿ ಮುಳುಗಿಸಿ. ಮೊಟ್ಟೆ ಅಡ್ಡಲಾಗಿ ಮಲಗಿದರೆ, ಮೊಟ್ಟೆ ಚೆನ್ನಾಗಿದೆ ಅಂತ ಅರ್ಥ. ಅದು ಉದ್ದನಾಗಿ ನಿಂತರೆ ಮೊಟ್ಟೆ ಕೆಟ್ಟು ಹೋಗಿದೆ ಎಂದು ತಿಳೀಬೇಕು ಮತ್ತು ಮೊಟ್ಟೆಯನ್ನು ಬದಲಿಸಬೇಕು.

ಈಗ ನೀರಿನ ಪಾತ್ರೆಗೆ ಉಪ್ಪು ಸುರಿಯುತ್ತಾ ಹೋಗಬೇಕು. ಮೊಟ್ಟೆಯ ತುದಿ ನಾಲ್ಕಾಣೆ ಭಾಗ ಕಾಣುವವರೆಗೂ ಉಪ್ಪು ಹಾಕುತ್ತಾ ಹೋಗಬೇಕು. ಮೊಟ್ಟೆ ತೇಲುವುದಕ್ಕೆ ಶುರುವಾದಾಗ ಉಪ್ಪು ಹಾಕುವುದನ್ನು ನಿಲ್ಲಿಸಿ, ಭತ್ತದ ಬೀಜವನ್ನು ಉಪ್ಪು ನೀರಿಗೆ ಹಾಕಬೇಕು. ನೀರಲ್ಲಿ ಕೈಯಾಡಿಸುತ್ತಾ, ಮೇಲೆ ತೇಲುವ ಜೊಳ್ಳು ಭತ್ತ ತೆಗೆದುಹಾಕಬೇಕು. ಹದಿನೈದು ನಿಮಿಷ ಬಿಟ್ಟು, ಭತ್ತದ ಬೀಜವನ್ನು ಉಪ್ಪು ನೀರಿನಿಂದ ಹೊರ ತೆಗೆಯಬೇಕು. ನಂತರ ಒಳ್ಳೆಯ ನೀರಲ್ಲಿ ಚೆನ್ನಾಗಿ ಭತ್ತ ತೊಳೆದು, ನೆರಳಲ್ಲಿ ಒಣಗಿಸಿ ನಂತರ ಕೆಸರು ಗದ್ದೆಗೆ ಹಾಕಬೇಕು. ಇದರಿಂದ ಕಾಂಡಕೊಳೆ ರೋಗ, ಎಲೆ ಚುಕ್ಕೆ ರೋಗ ಮತ್ತು ಬೀಜ ಕೊಳೆಯುವುದು ತಪ್ಪುತ್ತದೆ.

೨. ಬಿತ್ತನೆ ಭತ್ತವನ್ನು ರಾತ್ರಿಯೆಲ್ಲಾ ನೀರಿನಲ್ಲಿ ನೆನೆಹಾಕಿ, ಮೂರನೆಯ ದಿವಸ ಎಕ್ಕದೆಲೆ ಅಥವಾ ಹರಳೆಲೆ, ಕುರಿಹಿಕ್ಕೆ - ಇವುಗಳನ್ನು ಸೇರಿಸಿ ಒಂದು ಗುಂಡಿಯಲ್ಲಿ ಹರಡಿ, ಅದರ ಮೇಲೆ ನೆನೆದ ಬೀಜಗಳನ್ನು ಹಾಕಿ, ಬಂದರಿಕೆ ಸೊಪ್ಪು ಮುಚ್ಚಿ ಭಾರವಾದ ಕಲ್ಲು ಏರುತ್ತಾರೆ.


ಮಾರನೆಯದಿನ ಮೇಲೆ ಮುಚ್ಚಿರುವ ಬಂದರಿಕೆ ಸೊಪ್ಪುಗಳನ್ನು ತೆಗೆದು, ಬೀಜದ ಮೇಲೆ ನೀರು ಚುಮುಕಿಸಿ ಮೇಲೆ ಕೆಳಗೆ ಮಾಡಿ ಸೊಪ್ಪು ಮುಚ್ಚಿ ಭಾರ ಹೇರುವರು. ಹೀಗೆ ಎರಡು ದಿವಸ ಮಾಡಿದರೆ ಮೊಳಕೆ ಬರುತ್ತದೆ. ತುಮಕೂರು ಭಾಗದ ಭತ್ತದ ಬೀಜೋಪಚಾರ.

ಹತ್ತಿಯ ಬೀಜೋಪಚಾರ

೧. ಹತ್ತಿಕಾಳನ್ನು ದನದ ಸಗಣಿಯಿಂದ ಉಜ್ಜಿ ನಂತರ ಬಿತ್ತುವ ಪದ್ಧತಿ ಇದೆ.

೨. ಸಗಣಿಯ ರಾಡಿಯಲ್ಲಿ ಹತ್ತಿ ಬೀಜ ಹಾಕಿ, ಎರಡೂ ಕೈಯಿಂದ ಮೇಲೆ ಕೆಳಗೆ ಮಾಡುತ್ತಾರೆ. ಕುಂಬಾರನ ಮನೆ ಬೂದಿಯನ್ನು ಮೇಲೆ ಸುರಿದು ಮತ್ತೆ ಮೇಲೆ ಕೆಳಗೆ ಮಾಡುತ್ತಾರೆ. "ಬೀಜ ಬಿಡಿಬಿಡಿಯಾಗಿ ಬೀಳ್ತಾವು, ಬಿತ್ರೋಕ ಅನ್ಕೂಲ. ಮೇಲತ್ತು ನಾವು ಹಚ್ಚದು ಸಗಣಿ ಬಳ್ಳೆ ಗೊಬ್ರ, ಮೆಳೀಕೆ ಕಸೂವಾಗಿ ಬರ್ತವು. ಬೂದಿ ಅಂದ್ರ ಅದೂ ಒಂದ್ ಔಷಧಿ. ಅಂತಿಂತ ರೋಗ ಬೆಳೀಗೆ ಮುಂದೆ ತಾಗದುಲ್ಲ" ಎಂದು ಹೊಸರಿತ್ತಿಯ ಎಲ್ಲಮ್ಮ ಅನುಭವದಿಂದ ಹೇಳುತ್ತಾರೆ.

'ಜಯಧರ' ಹತ್ತಿಯ ಬೀಜೋಪಚಾರ ಇದು.





೫. ತಳಿ ಅಭಿವೃದ್ಧಿ

ಬಿತ್ತನೆ ಬೀಜಗಳ ಆಯ್ಕೆ

೧. ತೆನೆಯ ಮೇಲಿನ ಭಾಗದ ಅರ್ಧ ತೆನೆಯನ್ನು ಬೀಜಕ್ಕೆ ಎತ್ತಿಡಿ.

೨. ಸಸಿಯ ಮಧ್ಯದಿಂದ ಬರುವ ಮೂಲ ತಾಯಿ ತೆನೆಯನ್ನು ಬಿತ್ತನೆಗೆ ಸಂಗ್ರಹಿಸಿ. ಹೊಲದ ಮಧ್ಯ ಭಾಗದಲ್ಲಿನ ತೆನೆ ಸಂಗ್ರಹಿಸಿ,

೩. ಬದುಗಳ ಪಕ್ಕ ಕಾಲುವೆಗಳ ಪಕ್ಕ, ಗೊಬ್ಬರದ ಗುಡ್ಡೆ ಹಾಕಿರುವ ಕಡೆ ಸಂಗ್ರಹಿಸಬೇಡಿ.

೪. ತನೆ ಸಂಗ್ರಹಣೆಗೆ ಹೆಚ್ಚು ಎತ್ತರವಿಲ್ಲದ, ಕಡಿಮೆ ಎತ್ತರವೂ ಇಲ್ಲದ ಮಧ್ಯಮ ಎತ್ತರದ ಗಿಡಗಳನ್ನು ಆಯ್ದುಕೊಳ್ಳಿ,

೫. ಜೋಳ ಸಜ್ಜೆಯಲ್ಲಿ ಕಾಂಡ ಅಥವಾತೆನೆಯ ಕುತ್ತಿಗೆಯ ಭಾಗವನ್ನು ಕತ್ತರಿಸಿದರೆ ಕೆಂಪಗೆ ಇಲ್ಲವೇ ಟೊಳ್ಳಾಗಿ ಇರಬರದು.

೬. ಆರಿಸಿದ ತೆನೆಗಳನ್ನು ಚೆನ್ನಾಗಿ ಒಣಗಿಸಿ. ಕಾಳು ಬೇರ್ಪಡಿಸಿ ಬೇರೆ ತಳಿ ಜತೆ ಮಿಶ್ರವಾಗದಂತೆ ಎಚ್ಚರಿಕೆವಹಿಸಿ.

೭. ಗಿಡದಲ್ಲೇ ಬಲಿತು, ಒಣಗಿದ ಕಾಯಿಗಳನ್ನು ಸಂಗ್ರಹಿಸಿ. ಇಡಿಯಾಗಿ ಎತ್ತಿಡಿ. ಬೇಕೆಂದಾಗ ಒಡೆದು ಬಿತ್ತನೆ ಬೀಜಗಳನ್ನು ಎತ್ತಿಕೊಳ್ಳಿ,

೮. ಬಿತ್ತನೆಗೆ ಎತ್ತಿಟ್ಟ ಕಾಯಿಗಳನ್ನು ಒಲೆಯ ಮೇಲೆ ಕಟ್ಟಿದರೆ ಹುಳುಗಳ ಕಾಟ ಇರದು.

೯. ಬಿತ್ತನೆ ಬೀಜದ ಜೊತೆ ಲಕ್ಕಿ ಮತ್ತು ಬೇವಿನ ಎಲೆ ಅಥವಾ ಬಜೆ ಬೆರೆಸಿಟ್ಟರೆ ಹುಳು ಬೀಳುವುದಿಲ್ಲ.

ಜೋಳದ ಬೀಜದ ಆಯ್ಕೆ

- ಜೋಳದ ತೆನೆಗಳನ್ನು ರಾಶಿ ಮಾಡಲು ತೆಗೆದ ತೆನೆಗಳಲ್ಲಿ ಯಾವ ತೆನೆಗಳ ಉಣಚಿಯು ಸಂಪೂರ್ಣವಾಗಿ ಬಿಳುಪಾಗಿರುತ್ತದೆಯೋ ಅಂಥ ತೆನೆಗಳು ರೋಗ ರುಜಿನಗಳಿಂದ ಮುಕ್ತವಾಗಿರುತ್ತವೆ. ಅಂಥ ತೆನೆಗಳಲ್ಲಿ ಸರಿಯಾಗಿ ಬಲಿತು ಮಾಗಿದ ತೆನೆಗಳನ್ನು ಮೂರುಭಾಗ ಮಾಡಿ ನಡುವಿನ ಭಾಗವನ್ನು ಮಾತ್ರ ಬೀಜ ತೆಗೆಯಲು ಉಪಯೋಗಿಸ ಬೇಕು. ತೆನೆಯ ತುದಿಯ ಕಡೆಗಿದ್ದ ಭಾಗದಲ್ಲಿಯ ಬೀಜದ ಕಾಳುಗಳಲ್ಲಿ ಬಿಸಿಲಿನ ತಾಪದಿಂದ ಮೊಳಕೆಯೊಡೆಯುವ ಪ್ರಮಾಣವು ಕಡಿಮೆಯಾಗುವ ಸಂಭವವಿರುವುದರಿಂದ ಮತ್ತು ತೆನೆಯ ಹಿಂದಿನ ಭಾಗದಲ್ಲಿಯ ಬೀಜಗಳು ಸಂಪೂರ್ಣ ಬಲಿಯದಿರುವ ಸಂಭವವಿರುತ್ತದೆ.
- ಕುಷ್ಟಗಿ ಮತ್ತು ಬಸವಕಲ್ಯಾಣ ರೈತರು ಹೊಲದಲ್ಲಿ ಅಲಲ್ಲಿ ಸಣ್ಣ ಗೊಬ್ಬರದ ಗುಡ್ಡೆ ಮಾಡಿ ಜೋಳದ ಬೀಜಗಳನ್ನು ಬಿತ್ತುತ್ತಾರೆ. ಈ ಗುಡ್ಡೆಯಲ್ಲಿ ಬೆಳೆದ ಆರೋಗ್ಯವಾಗಿ, ಎತ್ತರವಾಗಿ ಬೆಳೆದ ಉದ್ದತೆನೆಯ, ಹೆಚ್ಚು ಕಾಳುಇರುವ ತೆನೆಗಳ ಗಿಡಗಳನ್ನು ಆಯ್ಕೆ ಮಾಡುತ್ತಾರೆ. ಆಯ್ಕೆ ಮಾಡಿದ ತೆನೆಗಳನ್ನು ಗೊಂಚಲು ಕಟ್ಟಿ ಒಲೆಯ ಬಳಿ ನೇತುಹಾಕುತ್ತಾರೆ. ಬಿತ್ತನೆ ತಿಂಗಳು ಇದೆ ಎನ್ನುವಾಗ ತೆನೆಗಳನ್ನು ಬಡಿದು ಬೀಜ ಮಾಡಿಕೊಳ್ಳುತ್ತಾರೆ.

ದ್ವಿದಳ ಧಾನ್ಯಗಳ ಬೀಜಗಳನ್ನು ಆರಿಸುವುದು

ದ್ವಿದಳಧಾನ್ಯಗಳ ಬೆಳೆಗಳಲ್ಲಿ ಕಾಳು ಕಟ್ಟಿದ ಎಲ್ಲ ಕಾಯಿಗಳು ಒಮ್ಮೆಲೆ ಬಲಿತು ಮಾಗುವುದಿಲ್ಲ. ಕಾರಣ ಇಂಥ ಬೆಳೆಗಳಲ್ಲಿ ಮೊದಲು ಬಲಿತು ಮಾಗಿದ ಕಾಯಿಗಳನ್ನು ಬೀಜಕ್ಕೆಂದು ಹಿಡಿದಿಟ್ಟು ಬಿತ್ತುವ ಪೂರ್ವದಲ್ಲಿ ಉತ್ತಮ ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು. ಕೊನೆಬೀಡಿನ ಕಾಯಿಗಳ ಬೀಜಗಳು ಅಷ್ಟೊಂದು ಸಧೃಢವಾಗಿ ಬಲಿತು ಮಾಗುವ ಭರವಸೆ ಇರದ್ದರಿಂದ ಅವುಗಳ ಮೊಳಕೆಯೊಡೆಯುವ ಪ್ರಮಾಣವು ಕಡಿಮೆ ಇರುತ್ತದೆ.

ಹತ್ತಿಯ ತಳಿಯ ಬೀಜ ಶೇಖರಿಸುವುದು.

ಹತ್ತಿಯ ಪೈರಿನಲ್ಲಿಯೂ ಎಲ್ಲ ಕಾಯಿಗಳು ಒಮ್ಮೆಲೆ ಬಲಿತು ಮಾಗಿ ಅರಳುವುದಿಲ್ಲ. ರೋಗ ಮತ್ತು ಹುಳದ ಬಾಧೆ ಇಲ್ಲದ, ಉತ್ತಮವಾಗಿ ಮೊದಲು ಬಲಿತು ಅರಳಿದ ತೊಳೆಗಳನ್ನು ಬಿಡಿಸಿ ಶೇಖರಿಸಿಟ್ಟು ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು.

ನೆಲಗಡಲೆ ಬೀಜ ಕಂಡು ಹಿಡಿಯುವುದು.

ನೆಲಗಡಲೆಯ ಪೈರಿನಲ್ಲಿ ಎಲ್ಲ ಕಾಯಿಗಳು ಒಮ್ಮೆಲೆ ಬಲಿಯದೆ ಭೂಮಿಯ ಒಳಗಡೆ

ಬೆಳೆದು ಮಾಗುವುದರಿಂದ ನೆಲಗಡಲೆಯ ರಾಶಿ ಮಾಡಿದ ಮೇಲೆ ಸಂಪೂರ್ಣ ಬಲಿತು ಮಾಗಿದ ಕಾಯಿಗಳನ್ನು ಆರಿಸಿ ತೆಗೆದು ಬೀಜಕ್ಕೆಂದು ಒಳ್ಳೆಯ ಗಾಳಿಯಾಡುವ ಜಾಗದಲ್ಲಿ ಶೇಖರಿಸಿಡಬೇಕು. ನಂತರ ಬಿತ್ತುವ ಪೂರ್ವದಲ್ಲಿ ಬೀಜಗಳನ್ನು ಬೇರ್ಪಡಿಸಿ ಬಿತ್ತಬೇಕು.

ಸೂರ್ಯಪಾನದ ಬೀಜ ಶೇಖರಿಸುವುದು

ಸೂರ್ಯಪಾನ(ಸೂರ್ಯಕಾಂತಿ) ತೆನೆಗಳಲ್ಲಿ ಕಾಳುಗಳು ತೆನೆಯ ಕಡೆ ದಂಡೆಯಿಂದ ಬಲಿತು ಮಾಗುತ್ತ ತೆನೆಯ ನಡುವಿನ ಬಿಂದುವಿನ ಕಡೆಗೆ ಬಲಿಯುತ್ತಾ ಹೋಗುತ್ತವೆ, ಹಾಗಾಗಿ ಸೂರ್ಯಪಾನದ ತೆನೆಯಲ್ಲಿಯ ಕಡೆದಂಡೆಯ ಎರಡು ಅಥವಾ ಮೂರು ಸಾಲುಗಳ ಕಾಳುಗಳನ್ನು ಬೇರ್ಪಡಿಸಿ ಅವುಗಳಲ್ಲಿ ಉತ್ತಮ ಬಲಿತ ಕಾಳುಗಳನ್ನು ಮಾತ್ರ ಬೀಜಕ್ಕೆಂದು ಉಪಯೋಗಿಸಬೇಕು.

ಸಜ್ಜೆ ಬೀಜದ ಆಯ್ಕೆ

ಕುಷ್ಟಗಿ ಭಾಗದ ರೈತರು ಸಜ್ಜೆ ತೆನೆಯು ಬರಲಾರಂಭಿಸಿದ ನಂತರ ನಿಯಮಿತವಾಗಿ ಹೊಲಕ್ಕೆ ಭೇಟಿಕೊಡುತ್ತಾರೆ. ಆರೋಗ್ಯವಂತ ಪೈರುಗಳನ್ನು ಗುರುತಿಸುತ್ತಾರೆ. ಸಾಧಾರಣ ಎತ್ತರ ಮತ್ತು ತೆಂಡೆಹೊಡೆವ ಗಿಡಗಳಿಗೆ ಪ್ರಾಮುಖ್ಯ. ಒಳ್ಳೆಯ ತೆನೆಗಳನ್ನು ಕಡ್ಡಿಸಮೇತ ಕಟಾವು ಮಾಡುತ್ತಾರೆ. ಕತ್ತರಿಸಿದ ಭಾಗ ಬಿಳಿ ಇರಬೇಕು. ಕಪ್ಪು ಅಥವಾ ಕೆಂಪು ಬಣ್ಣದಿದ್ದರೆ ರೋಗದ ತೆನೆಯೆಂದು ತಿರಸ್ಕಾರಿಸುತ್ತಾರೆ. ಏಳು ತಿಂಗಳ ನಂತರ ಅಮಾವಾಸ್ಯೆಯ ದಿನ ಒಕ್ಕಣೆ ಮಾಡಿ ಸುಂಕು ಸಮೇತ ಎತ್ತಿ ಇಡುತ್ತಾರೆ.

ಮುಸುಕಿನ ಜೋಳದ ತೆನೆ ಆಯ್ಕೆ

ಬಿಜಾಪುರ ಮತ್ತು ಬಸವಕಲ್ಯಾಣದ ರೈತರು ಮುಸುಕಿನ ಜೋಳದಲ್ಲಿ ಮೊದಲಿಗೆ ಕಾಣಿಸಿಕೊಂಡ ತೆನೆಯನ್ನು ಬೀಜಕ್ಕೆ ಗುರುತಿಸುತ್ತಾರೆ. ಬಟ್ಟೆಯ ಚೂರನ್ನ ತೆನೆಯ ಬುಡಕ್ಕೆ ಕಟ್ಟುತ್ತಾರೆ. ಸಗಣಿಯಿಂದ ತೆನೆಯನ್ನು ಸವರುತ್ತಾರೆ. ಚೆನ್ನಾಗಿ ಬಲಿತ ನಂತರ ಆ ತೆನೆಯನ್ನು ಬೀಜಕ್ಕೆ ಎತ್ತಿಕೊಳ್ಳುತ್ತಾರೆ.

ಬದನೆ ಬೀಜದ ಆಯ್ಕೆ

- ಚೆನ್ನಾಗಿ ಬಲಿತು ಹಣ್ಣಾದ ಎರಡನೆಯ ಬೀಡಿನ ಕಾಯಿಗಳ ತುದಿ ಕೊಯ್ದು, ಸರ ಮಾಡಿ ಒಲೆಯ ಮೇಲೆ ಬಿತ್ತನೆಗೆ ಕಟ್ಟುವುದು ಪರಂಪರಾಗತವಾಗಿ ನಡೆದುಬಂದ ರೂಢಿ. ಬೀಜ ಬೇಕೆಂದಾಗ ಒಣಗಿದ ಕಾಯಿ ಬಡಿದು ಬೀಜ ಪ್ರತ್ಯೇಕಿಸುತ್ತಾರೆ. ಬಿತ್ತನೆಬೀಜಗಳನ್ನು ಐದುವರ್ಷಗಳವರೆಗೆ ಸಂಗ್ರಹಿಸಿಡಬಹುದು, ಕೀಟ ಮತ್ತು ರೋಗಗಳನ್ನು ನಿಯಂತ್ರಿಸಲು ಬೆಳಗಿನ ಹೊತ್ತು ಶೋಧಿಸಿದ ಒಲೆಬೂದಿ ಎರಚಿದರೆ ಆಯ್ತು.
- ಬಿತ್ತನೆಗೆ ಬಿಟ್ಟ ತರಕಾರಿಗಳ ಮೇಲೆ ಎಲೆ ಅಡಿಕೆ ಉಗಿಯುವ ಪದ್ಧತಿ ತುಮಕೂರು ಬೆಂಗಳೂರು ಮತ್ತು ಮಂಡ್ಯ ಭಾಗಗಳಲ್ಲಿದೆ. ಕಳ್ಳ ಕಾಕರು ದಪ್ಪನೆಯ ಬಿತ್ತನೆಯ ತರಕಾರಿಯನ್ನು ಕದಿಯದಿರಲು ಈ ಉಪಾಯ.

ಬೀಜ ದಾಸೋಹ

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಅಂಕಲೀ ಮಠದ ಸುತ್ತಮುತ್ತಲಿನ ೫೦ ಹಳ್ಳಿಗಳ ಜನ, ಜಾತ್ರೆಗೆ ಬರುವಾಗ ತಮ್ಮ ಮನೆಯಿಂದ ಬಿತ್ತನೆಗೆ ಎತ್ತಿಟ್ಟಿರೋ ಜೋಳ, ಸಜ್ಜೆ ಬೀಜಗಳನ್ನು ಮಡಿಲಿಗೆ ಹಾಕಿಕೊಂಡು ಬರ್‍ತಾರೆ. ಮಠದಲ್ಲಿ ಇಟ್ಟಿರುವ ದೊಡ್ಡ ದೊಡ್ಡ ಕಡಾಯಿಗಳಲ್ಲಿ, ತಾವು ತಂದ ಬೀಜಗಳನ್ನು ಹಾಕ್ತಾರೆ.

ಜಾತ್ರೆ ಮುಗಿಸಿ ವಾಪಾಸ್ ಮನೆಗೆ ಹೋಗುವಾಗ ಈ ಬೀಜದ ರಾಶಿಯಿಂದ ಒಂದು ಬೊಗಸೆ ಜೋಳ, ಒಂದು ಬೊಗಸೆ ಸಜ್ಜೆಯನ್ನು ಗಂಟು ಕಟ್ಟಿಕೊಂಡು ಊರಿಗೆ ಹೋಗ್ತಾರೆ. ಬಿತ್ತನೆ ಕಾಲಕ್ಕೆ ಮನೆ ಜೋಳ ಸಜ್ಜೆ ಜತೆ, ಮಠದಿಂದ ತಂದ ಜೋಳ, ಸಜ್ಜೆ ಬೆರೆಸಿ ಬಿತ್ತುತ್ತಾರೆ. ಈ ದೇವರ ಬೀಜಗಳನ್ನು ಮನೆ ಬೀಜದ ಜತೆ ಬೆರೆಸಿದರೆ ಸಮೃದ್ಧ ಫಸಲು ಬರುತ್ತದೆ ಎಂಬ ನಂಬಿಕೆ ಈ ಭಾಗದ ರೈತರದ್ದು.

ಈ ವಿಶಿಷ್ಟ ಬೀಜ ಆಚರಣೆಯ ಹಿಂದೆ ವೈಜ್ಞಾನಿಕ ಕಾರಣ ಇದೆ. ಒಂದೇ ತಳಿ ಜೋಳ, ಸಜ್ಜೆ ಹಲವಾರು ವರ್ಷ ಒಂದೇ ಹೊಲದಲ್ಲಿ ಬೆಳೆದರು ಅದು ಕ್ಷೀಣಿಸುತ್ತಾ ಹೋಗುತ್ತದೆ. ಅಂಕಲಿ ಮಠದ ಜಾತ್ರೆಯಲ್ಲಿ ತಂದ ಬೀಜಗಳಲ್ಲಿ, ನೂರಾರು ರೈತರ ಹೊಲದ ಬೀಜಗಳು ಮಿಶ್ರವಾಗಿರುತ್ತವೆ. ಇಂಥ ಬೀಜಗಳು, ಮನೆ ಬೀಜದ ಜತೆ ಸೇರಿ ಬೆಳೆದಾಗ, ಹೊಸ ಬೀಜಗಳ ಉತ್ತಮ ಗುಣಗಳು ಪರಾಗಸ್ಪರ್ಶ ಕ್ರಿಯೆ ಮೂಲಕ ಮನೆ ತಳಿಗೆ ಸೇರಿ ಇಳುವರಿ ಹೆಚ್ಚಾಗುತ್ತದೆ. ಪೈರುಗಳು ಸಧೃಢವಾಗುತ್ತವೆ.

ಗಮನಿಸಿದ್ದೀರಾ ! ಹತ್ತಿರದ ಸಂಬಂಧಿಕರಲ್ಲಿ ಮದುವೆ ಆಗಿ, ಆಗಿ ಹುಟ್ಟೋ ಮಕ್ಕಳು ಕ್ಷೀಣವಾಗಿದ್ದಾಗ ಹಿರಿಯರು ಹೇಳಲ್ವಾ ಹತ್ತಿರದ ಸಂಬಂಧ ಸಾಕು, 'ಬೇರೆ ಕುಲದಾಗೆ ಹೆಣ್ಣು ತರ್ರೀ...!'. ಇದೇ ಹಿನ್ನೆಲೆ ಬೀಜ ದಾಸೋಹದ್ದು.





೭. ಬೀಜ ಬಚ್ಚಿಡುವುದು

ನಮ್ಮಲ್ಲಿ ಎಷ್ಟೊಂದು ಬೀಜ ವೈವಿಧ್ಯ ಇದೆ. ಆದರೆ ಶೇಖರಣೆ ಮಾಡಿದಾಗ ಹುಳುಗಳ ಕಾಟ ಇರುವುದು ಕೆಲವೇ ಜಾತಿಗಳಿಗೆ. ಮುಖ್ಯವಾಗಿ ಜೋಳ, ಭತ್ತ, ದ್ವಿದಳಧಾನ್ಯಗಳು ಮತ್ತು ತರಕಾರಿಗಳು. ಅದರಲ್ಲೂ ಕೆಲವನ್ನಂತೂ ಕಡೇಪಕ್ಷ ೨–೩ ತಿಂಗಳೂ ಕೂಡ ಸಂರಕ್ಷಿಸಿ ಇಡುವುದಕ್ಕೆ ಆಗೋಲ್ಲ. ಖರ್ಚಿಲ್ಲದೇ ಬೀಜ ಶೇಖರಿಸುವ ಪದ್ಧತಿಗಳು ಸಾಂಪ್ರದಾಯಿಕವಾಗಿ ರೂಢಿಯಲ್ಲಿವೆ. ಇದರಿಂದ ವರ್ಷಗಟ್ಟಲೆ ಬೀಜ ಸಂರಕ್ಷಿಸಿಡಬಹುದು. ಇಂಥ ಪದ್ಧತಿಗಳನ್ನು ವ್ಯವಸಾಯ ಬೋಧಿನಿ ಪುಸ್ತಕದಲ್ಲಿ ದಾಖಲಿಸಲಾಗಿದೆ.

'ಬೀಜಗಳನ್ನು ಬಿತ್ತುವವರೆಗೂ ಒಂದು ಮೂಟೆಯಲ್ಲಿಟ್ಟಿರಬೇಕು. ಮಧ್ಯೆ ಬಿಚ್ಚಿ ನೋಡಬಾರದು. ಮೂಟೆ ಕಟ್ಟಿಡುವುದಕ್ಕೆ ಮುಂಚೆ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಇಲ್ಲವಾದರೆ ಹಸೀ ಬೀಜಗಳು ಮೊಳಕೆ ಹೊರಟು ಮುಂದಿನ ಬಿತ್ತನೆಗೆ ಆಗುವುದಿಲ್ಲ. ಮೂಟೆ ಕಟ್ಟುವಾಗ ಜೊತೆಯಲ್ಲಿ ಬೂದಿ ಸೇರಿಸಿ ಕಟ್ಟಿದರೆ ಹುಳ ಬಿದ್ದು ಕೆಡುವುದಿಲ್ಲ. ಇಲ್ಲವಾದರೆ ಕರ್ಪೂರ, ಮರದೆಣ್ಣೆಯನ್ನಾದರೂ ಹಾಕಿ ಸಂರಕ್ಷಿಸಬಹುದು. ನಾರುಳ್ಳ ಬೀಜಗಳನ್ನು ಬಿತ್ತುವುದಕ್ಕೆ ಮುಂಚೆ ಹಸಿ ಮಣ್ಣಿನಿಂದಾಗಲೀ ದನದ ಗೊಬ್ಬರದಿಂದಾಗಲೀ ತಿಕ್ಕಿ ಬೇರೆ ಮಾಡಬೇಕು. ಇಲ್ಲವಾದರೆ ಬಿತ್ತುವಾಗ ಒಂದಕ್ಕೊಂದು ಸಿಕ್ಕಿಕೊಂಡು ವಿಂಗಡವಾಗಿ ಬೀಳದೇ ಒಂದೇ ಸ್ಥಳದಲ್ಲಿ ಬೀಳುತ್ತವೆ. ಹೀಗೆ ಬಿತ್ತುವುದರಿಂದ ಬೆಳೆ ಸರಿಯಾಗಿ ನಿಲ್ಲಲು ಸಾಧ್ಯವಾಗುವುದಿಲ್ಲ. ಬಹಳ ಬೀಜಗಳು ಬಹಳ ಸಣ್ಣಕ್ಕಿದ್ದರೆ ಮರಳು ಅಥವಾ ಬೂದಿಯ ಜೊತೆಯಲ್ಲಿ ಬೆರೆಸಿ ಬಿತ್ತಬೇಕು. ದೊಡ್ಡ ದೊಡ್ಡ ಬೀಜಗಳನ್ನು ಬಿತ್ತಿದರೆ, ಅಳಿಲು, ಕಾಗೆ ತಿಂದು ಬಿಡುತ್ತವಾದ್ದರಿಂದ ಕೀಲೆಣ್ಣೆ ಹಚ್ಚಿ ಬಿತ್ತಬೇಕು'.

'ಬಿತ್ತುವ ಬೀಜಗಳನ್ನು ತಿನ್ನುವ ಬೀಜಗಳ ಸಂಗಡ ಸೇರಿಸದೆ ಪ್ರತ್ಯೇಕವಾಗಿಡಬೇಕು. ಹಾಗೆ ಸೇರಿಸಿದರೆ ಬಿತ್ತುವುದಕ್ಕೆ ಬೀಜಗಳು ಅನರ್ಹವಾಗುವವು.

ಧಾನ್ಯ ಮತ್ತು ಕಾಳುಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧) ಜಾಗ್ರತೆಯಲ್ಲಿ ಹುಳುತು ಅಥವಾ ಮುಗ್ಗಿ ಹೋಗತಕ್ಕವು.

೨) ಸಾವಕಾಶವಾಗಿ ಕೆಡತಕ್ಕವು.

೩) ಬಹಳ ಕಾಲದವರೆಗೆ ಕೆಡದೇ ಇರತಕ್ಕವು.

ಇದರಲ್ಲಿ ಒಂದನೇ ಗುಂಪಿನ ಧಾನ್ಯಗಳಾಗಿ ಅವರೆ, ತೊಗರಿ, ಹೆಸರು, ಜೋಳ ಮೊದಲಾದವುಗಳು ಸೇರುತ್ತವೆ. ಇಂಥವುಗಳನ್ನು ಹುಳು ತಿನ್ನದಂತೆ ಮರಳು, ಬೂದಿ, ಒಣಗಿಸಿದ ಬೇವಿನ ಸೊಪ್ಪು ಅಥವ ಆಯಾ ಧಾನ್ಯಗಳ ಹೊಟ್ಟು ಬೆರೆಸಿ ಗಾಳಿಯಾಡದ ಸ್ಥಳಗಳಲ್ಲಿ ಕೊಮ್ಮೆಗಳಲ್ಲಾಗಲೀ, ವಾಡೆಗಳಲ್ಲಿ ಅಥವಾ ಗೂಡೆಗಳಲ್ಲಾಗಲಿ, ಹಗೇವಿನಲ್ಲಾಗಲೀ, ಗುಡಾಣದಲ್ಲಾಗಲೀ ಇಟ್ಟರೆ ಕೆಡುವುದಿಲ್ಲ. ದೋರಣೆಯಿಂದ ಹೊರಗೆ ಇಟ್ಟರೆ ಎಲ್ಲಾ ಕೆಟ್ಟು ಅದರ ಬೆಲೆ ಕಡಿಮೆಯಾಗುವುದಲ್ಲದೆ, ಅದನ್ನು ತಿನ್ನತಕ್ಕವರಿಗೆ ದೇಹದ ಆರೋಗ್ಯ ಕೆಡುವುದು. ಎರಡನೆಯ ಗುಂಪಿನಲ್ಲಿ ಭತ್ತ, ಸಾಮೆ, ನವಣೆ, ಹುರುಳಿ ಮೊದಲಾದವುಗಳು ಸೇರುತ್ತವೆ. ಸರಿಯಾಗಿ ಕಾಪಾಡಿದರೆ ಎರಡು-ಮೂರು ವರ್ಷದವರೆಗೂ ಕೆಡದೆ ನಿಲ್ಲುವವು. ಹಗೇವಿನಲ್ಲಿ ಬಹಳಕಾಲ ನಿಲ್ಲಲಾರವು. ಒಂದು ಬಗೆಯ ಮುಗ್ಗು ಹಿಡಿದು ಧಾನ್ಯವು ಬಿಳುಪೇರಿ ಕೆಡುತ್ತದೆ. ಆದರಿಂದ ತೊಂಬೆಗಳಲ್ಲಿಯೂ, ಕಣಜಗಳಲ್ಲಿಯೂ ಇಡಬೇಕು. ಮೂರನೇಯ ಗುಂಪಿನ ಧಾನ್ಯದಲ್ಲಿ ಬಹಳ ಕಾಲವಿರುವ ರಾಗಿ, ಹರಳು, ಮೊದಲಾದವುಗಳನ್ನು ಪಸಿಮೆಗೆ ಸೋಕಿಸದ ಹಾಗೆ ಇಟ್ಟರೆ ಬಹು ಕಾಲ ಏಕರೀತಿಯಾಗಿ ನಿಲ್ಲುತ್ತದೆ. ರಾಗಿಯನ್ನು ಮೂವತ್ತು-ನಲವತ್ತು ವರ್ಷದವರೆಗೂ ಒಳ್ಳೆಯ ಸ್ಥಿತಿಯಲ್ಲಿಡಬಹುದು.'

ಸರಳ ಬೀಜ ಸಂರಕ್ಷಣಾ ವಿಧಾನಗಳು

ಕೆಲವೊಂದು ಸಾಂಪ್ರದಾಯಿಕ ಪದ್ಧತಿಗಳನ್ನು ಖರ್ಚಿಲ್ಲದೇ, ಶ್ರಮವಿಲ್ಲದ ಅನುಸರಿಸ ಬಹುದಾಗಿದೆ.

೧. ಮಡಿಕೆಯ ತಳದಲ್ಲಿ ಒಂದು ಪದರು ಬೂದಿಯನ್ನು ಹಾಕಿ ಜೋಳದ ಬೀಜಗಳನ್ನು ಸುರಿದು ಇನ್ನೊಂದು ಪದರ ಬೂದಿಯನ್ನು ಹಾಕಿ ಸಗಣಿಯಿಂದ ಮಡಿಕೆಯ ಬಾಯಿ ಮುಚ್ಚಿಡುತ್ತಾರೆ.

೨. ಒಳ್ಳೆಯ ತೆನೆಗಳನ್ನು ಕೋಲಿನಿಂದ ಬಡಿದು, ಅಮಾವಾಸ್ಯೆ ಹಿಂದಿನ ದಿನ ರಾತ್ರಿ ಇಬ್ಬನಿಯಲ್ಲಿ ಹರಡಿ ಬೆಳಗ್ಗೆ ಬೇವಿನ ಎಲೆ ಹಾಕಿ ಮುಚ್ಚಿಡುತ್ತಾರೆ.

೩. ಬ್ಯಾಡಗಿ ಪ್ರದೇಶದಲ್ಲಿ ಈಚಲುಗರಿ ಚಾಪೆಯಲ್ಲಿ ಬಿತ್ತನೆ ಕಾಳು ಮತ್ತು ಇತರೆ ಬೀಜಗಳನ್ನು ಸುತ್ತಿಟ್ಟು ಬಚ್ಚಿಡುವ ಪದ್ಧತಿ ಇದೆ.

೪. ಜೋಳವನ್ನು ಸುಂಕು ಸಮೇತ ಬಡಿದು ಚೀಲದಲ್ಲಿ ಹಾಕಿ ಬಣವೆಯ ಮಧ್ಯೆ ಹಾಕುವ ಪದ್ಧತಿ ಕೂಡ್ಲಿಗಿ ಭಾಗದಲ್ಲಿದೆ.

೫. ಕಾಳಿನ ಜೊತೆಗೆ ರಸ್ತೆಯ ಧೂಳು ಮಣ್ಣನ್ನು ಬೆರೆಸುವುದು.

೬. ಕಾಳಿನ ಜೊತೆಗೆ ರಾಗಿಯ ಹುಬ್ಬಲನ್ನು ಬೆರೆಸಿ ಇಡುವುದು.

೭. ಕಡ್ಲೆಕಾಳನ್ನು ಹುರುಳಿ ಹೊಟ್ಟಿನ ಜೊತೆ ಬೆರೆಸಿಡುವುದು.

೮. ಕಾಳುಗಳಿಗೆ ಇದ್ದಿಲು, ಮೂಡೆಕಾಯಿ, ಮೆಣಸಿನಕಾಯಿ ಪುಡಿ ಮತ್ತು ರಾಗಿ ಹುಬ್ಬಲು ಬೆರೆಸಿ ಮೂಡೆ ಕಟ್ಟಿಡುವುದು.

೯. ಭತ್ತಕ್ಕೆ ಲಕ್ಕಿ ಸೊಪ್ಪು ಹಾಕಿ ಚೀಲ ಕಟ್ಟಿಡುವುದು.

೧೦. ಮಣ್ಣಿನ ಮಡಕೆಗೆ ಬೀಜ ಹಾಕಿ ಗಾಳಿ ಆಡದಂತೆ ಮತ್ತೊಂದು ಮಡಿಕೆಯನ್ನು ಮೇಲಿಟ್ಟು ಸಗಣಿ ಮೆತ್ತುವುದು.


- ರಾಶಿ ಮಾಡುವಾಗ ಗಾಳಿಗೆ ತೂರದೇ ಸುಂಕದ ಸಮೇತ ಇಟ್ಟರೆ ಹುಳು ಬೀಳುವುದಿಲ್ಲ.
- ಬೀಜಗಳ ಜೊತೆ ಬೇವಿನ ಸೊಪ್ಪು, ಎಕ್ಕದ ಸೊಪ್ಪು ಮತ್ತು ನೀಲಗಿರಿ ಸೊಪ್ಪನ್ನು ಬೆರೆಸಿ ಇಟ್ಟರೆ ಹುಳು ಬೀಳದು.
- ಬೀಜ ಅಥವಾ ತೆನೆಗಳನ್ನು ಹೊಗೆ ಹೋಗುವ ಜಾಗದಲ್ಲಿ ಕಟ್ಟಿಟ್ಟರೆ ಹುಳುಗಳ ಕಾಟ ಇರದು.
- ರಾಗಿ ನವಣೆ ಮತ್ತು ಸಾವೆ ಜತೆ ಜೋಳವನ್ನು ಬೆರೆಸಿ ಇಡಬಹುದು.
- ಬೇವು ಅಥವಾ ಹೊಂಗೆ ಎಣ್ಣೆ ಲೇಪನ ಮಾಡುವುದರಿಂದ ಕೀಟಗಳನ್ನು ನಿಯಂತ್ರಿಸಬಹುದು.
- ಜೋಳದ ಜತೆ ಲವಂಗ ಬೆರೆಸಿ ಇಡಬಹುದು.
- ಬಜೆಯನ್ನು ಪುಡಿ ಮಾಡಿ ಬೀಜಗಳ ಜೊತೆ ಬೆರೆಸಿ ಶೇಖರಿಸುವುದರಿಂದ ಕೀಟಬಾಧೆ ತಪ್ಪಿಸಬಹುದು.
- ಜೋಳದ ತೆನೆಗಳನ್ನು ಎಕ್ಕ, ಬೇವು, ಹೊಂಗೆ ಲಕ್ಕಿ ಮತ್ತು ನೀಲಗಿರಿ ಸೊಪ್ಪಿನೊಂದಿಗೆ ಬಡಿದು ಬಚ್ಚಿಡಬಹುದು. ಸೀತಾಫಲದ ಬೀಜದ ಪುಡಿ ಬೆರೆಸಿ ಇಡಬಹುದು.
- ಅರೆ ಮಲೆನಾಡು ಪ್ರದೇಶದಲ್ಲಿ ಕಣಜ, ಹುಲ್ಲುಮುಡಿ ಕಟ್ಟುವುದು, ಮಡಿಕೆಯಲ್ಲಿ ಇಡುವುದು, ಬಣವೆಯಲ್ಲಿ ಬೀಜ ಬಚ್ಚಿಡುವ ವಿದಾನಗಳಿವೆ.
- ಗದಗ ಜಿಲ್ಲೆಯಲ್ಲಿ ಬೇವಿನ ಸೊಪ್ಪು ಮಿಶ್ರಣ, ನಾಟಿ ಹಸುವಿನ ಬೆರಣೆ ಸುಟ್ಟು ಬೂದಿ ಹಾಕಿಡುವುದು, ಮೆಣಸಿನ ಪುಡಿ ಹಾಕಿಡುವುದು, ಗೋಣಿ ಚೀಲದಲ್ಲಿ ಬೀಜ ಬಚ್ಚಿಡುವ ವಿದಾನಗಳಿವೆ.

ಬಚ್ಚಿಡುವ ಮುನ್ನ....

- ಕಾಳುಗಳನ್ನು ಮಧ್ಯಾಹ್ನದ ರಣಬಿಸಿಲಿನಲ್ಲಿ ಒಣಗಿಸಬಾರದು. ಹೀಗೆ ಮಾಡಿದಾಗ ಹೊರಪದರವಷ್ಟೇ ಚೆನ್ನಾಗಿ ಒಣಗಿ ಗಟ್ಟಿಯಾಗಿ ಕಾಳಿನ ಒಳಗೆ ತೇವಾಂಶ ಉಳಿಯುತ್ತದೆ. ಮೊಳಕೆ ಸಾಮರ್ಥ್ಯ ಕೂಡ ಕಡಿಮೆಯಾಗುತ್ತದೆ. ಆದ್ದರಿಂದ ನೆರಳಿನಲ್ಲಿ ಒಣಗಿಸುವುದು ಸೂಕ್ತ. ಒಣಗಿದ ಕಾಳನ್ನು ಹಲ್ಲಿನಿಂದ ಕಚ್ಚಿದಾಗ 'ಕಟಂ' ಎಂಬ ಶಬ್ದ ಬರುವಂತಿರಬೇಕು.
- ಕಾಳಿನ ತೇವಾಂಶವನ್ನು ಕಡಿಮೆ ಮಾಡುವುದರಿಂದ ಕೀಟಗಳು ಅಭಿವೃದ್ಧಿ ಯಾಗುವುದನ್ನು ತಡೆಯಬಹುದು.
- ಶೇಖರಣಾ ವಿಧಾನಗಳನ್ನು ಅನುಸರಿಸುವಾಗ ತೇವಾಂಶ ಉಳಿಯುವಂತಿದ್ದರೆ (ಉದಾ: ಕೆಮ್ಮಣ್ಣು ಮಿಶ್ರ ಮಾಡುವಾಗ) ಎಚ್ಚರಿಕೆಯಿಂದ ಕಾಳುಗಳನ್ನು ನೆರಳಿನಲ್ಲಿಯೇ ಒಣಗಿಸಿ, ತೇವ ಆರಿದ ಬಳಿಕ ಶೇಖರಿಸಿ ಇಡಬೇಕು.

ಹೀಗೊಂದು ಸುಲಭ ವಿಧಾನ

ಬಿತ್ತನೆ ಬೀಜಗಳಿಗೆ ಏನೂ ಹಾಕದೇ, ಹುಳು ಬೀಳದಂತೆ ಸಂರಕ್ಷಿಸುವ ಸುಲಭನಾದ ವಿಧಾನವಿದು. ಒಂದು ಬಟ್ಟೆ ಬ್ಯಾಗ್ ಅಥವಾ ಗೋಣಿ ಚೀಲ ತಗೊಂಡು ಬಿತ್ತನೆಗೆ ಇಟ್ಟಿರುವ ಬೀಜಗಳನ್ನು ಚೀಲದ ಅರ್ಧ ಭಾಗ ತುಂಬಿಸಿ. ಅದರ ತುದಿಗೆ ದಾರ ಕಟ್ಟಿ, ಮನೆಯ ಹೊಸ್ತಿಲ ಬಳಿ ಹಾಕಿ. ಓಡಾಡುವಾಗ ಚೀಲವನ್ನು ತುಳಿಯುತ್ತಿರ ಬೇಕು. ಇಷ್ಟು ಮಾಡಿದ್ರೆ ಸಾಕು. ಯಾವ ಹುಳನೂ ಬರುವುದಿಲ್ಲ.



ಇದಕ್ಕೆ ಕಾರಣ ಕುತೂಹಲಕರವಾಗಿದೆ. ಕಾಳು ಕೊರೆಯುವ ಹುಳು ಕಾಳನ್ನು ಒಂದೇ ಕೋನದಿಂದ ಕೊರೆಯುತ್ತಿರುತ್ತದೆ. ಚೀಲದ ಮೇಲೆ ಕಾಲಿಟ್ಟು ಅದಕ್ಕೆ ತೊಂದರೆಯಾದಾಗ ಅದು ಮತ್ತೆ ಆ ಕೋನಕ್ಕೆ ಬರಲು ಕನಿಷ್ಠ ಮೂರು ಗಂಟೆ ಬೇಕು. ಅಷ್ಟರಲ್ಲಿ ಇನ್ನೊಬ್ಬರು ತುಳಿದರೆ ಮುಗಿಯಿತು!

ಕಡಿಮೆ ಪ್ರಮಾಣದ ಕಾಳಿಗೆ ಈ ವಿಧಾನ ಸೂಕ್ತವಾದರೂ, ಧಾನ್ಯಗಳಿಗೆ ಪೂಜ್ಯಸ್ಥಾನ ಇರುವುದರಿಂದ ಕೆಲವು ಮಂದಿ ಕಾಳು ತುಳಿಯಲು ಇಷ್ಟಪಡುವುದಿಲ್ಲ.

ಬೀದರ, ಹಾವೇರಿ, ಶಿವಮೊಗ್ಗ, ಬಳ್ಳಾರಿ ಪ್ರದೇಶದಲ್ಲಿ ತೊಗರಿ ಶೇಖರಣೆಗೆ ಈ ವಿಧಾನ ಅನುಸರಿಸುತ್ತಾರೆ.

ಕಾಳು ಸಂರಕ್ಷಣಾ ವಿಧಾನಗಳು


ಹಳ್ಳಿಗಳ ಪ್ರತಿ ಕುಟುಂಬದಲ್ಲಿನ ಒಬ್ಬೊಬ್ಬ ಅಜ್ಜಿಯಂದಿರೂ ತರಹೇವಾರಿ ರೀತಿಯಲ್ಲಿ ಕಾಳುಗಳನ್ನು ಬಚ್ಚಿಡುತ್ತಿದರು. ಮನೆಯೊಳಗೆ ಅಡುಗೆ ಮನೆ ಅಡ್ಡ, ಮಡಿಕೆ ಸಾಲು, ವಾಡೆ-ಮೂಟೆಗಳಲ್ಲಿ ಕಾಳಿನ ಗಂಟುಗಳು ಬೆಚ್ಚಗೆ ಸುರಕ್ಷಿತವಾಗಿ ಇರುತ್ತಿದವು.

ಕಿರು ಧಾನ್ಯಗಳ ಮಿಶ್ರಣ

ದ್ವಿದಳ ಧಾನ್ಯಗಳಾದ ತೊಗರಿ, ಅಲಸಂದಿ, ಅವರೆ, ಹುರುಳಿ, ಹೆಸರು ಕಾಳುಗಳ ಜತೆ ಕಿರುಧಾನ್ಯಗಳಾದ ರಾಗಿ, ಸಾಮೆ, ನವಣೆಯಂಥ ಯಾವುದಾದರೊಂದನ್ನು ಮಿಶ್ರಣ ಮಾಡಿ ಇಡುವುದು ಈ ಪದ್ಧತಿಯ ವಿಶೇಷ. ಬೀದರ, ಹಾವೇರಿ, ತುಮಕೂರು, ಕೋಲಾರ, ಮೈಸೂರು ಭಾಗದಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ. ೫ ಕೆ.ಜಿ. ದ್ವಿದಳ ಧಾನ್ಯಗಳಿಗೆ ಒಂದು ಕೆ.ಜಿ. ಕಿರುಧಾನ್ಯ ಬೆರೆಸಿ ಮಡಿಕೆ, ವಾಡೆ, ಗುಮ್ಮೆ ಮುಂತಾದ ಕಡೆಗಳಲ್ಲಿ ಶೇಖರಿಸಿ ಇಡುತ್ತಾರೆ.

ಬೂದಿ ಮಿಶ್ರಣ

ತೊಗರಿ, ಅಲಸಂದಿ, ಅವರೆ, ಹುರುಳಿ ಮುಂತಾದ ಕಾಳುಗಳ ಜತೆಗೆ ಬೂದಿ ಮಿಶ್ರ ಮಾಡಿ ಸಂರಕ್ಷಿಸಲಾಗುತ್ತದೆ. ೧೦ ಕೆ.ಜಿ. ಕಾಳುಗಳಿಗೆ ಒಂದು ಕೆ.ಜಿ. ಬೂದಿಯನ್ನು (ಅಂದರೆ ೧೦:೧ ಪ್ರಮಾಣ) ಚೆನ್ನಾಗಿ ಮಿಶ್ರ ಮಾಡಿ ಮಡಿಕೆ, ಗುಮ್ಮೆ ವಾಡೆಗಳಲ್ಲಿ ಇಡುವುದು ಒಂದು ಬಗೆ. ಕಾಳು ಮತ್ತು ಬೂದಿಯನ್ನು ಪದರ-ಪದರುಗಳಾಗಿ ಹಾಕಿ ಶೇಖರಿಸಿ ಇಡುತ್ತಾರೆ. ಹಾಗೆಯೇ ಕಾಳುಗಳಿಗೆ ಸ್ವಲ್ಪ ನೀರು ಚಿಮುಕಿಸಿ ಆ ಕಾಳಿನ ಸುತ್ತ ಬೂದಿಯ ಪದರು ನಿರ್ಮಾಣ ಆಗುವಂತೆ ಚೆನ್ನಾಗಿ ಉಜ್ಜಿ ನೆರಳಿನಲ್ಲಿ ಒಣಗಿಸಿ ಕೂಡ ಇಡುತ್ತಾರೆ.ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಹಳೆಯ ಮೈಸೂರು, ಶಿವಮೊಗ್ಗ, ಬೀದರ್, ಪ್ರದೇಶದಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ.



ರಾಗಿಹೊಟ್ಟು ಮೆಣಸಿನ ಕಾಯಿ ಮಿಶ್ರಣ:

೧೦ ಕೆಜಿ ಕಾಳಿಗೆ ಕೈಯಿಂದ ಪುಡಿ ಮಾಡಿದ ಮೆಣಸಿನ ಕಾಯಿಯನ್ನು ಕಾಲು ಕೆ.ಜಿ. ಹಾಗೂ ಒಂದು ಕೆಜಿಯಷ್ಟು ರಾಗಿ ಹೊಟ್ಟನ್ನು ಚೆನ್ನಾಗಿ ಬೆರೆಸಿ ಇಡುವುದು. ಈ ಪ್ರಮಾಣಕ್ಕೆ ಅನುಗುಣವಾಗಿ ದೊಡ್ಡ ಪ್ರಮಾಣದಲ್ಲೂ ಬೀಜ ಶೇಖರಿಸಿ ಇಡಬಹುದು. 'ಮೆಣಸಿನಕಾಯಿ ಘಾಟು ಐತಲ್ಲ? ಅದ್ಕೇ ಹುಳಾ ಬೀಳಲ್ಲ. ಕಾಳು ಮೊಳ್ಕೆ ಬರಾಕೇನೂ ತೊಂದ್ರೆ ಆಗಲ್ಲ. ಆದ್ರೆ ಇದರಲ್ಲಿ ಭಾಳ ದಿನ ಇಡಾದು ಕಷ್ಟ ಆಗ್ತದೆ' ಎನ್ನುತ್ತಾರೆ ವೆಂಕಟಮ್ಮ. ಬೆಂಗಳೂರು ಗ್ರಾಮಾಂತರ ಕೋಲಾರ, ತುಮಕೂರು, ಶಿವಮೊಗ್ಗ, ಹಾವೇರಿಯ ಕೆಲವು ಕಡೆಗಳಲ್ಲಿ ಈ ವಿಧಾನ ಬಳಕೆಯಲ್ಲಿದೆ.

ಉಪ್ಪಿನ ಚೀಲದಲ್ಲಿ ಶೇಖರಣೆ

ಒಂದು ಕೆ.ಜಿ. ಉಪ್ಪನ್ನು ೧೦ ಲೀಟರ್ ನೀರಿನಲ್ಲಿ ಕರಗಿಸಿ, ೧೦-೧೨ ಚೀಲಗಳನ್ನು ಆ ದ್ರಾವಣದಲ್ಲಿ ಅದ್ದಿ ಒಣಗಿಸಿ ಕಾಳು ತುಂಬಿಡಬಹುದು. ಕೊಪ್ಪಳ ಹಾಗೂ.ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈಗಲೂ ರೈತರು ಅನುಸರಿಸುತ್ತಿರುವ ವಿಧಾನವಿದು.

ಬಣವೆಯಲ್ಲಿ ಹಾಕಿಡುವುದು

ಒಕ್ಕಣೆಯಾದ ನಂತರ ರಾಗಿ ಹಾಗೂ ಭತ್ತದ ಹುಲ್ಲನ್ನು ಒಂದು ಕಡೆ ಒಟ್ಟುತ್ತಾರೆ. ಇದಕ್ಕೆ 'ಮೆದೆ' ಹಾಕುವುದು ಅಥವಾ ಬಣವೆ ಒಟ್ಟುವುದು ಎನ್ನುತ್ತಾರೆ. ಹುಳು ಬೀಳುವ ಸಾಧ್ಯತೆಯ ದ್ವಿದಳ ಧಾನ್ಯಗಳನ್ನು ಚೀಲದಲ್ಲಿ ಕಟ್ಟಿ, ಇಂಥ ಮೆದೆಯೊಳಗೆ ಹಾಕಿಡುತ್ತಾರೆ.



ಅವರ ಮನೆಯಲ್ಲಿರುವ ದನಕರುಗಳಿಗೆ ಅನುಗುಣವಾಗಿ ಬಣವೆ ಹಂತ-ಹಂತವಾಗಿ ವರ್ಷಕ್ಕೆ ಕರಗುತ್ತದೆ. ಹಾಗಾಗಿ ಬಿತ್ತನೆ ಸಮಯಕ್ಕೆ ಸರಿಯಾಗಿ ಸಿಗುವಂತೆ ಅಂದಾಜಿಸಿ ಬಣವೆ ಒಟ್ಟಿ, ಕಾಳುಗಳನ್ನು ಬಚ್ಚಿಡುತಾರೆ. ಅಲಸಂದಿಯಂಥ ಒಣಕಾಯಿಗಳನ್ನು ಕಟ್ಟಿ ಹಾಕಬಹುದು. ಇಲ್ಲಿ ಹುಳು ನಿಯಂತ್ರಣ ಸಂಪೂರ್ಣ ಸಾಧ್ಯವಿದೆ. ಈ ವಿಧಾನವನ್ನು ಉತ್ತರ ಕರ್ನಾಟಕದ ಎಲ್ಲೆಡೆ ಹಾಗೂ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ತುಮಕೂರು, ಕೋಲಾರದ ಕೆಲವೆಡೆ ಅನುಸರಿಸುತ್ತಾರೆ.

ಮೂಡೆ ಹಾಗೂ ಬುತ್ತಿಗಂಟು:

ಈ ವಿಧಾನದಲ್ಲಿ ಅವರೆ, ತೊಗರಿ, ಅಲಸಂದಿ, ಹುರುಳಿ, ಉದ್ದು ಕಾಳುಗಳಿಗೆ ಮೂಡೆಕಟ್ಟಲಾಗುತ್ತದೆ. ಇದರಲ್ಲಿ ಗುಂಡುಮೂಡೆ ಹಾಗೂ ಉದ್ದನೆಯ ಮೂಡೆ ಎಂಬ ಎರಡು ವಿಧಗಳಿವೆ.



ಅವರೆ, ತೊಗರಿ, ಹುರುಳಿ ಕಾಳುಗಳನ್ನು ಹೆಚ್ಚು ಬೆಳೆದು ಉದ್ದು, ಅಲಸಂದಿ ಕಡಿಮೆ ಬೆಳೆಯುತ್ತಾರೆ. ಕಡಿಮೆ ಬೆಳೆದ ಕಾಳುಗಳಿಗೆ ಬೇರೆ ಮೂಡೆ ಕಟ್ಟದೇ ಹೆಚ್ಚು ಬೆಳೆದ ಕಾಳುಗಳ ಮಧ್ಯೆಯೇ ಇವುಗಳನ್ನು ಗಂಟು ಕಟ್ಟಿಟ್ಟು ಮೂಡೆ ಕಟ್ಟುತ್ತಾರೆ. ಇದನ್ನು 'ಬುತ್ತಿಗಂಟು' ಎನ್ನುತ್ತಾರೆ. ಇದರಲ್ಲಿ ಬೇರೆ ಬೇರೆ ಕಾಳುಗಳು ಮಿಶ್ರವಾಗುವುದಿಲ್ಲ. ಮೂಡೆ ಕಟ್ಟುವಾಗ ಮೆಣಸಿನಕಾಯಿ, ರಾಗಿಹೊಟ್ಟು, ಕಹಿಯಾದ ಒಣ

ಎಲೆಗಳನ್ನು ಕಾಳಿನ ಜತೆ ಸೇರಿಸುತ್ತಾರೆ. ಮೂರರಿಂದ ಐದು ವರ್ಷಗಳ ಕಾಲ ಹುಳು ಬೀಳದಂತೆ ಕಾಳುಗಳನ್ನು ಶೇಖರಿಸಿ ಇಡಬಹುದು.



ತುಮಕೂರು, ಬೆಂಗಳೂರು ಗ್ರಾಮಾಂತರದ ಕೆಲವೇ ಕೆಲವು ಗ್ರಾಮಗಳಲ್ಲಿ ಈ ವಿಧಾನ ಕಾಣಬಹುದು.

ಸುಣ್ಣದ ಧೂಳಿನ ಮಿಶ್ರಣ:

ಹತ್ತು ಕೆ.ಜಿ. ಕಾಳಿಗೆ ಬೊಗಸೆಯಷ್ಟು ಸುಣ್ಣದ ಧೂಳು (ಸುಣ್ಣದಲ್ಲಿ ಸಿಗುವ ಪುಡಿ) ಚೆನ್ನಾಗಿ ಬೆರೆಸಿಡುವುದು. ಕಾಳಿನ ಪ್ರಮಾಣಕ್ಕೆ ಅನುಗುಣವಾಗಿ ಧೂಳಿನ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕು. ಈ ವಿಧಾನದಲ್ಲಿ ಎಲ್ಲ ದ್ವಿದಳ ಧಾನ್ಯ ಬಚ್ಚಿಡಬಹುದು.

ಹರಳು(ಔಡಲ) ಪುಡಿ ಮಿಶ್ರಣ:

ಹರಳನ್ನು ಸ್ವಲ್ಪ ಬಿಸಿ ಮಾಡಿ ಒರಳಲ್ಲಿ ಕುಟ್ಟಿ ಪುಡಿ ಮಾಡಿಕೊಂಡು ಕಳಿಗೆ ಚೆನ್ನಾಗಿ ಉಜ್ಜಿ, ಹಚ್ಚಿ ಬಚ್ಚಿಟ್ಟರೆ ಒಂದು ಹುಳವೂ ಬೀಳುವುದಿಲ್ಲ. ೧೦ ಕೆ.ಜಿ. ಕಾಳಿಗೆ ಕಾಲುಕೆಜಿ ಹರಳು ಪುಡಿ ಹಾಕಿ ಉಜ್ಜಿ ಇಟ್ಟರೆ ಶೇಕಡ ೯೦ರಷ್ಟು ಭಾಗ ಕಾಳುಗಳನ್ನು ವರ್ಷದವರೆಗೂ ಹುಳುಗಳಿಂದ ಕಾಪಾಡಬಹುದು. ಈ ವಿಧಾನದಲ್ಲಿ ಇಟ್ಟ ಕಾಳುಗಳು ಕೂಡ ಬೇರೆ ವಿಧಾನಕ್ಕಿಂತ ಬೇಗ ಮೊಳಕೆ ಒಡೆಯುತ್ತವೆ! ಸಾಮಾನ್ಯವಾಗಿ ಎಲ್ಲ ಕಡೆಯ ರೈತರೂ ಹರಳನ್ನು ಬೆಳೆಯುವುದರಿಂದ ಅತ್ಯಲ್ಪ ಖರ್ಚಿನಲ್ಲೇ ಮಾಡುವ ವಿಧಾನ ಇದು. ದೊಡ್ಡ ಪ್ರಮಾಣದಲ್ಲಿ ಕಾಳುಗಳನ್ನು ಈ ರೀತಿ ಶೇಖರಿಸಿ ಇಡಬಹುದು.



ಈ ವಿಧಾನ ಬೀದರ್, ಹಾವೇರಿ, ಶಿವಮೊಗ್ಗ, ತುಮಕೂರು, ಕೋಲಾರ, ಮೈಸೂರು ಜಿಲ್ಲೆಯಲ್ಲಿ ಕಂಡುಬರುತ್ತದೆ.

ಕೆಮ್ಮಣ್ಣು ಮಿಶ್ರಣ:

ಇದೊಂದು ವಿಶಿಷ್ಟ ಪದ್ಧತಿ. ಹುತ್ತದ ಮಣ್ಣು ಅಥವಾ ನುಣ್ಣನೆಯ ಕೆಂಪು ಮಣ್ಣು (ಕೆಮ್ಮಣ್ಣು) ಪ್ರತಿ ಕಾಳಿನ ಸುತ್ತ ಮೆತ್ತಿಕೊಳ್ಳುವಂತೆ ಮಾಡುವ ವಿಧಾನ. ನುಣ್ಣಗೆ ಪುಡಿ ಮಾಡಿದ ಕೆಮ್ಮಣ್ಣಿಗೆ ನೀರು ಚಿಮುಕಿಸಿ ಬೆರೆಸಬೇಕು. ನಂತರ ಕಾಳಿನ ಸುತ್ತ ಪದರಾಗಿ ಮೆತ್ತಿಕೊಳ್ಳುವಂತೆ ಚೆನ್ನಾಗಿ ಉಜ್ಜಬೇಕು. ನೀರಿನ ಅಂಶ ಆರುವವರೆಗೆ ನೆರಳಿನಲ್ಲಿ ಒಣಗಿಸಿ ಮಡಿಕೆ, ವಾಡೆ ಕೊಮ್ಮೆಗಳಲ್ಲಿ ತುಂಬಿ ಬಾಯಿಗೆ ಮುಚ್ಚಳ ಹಾಕಿ ಮೆತ್ತಾಕಬೇಕು. ಮೆತ್ತಾಕಲು ಸಗಣಿ ಅಥವಾ ಜೇಡಿಮಣ್ಣು ಬಳಸಬಹುದು.

೧೦ ಕೆ.ಜಿ. ಕಾಳಿಗೆ ಒಂದು ಕೆ.ಜಿ. ಕೆಮ್ಮಣ್ಣಿನಂತೆ ಎಷ್ಟು ಕಾಳನ್ನಾದರೂ ಬೆರೆಸಿ ಇಡಬಹುದು. ಬೀಜಗಳಿಗೆ ಹುಳು ಬೀಳುವುದಿಲ್ಲ. ಮೊಳಕೆ ಸಾಮರ್ಥ್ಯ ಕೂಡ ಚೆನ್ನಾಗಿರುತ್ತದೆ. ಕೆಮ್ಮಣ್ಣು ಮೆತ್ತಿದ ಕಾಳುಗಳನ್ನು ನೇರವಾಗಿ ಬಿತ್ತನೆ ಮಾಡಬಹುದು; ಸ್ವಚ್ಛ ಮಾಡುವ ಅಗತ್ಯವೂ ಇಲ್ಲ.

ಬೀದರ, ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ಮೈಸೂರು ಇತರ ಕಡೆಗಳಲ್ಲಿ ಈ ಪದ್ಧತಿ ಕಾಣಸಿಗುತ್ತದೆ.

ಹರಳೆಣ್ಣೆ-ಉಪ್ಪು ಮಿಶ್ರಣ:

ಇದು ಕೂಡ ಕೆಮ್ಮಣ್ಣಿನ ರೀತಿ ಹರಳೆಣ್ಣೆಯನ್ನು ಕಾಳಿನ ಸುತ್ತ ತಿಕ್ಕಿ ಹಚ್ಚುವುದು. ೨ ಕೆ.ಜಿ. ಕಾಳಿಗೆ ಒಂದು ಹಿಡಿ ಉಪ್ಪು, ಕೊಂಚ ಹರಳೆಣ್ಣೆಯನ್ನು ಚೆನ್ನಾಗಿ ಉಜ್ಜಿ ಮಿಶ್ರಣ ಮಾಡಿ ಮಡಿಕೆ, ಕೊಮ್ಮೆಗಳಲ್ಲಿ ಹಾಕಿಡುವುದು. ಹರಳುಪುಡಿ ಬಳಸುವ ಪ್ರದೇಶಗಳಲ್ಲಿ ಈ ಪದ್ಧತಿಯೂ ಚಾಲ್ತಿಯಲ್ಲಿದೆ. ಇದನ್ನು 'ಕಾಳಿಗೆ ಕೈಯೆಣ್ಣೆ ಹಚ್ಚುವುದು' ಎಂತಲೂ ಕರೆಯುತ್ತಾರೆ.

ಮರಳು ಮಿಶ್ರಣ:

ಬೆಳಗಿನ ಜಾವದಲ್ಲಿ ನುಣ್ಣನೆಯ ಮರಳನ್ನು ಸಂಗ್ರಹಿಸಿ ಒಂದು ಕೆ.ಜಿ. ಬೀಜಕ್ಕೆ ಒಂದು ಕೆಜಿ ಮರಳನ್ನು ಪದರ-ಪದರವಾಗಿ ಹಾಕಿಡಬಹುದು. ಅಥವಾ ಮಡಿಕೆ ತಳ ಹಾಗೂ ಮೇಲ್ಭಾಗದಲ್ಲಿ ಮರಳು ಹಾಕಿ ಮಧ್ಯೆ ಕಾಳು ತುಂಬಿ ಮುಚ್ಚಳ ಹಾಕಿ ಸೆಗಣಿಯಿಂದ ಮೆತ್ತಬೇಕು. ಪ್ರಮಾಣಕ್ಕೆ ತಕ್ಕಂತೆ ಮಡಿಕೆ ಅಥವಾ ಕೊಮ್ಮೆಯ ಗಾತ್ರವನ್ನು ಹೆಚ್ಚಿಸಿಕೊಳ್ಳಬಹುದು. ಈ ವಿಧಾನದಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.


'ಮರ್ಳಾಗೆ ಬೆರೆಸಿಟ್ಟ ಕಾಳು ತಾಯಿ ಮಡ್ಲಿನಾಗೆ ಮಗ ಇದ್ದಂಗಿರ್ತದೆ. ಅದು ಭೂಮಿಗೆ ಹಾಕ್ದಾಗ ಸಂದಾಗಿ ಬೆಳೆಸಿದ ಮಗ ಹೆಂಗ ಬರ್ತದೋ ಅಂಗ ಬರ್ತದೆ...' ಎಂಬುದು ರೈತರ ಅನುಭವದ ಮಾತು.

ಎಣ್ಣೆ ಅಭ್ಯಂಜನ

ದ್ವಿದಳ ಧಾನ್ಯಗಳಿಗೆ ಮುತ್ತಿಗೆ ಹಾಕುವ ಅಕ್ಕಿ ಮೂತಿ ಹುಳು, ಜೋಳದ ಮೂತಿ ಹುಳು, ತುಕ್ಕುಗೆಂಪು ಹಿಟ್ಟಿನ ದುಂಬಿ, ಕುಟ್ಟೆದುಂಬಿಗಳ ನಿಯಂತ್ರಣಕ್ಕೆ ಈ ವಿಧಾನ ಬಳಸಬಹುದು.

ಬೀಜಗಳಿಗೆ ಜಾಯಿಕಾಯಿಯ ಎಣ್ಣೆ, ನೀಲಗಿರಿ ಎಣ್ಣೆ, ಹತ್ತಿ ಎಣ್ಣೆ, ಖಾದ್ಯತೈಲಗಳಾದ ತೆಂಗಿನ ಎಣ್ಣೆ, ಎಳ್ಳೆಣ್ಣೆ, ಸೂರ್ಯಕಾಂತಿ ಎಣ್ಣೆ ಇವುಗಳಲ್ಲಿ ಯಾವುದಾದರೊಂದು ಎಣ್ಣೆಯ ಅಭ್ಯಂಜನ ಮಾಡಿಸಿದರೆ ಆರು ತಿಂಗಳ ಕಾಲ ಕೀಟಗಳ ಹಾವಳಿ ಇರದು. ಇಲ್ಲಿ ಒಂದು ಕ್ವಿಂಟಲ್ ಧಾನ್ಯಕ್ಕೆ ಹೆಚ್ಚೆಂದರೆ ಅರ್ಧ ಲೀಟರ್ ಎಣ್ಣೆ ಸಾಕು.

ಗೊಂಡೆ ಸೊಪ್ಪು, ಮೆಣಸಿನ ಕಾಯಿ ಮಿಶ್ರಣ:



ಬೊಗಸೆ ಪ್ರಮಾಣದ ಹಿಸುಕಿ ಪುಡಿ ಮಾಡಿದ ಒಣಮೆಣಸಿನ ಕಾಯಿ, ಅಷ್ಟೇ ಪ್ರಮಾಣದ ಒಣಗಿದ ಗೊಂಡೆಸೊಪ್ಪನ್ನು ೨ ಕೆ.ಜಿ. ಕಾಳಿಗೆ ಬೆರೆಸಿ ಶೇಖರಿಸಿ ಇಡುವುದು. ಈ ವಿಧಾನದಲ್ಲಿ ಎರಡು ಅಥವಾ ಮೂರು ತಿಂಗಳ ಕಾಲ ಮಾತ್ರ ಬೀಜಗಳನ್ನು ಶೇಖರಿಸಿ ಇಡಬಹುದು. ಹಳೆಯ ಮೈಸೂರು, ತುಮಕೂರು, ಮಂಡ್ಯ, ಕೋಲಾರ ಹಾಗೂ ಕೊಪ್ಪಳ ಭಾಗದಲ್ಲಿ ಮಾತ್ರ ಈ ವಿಧಾನ ಇದೆ.

ಚೌಳುಮಣ್ಣು ಮಿಶ್ರಣ:

೫೦ ಕೆ.ಜಿ. ಕಾಳುಗಳಿಗೆ ಒಂದು ಕೆ.ಜಿ. ಚೌಳು ಮಣ್ಣು ಮಿಶ್ರ ಮಾಡಿ ಇಡುವುದು. ಚೌಳು ಮಣ್ಣಿನಲ್ಲಿ ಉಪ್ಪಿನ ಅಂಶ ಹೆಚ್ಚಿರುವುದರಿಂದ ಉಪ್ಪಿನ ಮಿಶ್ರಣದಲ್ಲಿ ದೊರಕುವ ಲಾಭಗಳನ್ನೇ ಇದರಲ್ಲಿ ಕಾಣಬಹುದು.

ಚಿತ್ರದುರ್ಗ, ಕೊಪ್ಪಳ ಪ್ರದೇಶಗಳಲ್ಲಿ ಈ ವಿಧಾನ ಚಾಲ್ತಿಯಲ್ಲಿದೆ.

ಉಪ್ಪು-ಮೆಣಸಿನಕಾಯಿ ಮಿಶ್ರಣ:

ಎರಡು ಕೆ.ಜಿ. ಕಾಳಿಗೆ ಹಿಡಿ ಉಪ್ಪು ಹಾಗೂ ಒಂದು ಬೊಗಸೆ ಹಿಸುಕಿದ ಒಣಮೆಣಸಿನ ಕಾಯಿಯ ಪುಡಿಯನ್ನು ಮಿಶ್ರಣ ಮಾಡಿ ಮಡಿಕೆ, ವಡೆ, ಕುಮ್ಮೆ, ಗೊಮ್ಮೆಗಳಲ್ಲಿ ಶೇಖರಿಸಿ ಇಡಬಹುದು. ದೀರ್ಘಾವಧಿಯಲ್ಲಿ ಬಚ್ಚಿಡಲು ಈ ವಿಧಾನ ಸೂಕ್ತ ಅಲ್ಲ

ಹಾವೇರಿ, ಕೊಪ್ಪಳ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ.



ಇಬ್ಬನಿಯಲ್ಲಿ ಎತ್ತಿಡುವುದು:

ಒಕ್ಕಣೆಯಾದ ನಂತರ ಸರಿಯಾಗಿ ಒಣಗಿಸಿದ ಕಾಳುಗಳನ್ನು ಮೂರು ದಿನ ಇಬ್ಬನಿಯಲ್ಲಿ ಬಿಟ್ಟು, ಬೆಳಗಿನ ಜಾವದಲ್ಲಿ ಎತ್ತಿ ಮಡಿಕೆಯಲ್ಲಿ ಹಾಕಿ ಮೆತ್ತಾಕಬೇಕು. ಅಮಾವಾಸ್ಯೆ ಹಿಂದಿನ ದಿನ ಹಾಕಿದರೆ ಫಲಿತಾಂಶ ಚೆನ್ನಾಗಿರುತ್ತದೆ ಎಂಬುದು ಅನುಭವಿ ರೈತರ ಅಭಿಪ್ರಾಯ.

ಈ ವಿಧಾನವು ಕೋಲಾರ, ತುಮಕೂರು, ಕೊಪ್ಪಳ, ಬೀದರ ಜಿಲ್ಲೆಗಳಲ್ಲಿ ಕಾಣಸಿಗುತ್ತದೆ.

ಕಹಿ ಸೊಪ್ಪುಗಳ ಮಿಶ್ರಣ:

ಎರಡು ಕೆ.ಜಿ.ಯಷ್ಟು ಕಾಳಿಗೆ ಬೊಗಸೆಯಷ್ಟು ಕಹಿ, ಒಗರು ಸೊಪ್ಪುಗಳನ್ನು ಮಿಶ್ರ ಮಾಡಿ ಶೇಖರಿಸಿ ಇಡುವ ಪದ್ಧತಿಗಳು ಚಿಕ್ಕಮಗಳೂರು, ತುಮಕೂರು, ಕೋಲಾರದ ಭಾಗಗಳಲ್ಲಿ ಇವೆ. ವಿವಿಧ ಸೊಪ್ಪುಗಳನ್ನು ಬೆರೆಸುವ ವಿಧಾನ ಹೀಗಿವೆ:

ಅ) ವಿಷಮಧಾರೆ ಸೊಪ್ಪು ಮತ್ತು ಬೇವು ಮಿಶ್ರಣ

ಆ) ಬೇವು, ಎಕ್ಕದ ಸೊಪ್ಪು ಮತ್ತು ನೀಲಗಿರಿ ಸೊಪ್ಪು ಮಿಶ್ರಣ

ಇ) ಬೇವು, ಚೆಂಡು ಹೂ ಮಿಶ್ರಣ

ಈ) ಹೊಂಗೆ, ಬೇವು, ಗೊಂಡೆ ಸೊಪ್ಪು ಮಿಶ್ರಣಗಳು.

ಇತರೆ ದೇಸೀಯ ಬೀಜ ಸಂರಕ್ಷಣ ಪದ್ಧತಿಗಳು:

- ಸಜ್ಜೆ, ಜೋಳ, ನವಣೆಯನ್ನು ಕಣಜ ಮತ್ತು ಗುಮ್ಮೆಗಳಲ್ಲಿ ಸಂಗ್ರಹಿಸುತ್ತಾರೆ. ಬೇರಿನ ತೊಪ್ಪಲು ಮತ್ತು ಲಕ್ಕಿ ಎಲೆ ಮಿಶ್ರಣ ಮಾಡಿ ಇಡುತ್ತಾರೆ. ಕಣಜವನ್ನು ಬಿದಿರಿನಿಂದ ಮತ್ತು ಗುಮ್ಮೆಯನ್ನು ಲಕ್ಕ ಕಡ್ಡಿಯಿಂದ ಮಾಡುವುದು ರೂಢಿ. ಗುಮ್ಮಿಯ ಹೊರಭಾಗಕ್ಕೆ ನುಣನೆಯ ಮಣ್ಣಿನ ಪುಡಿಯ ಪೇಸ್ಟ್ ಮತ್ತು ಒಳಭಾಗಕ್ಕೆ ಬೇರಿನ ದಿಂಡು, ಸಗಣಿ ಮತ್ತು ಜೇಡಿಮಣ್ಣಿನ ಪೇಸ್ಟ್ ಬಳಿಯುತ್ತಾರೆ. ಬೀಜ ಸುರಿದ ಮೇಲೆ ಹುಲು ಹಾಕಿ ಸಗಣಿಯಿಂದ ಮತ್ತೆ ಹಾಕುತ್ತಾರೆ. ಕೊರವರು ಈಚಲು ಕಡ್ಡಿಗಳಿಂದ ಮಾಡುತ್ತಿದ್ದರು.

- ಗುಲ್ಬರ್ಗಾ ಮತ್ತು ಬೀದರ್ ಭಾಗದಲ್ಲಿ ಗುರೆಳ್ಳು, ಸಾಸಿವೆ, ಸೂರ್ಯಕಾಂತಿ ಮತ್ತು ಎಳ್ಳು ಬಚ್ಚಿಡಲು ಸೋರೆ ಬುರುಡೆ ಬಳಸುತ್ತಾರೆ. ಕೊಂಬು ಸೋರೆಯ ತೊಟ್ಟಿನ ಬಳಿ ತೂತು ಮಾಡಿ ಒಳಗಿನ ತಿರುಳು ತೆಗೆದು ಟೊಳ್ಳು ಮಾಡುತ್ತಾರೆ. ಸೋರೆ ಬುರುಡೆ ಸಂಪೂರ್ಣ ಒಣಗಿದ ಮೇಲೆ ಎಣ್ಣೆಕಾಳು ಗಳನ್ನು ಸೋರೆ ಬುರುಡೆಯಲ್ಲಿ ತುಂಬಿ ತೂತಿಗೆ ಸಗಣಿ ಮಿಶ್ರಿತ ಮಣ್ಣನ್ನು ಮೆತ್ತುತ್ತಾರೆ.

- ತೆಂಗಿನ ಕಾಯಿಯನ್ನು ಕೊಳೆಸಿ, ಅದರ ತಿರುಳು ತೆಗೆದು ಬುರುಡೆಯ ಒಳಗೆ ಬೀಜಗಳನ್ನು ಬಚ್ಚಿಡುತ್ತಾರೆ. ಬುರುಡೆಯ ಕಣ್ಣಿಗೆ ಜೋಳದ ಕಡ್ಡಿ ಅಥವಾ ಬಟ್ಟೆ ಸಿಕ್ಕಿಸುತ್ತಾರೆ.

- ಕಾಳಿಗೆ ಮೂಟೆ ಕಟ್ಟುವಾಗ ಬೂದಿ, ಬೇವಿನ ಎಲೆ ಬೆರೆಸಿ ಕಟ್ಟುತ್ತಾರೆ. ಮೂಟೆಯಲ್ಲಿ ಕಾಳ ತೆಗೆಯುವಾಗ ಕಡ್ಡಿಯ ಮೂಲಕ ತೆಗೆಯುತ್ತಾರೆ. ಕೈಯಿಂದ ತೆಗೆದರೆ ಹುಳು ಆಗುವ ಸಾಧ್ಯತೆ ಇದೆ. ನಂತರ ಕಾಳು ತೆಗೆದ ಭಾಗ ಮತ್ತೆ ಬಿಗಿಯಾಗುತ್ತದೆ.




ದವಸಧಾನ್ಯ ಬಚ್ಚಿಡುವ ಪರಿಕರಗಳು

ರೈತರು ತಲೆಮಾರುಗಳಿಂದ ಧಾನ್ಯ ಸಂಗ್ರಹಣೆಗೆ ಹತ್ತೆಂಟು ದೇಸೀಯ ಸಲಕರಣೆಗಳನ್ನು ಬಳಸುತ್ತಾ ಬಂದಿದ್ದಾರೆ. ವಾಡೆ, ಅಳಗೆ, ತೊಂಬೆ, ಮೂಡೆ... ಹೀಗೆ ಆಯಾ ಪ್ರದೇಶಕ್ಕೆ ಅನುಗುಣವಾಗಿ ಧಾನ್ಯ ಸಂಗ್ರಹಣಾ ಸಲಕರಣೆಗಳು ಬದಲಾಗುತ್ತಾ ಹೋಗುತ್ತವೆ.

ಮಡಿಕೆ:

ನಮ್ಮಲ್ಲಿರುವ ಬೀಜ ಪ್ರಮಾಣಕ್ಕೆ ಅನುಗುಣವಾಗಿ ಬೇರೆ ಬೇರೆ ಗಾತ್ರದ ಮಡಿಕೆಗಳನ್ನು ಬಳಸಬಹುದು. ಜೇಡಿ ಮಣ್ಣಿನಿಂದ ತಯಾರಿಸಿ ಕಾಯಿಸಿದ ಗಟ್ಟಿ ಮಡಿಕೆಗಳು ಇದಕ್ಕೆ ಸೂಕ್ತ. ಕುಡಿಕೆ, ಚಟ್ಟಿ, ಮಡಿಕೆ, ಗುಡಾಣ ಹೀಗೆ ಅತ್ಯಲ್ಪ ಪ್ರಮಾಣದಿಂದ ಹಿಡಿದು ೨೫-೩೦ ಕೆ.ಜಿ. ಧಾನ್ಯ ಹಿಡಿಯುವಷ್ಟು ಗಾತ್ರದವು ಸಿಗುತ್ತವೆ.




ಬಿತ್ತನೆ ಬೀಜಗಳಿಗೆ ಅತ್ಯವಶ್ಯವಿರುವ ಕನಿಷ್ಠ ತಂಪು, ಕನಿಷ್ಠ ಗಾಳಿ ಸಿಗಲು ಇವನ್ನು ಬಳಸಬಹುದು.

ಕೊಮ್ಮೆ:


ಮೂರು ಅಡಿಯಿಂದ ಐದಾರು ಅಡಿಗಳವರೆಗೆ ಹೂಜಿಯಂತೆ ಆಕಾರವುಳ್ಳ, ಮಣ್ಣಿನಿಂದ ಮಾಡಿದ ರಚನೆಯೇ ಕೊಮ್ಮೆ. ಇವು ಒಂದು ಕ್ವಿಂಟಲ್‌ನಿಂದ ಎರಡು, ಎರಡೂವರೆ, ಆರು ಕ್ವಿಂಟಲ್‌ವರೆಗೆ ಧಾನ್ಯ ಹಿಡಿಯುತ್ತವೆ.

ವಾಡೆ:

ಎರಡರಿಂದ ಐದಾರು ಕ್ವಿಂಟಲ್‌ವರೆಗೆ ಧಾನ್ಯ ತುಂಬಬಹುದಾದ, ನಾಲ್ಕರಿಂದ ಏಳೆಂಟು ಅಡಿ ಎತ್ತರವಿರುವ ಜೇಡಿಮಣ್ಣು, ಜಿಗುಟು ಮಣ್ಣಿನಿಂದ ಮಾಡಿದ ಆಕೃತಿ. ಚಿಕ್ಕವಕ್ಕೆ ಎರಡು ಬಳೆಗಳಿದ್ದರೆ, ದೊಡ್ಡವಕ್ಕೆ ಮೂರು ಬಳೆಗಳು ಇರುತ್ತವೆ. ತಳದ ಧಾನ್ಯ ತೆಗೆಯುವಾಗ ಮೇಲಿನ ಎರಡು ಬಳೆ ಕೆಳಗೆ ಮಾಡಿ ತೆಗೆಯಬಹುದು. ತುಂಬುವಾಗ ಹಂತಹಂತವಾಗಿ ಬಳೆಗಳನ್ನು ಜೋಡಿಸುತ್ತ ಬರಬೇಕು.



ಗಳಿಗಿ



ಇದು ಗಡಿಗೆ ಆಕಾರದಲ್ಲಿ ಹೆಣೆಯುವ ಬುಟ್ಟಿ. ಈಚಲು ಗರಿಗಳನ್ನು ತೆಗೆದ ಬಳಿಕ ಉಳಿಯುವ ದಿಂಡಿಗೆ 'ಬರಲು' (ಬರ್ಲು) ಎನ್ನುತ್ತಾರೆ. ಇಂಥ ಅನೇಕ ಬರಲುಗಳಿಂದ ಬಯಸಿದ ಆಕಾರದಲ್ಲಿ ಗಳಿಗಿ ಹೆಣೆಯಬಹುದು. ಆದರೆ ಒಂದು ವಿಶೇಷ ಸಂಗತಿ ಏನೆಂದರೆ, ಗಳಿಗಿ ಹೆಣೆಯುವವರು ಕೊರವರು. ಬೇರೆ ಯಾರಿಗೂ ಅಷ್ಟು ನಿಖರ ಹಾಗೂ ಬಿಗಿಯಾಗಿ ಗಳಿಗಿ ಹೆಣೆಯಲು ಬಾರದು; ಅವರ ಕೌಶಲದ ವೈಶಿಷ್ಟವೇ ಅಂಥಾದ್ದು!

ಗಳಿಗಿಯ ಅಳತೆಯೂ ವಿಭಿನ್ನ. ಐದು ಸೇರಿನಿಂದ ನೂರು ಸೇರು ಪ್ರಮಾಣದ ಧಾನ್ಯ ಸಂಗ್ರಹಣಾ ಸಾಮರ್ಥ್ಯದ ಗಳಿಗಿ ಹೆಣೆಯಲಾಗುತ್ತದೆ. ಒಂದು ಭಾಗದಷ್ಟು ಕೆಮ್ಮಣ್ಣಿಗೆ ಎರಡು ಭಾಗ ಸೆಗಣಿ ಸೇರಿಸಿ ನೀರಿನೊಂದಿಗೆ ಬೆರೆಸಿ ಗಳಿಗಿಯ ಹೊರಭಾಗದ ಸುತ್ತ ಮೆತ್ತುತ್ತಾರೆ. ಬಿಸಿಲಿನಲ್ಲಿ ಒಂದು ದಿನ ಒಣಗಿಸಿದರೆ ಬೀಜ ಸಂಗ್ರಹಣೆಗೆ ಗಳಿಗೆ ರೆಡಿ!

ಹುರುಳಿ, ಭತ್ತ, ಮಡಿಕೆ, ತೊಗರಿ, ಹೆಸರು, ಅವರೆ, ಅಲಸಂದಿ ಇತರ ಧಾನ್ಯಗಳ ಬೀಜಗಳನ್ನು ಬೆರೆಸಿ ಮಧ್ಯಾಹ್ನ ೧೨ ಗಂಟೆಯಿಂದ ಮೂರು ಗಂಟೆಯತನಕ ಬಿಸಿಲಿನಲ್ಲಿ ಒಣಗಿಸಿ ಗಳಿಗೆಯಲ್ಲಿ ತುಂಬುತ್ತಾರೆ. ಇದಕ್ಕೆ ಮೊದಲು ಔಡಲ, ಲೆಕ್ಕಿ ತೊಪ್ಪಲನ್ನು ತಳದಲ್ಲಿ ಎರಡು ಇಂಚುಗಳಷ್ಟು ದಪ್ಪಗೆ ಹರಡಿರುತ್ತಾರೆ. ಬೀಜ ಹಾಕಿದ ಬಳಿಕ ಮತ್ತೆ ಈ ಸೊಪ್ಪುಗಳನ್ನು ಹಾಕಿ ಗಳಿಗೆ ಬಾಯಿ ಮುಚ್ಚಿ ಕೆಮ್ಮಣ್ಣಿನಿಂದ ಮೆತ್ತಿಬಿಡುತ್ತಾರೆ. 'ಈ ಥರಾ ಇಟ್ರೆ ಎಂಟು ತಿಂಗಳವರೆಗೆ ಬೀಜಕ್ಕೆ ಹುಳು ಬೀಳೋಲ್ಲ' ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ ಕೊಪ್ಪಳ ಸಮೀಪದ ಕಾಮನೂರಿನ ಕೃಷಿಕ ಬಸವರಾಜ ವಂಕಲಕುಂಟಿ.



೫. ಬಳತ

ಕಡಲೆ, ನವಣೆ, ಭತ್ತದಂಥ ಅಪಾರ ಪ್ರಮಾಣದಲ್ಲಿ ಸಂರಕ್ಷಿಸಿ ಇಡುವ ಬೀಜಗಳಿಗೆ 'ಬಳತ'ವನ್ನು ಬಳಸುತ್ತಾರೆ. ಮೇದಾರ ಸಮುದಾಯದವರು ಬಿದಿರಿನಿಂದ ತಯಾರಿಸುವ 'ಬಳತ'ದಲ್ಲಿ ಐದರಿಂದ ಹತ್ತು ಚೀಲದವರೆಗೆ ಧಾನ್ಯ ಸಂಗ್ರಹಿಸಿ ಇಡಬಹುದು. ಕೀಟ ಮಾತ್ರವಲ್ಲ, ಇಲಿ, ಹೆಗ್ಗಣದ ಕಾಟದಿಂದಲೂ ಇವು ಬೀಜಗಳನ್ನು ಸಂರಕ್ಷಿಸುತ್ತವೆ.

೬.ಮಣ್ಣಿನ ವಾಡೆ

ನಾವೆಲ್ಲ ಸಾಮಾನ್ಯವಾಗಿ ನೋಡುವ ವಾಡೆ, ಕುಂಬಾರರ ಕೈಯಲ್ಲಿ ಸಿದ್ಧವಾಗಿ, ಆವಿಯಲ್ಲಿ ಬೆಂದು ಬರುವಂಥದ್ದು. ಆದರೆ ಮಣ್ಣಿನ ವಾಡೆಗೆ ಇಂಥ ಯಾವ ಸಂಸ್ಕಾರವೂ ಇಲ್ಲ. ಹೊಲದ ಮಣ್ಣಿಲ್ಲಿ ರೂಪುಗೊಂಡು, ಒಣಗಿ ನೇರ ಮನೆ ಸೇರುತ್ತದೆ. ಮಣ್ಣು ವಡ್ಡರು ಇದರ ರೂವಾರಿಗಳು.



ಅಪರೂಪಕ್ಕೆ ಅಲ್ಲಲ್ಲಿ ಕಾಣಸಿಗುವ ಮಣ್ಣು ವಡ್ಡರ ಕುಟುಂಬಗಳು ರಾಗಿ ಕೊಯ್ಲಿನ ನಂತರ ಹಳ್ಳಿಗಳ ಮೇಲೆ ಸಂಚಾರ ಹೋಗುತ್ತವೆ. ವಾಡೆ ಬೇಕೆನ್ನುವ ರೈತರ ಹೊಲದಲ್ಲೇ ಬಿಡಾರ ಹೂಡಿ, ಅಲ್ಲಿಯೇ ವಾಡೆ ನಿರ್ಮಿಸಿ ಮುಂದಿನ ಹಳ್ಳಿಗೆ ಪ್ರಯಾಣ ಬೆಳೆಸುತ್ತಾರೆ.

ಮಣ್ಣಿನ ವಾಡೆ ಮೇಲುನೋಟಕ್ಕೆ ಸರಳವಾಗಿ ಕಂಡರೂ ಇದನ್ನು ಮಾಡಲು ತಾಳ್ಮೆ, ಕೌಶಲ್ಯ ಬೇಕು. ವಾಡೆಗೆ ಸೂಕ್ತವಾಗುವ ಕೆಂಪುಮಣ್ಣು ಹುಡುಕಿ, ಕತ್ತರಿಸಿದ ಹುಲ್ಲು ಸೇರಿಸಿ ಏಳು ವರಸೆ ಚೆನ್ನಾಗಿ ತುಳಿದು ಮೃದು ಮಾಡಬೇಕು. ನಂತರ ಬರಿಯ ಕೈಯಲ್ಲೇ ವಾಡೆಯ ಬಳೆಗಳನ್ನು ಮಾಡಬೇಕು. ಬಿದಿರಿನ ಕಡ್ಡಿಯಿಂದ ತಟ್ಟುತ್ತಾ ಹೋದಂತೆಲ್ಲ ತಡಕುತ್ತಾ ಮಣ್ಣಿನ ವಾಡೆ ಸಿದ್ಧವಾಗುತ್ತದೆ. ಸಿದ್ಧವಾದ ವಾಡೆಯನ್ನು ಸಾಗಿಸಲು ಅನುಕೂಲವಾಗಲೆಂದು ಅಲ್ಲಲ್ಲಿ ಕೊಯ್ದು ಬಳೆಗಳನ್ನಾಗಿ ಮಾಡುತ್ತಾರೆ. ೯ ರಿಂದ ೧೦ ದಿನ ಅಲ್ಲೇ ಒಣಗಲು ಬಿಡುತ್ತಾರೆ. ನಂತರ ಮನೆಗೆ ಸಾಗಿಸಿ, ಸಗಣಿಯಲ್ಲಿ ಸಾರಿಸಿ, ಸುಣ್ಣ ಬಳಿದು ಒಂದರ ಮೇಲೊಂದು ಬಳೆ ಸೇರಿಸಿಡುತ್ತಾರೆ. ಈಗ ವಾಡೆ ಸಿದ್ಧ. ರಾಗಿ, ಭತ್ತ, ಕಡಲೆಕಾಯಿ, ಕಾಳುಗಳು ಮೊದಲಾದ ಧಾನ್ಯಗಳನ್ನು ಇದರಲ್ಲಿ ಸಂಗ್ರಹಿಸಿಡಬಹುದು.

ಸ್ಥಳಿಯ ಸಂಪನ್ಮೂಲಗಳಿಂದ ಸಿದ್ಧವಾಗುವ ಮಣ್ಣಿನ ವಾಡೆ ಏನಿಲ್ಲವೆಂದರೂ ૩೦ ವರ್ಷ ಬಾಳಿಕೆ ಬರುತ್ತದೆ. ಇಲಿಗಳ ಕಾಟ, ಬೆಂಕಿಯ ಭಯ ಇಲ್ಲ. ಗೋಣಿ ಚೀಲದ ಖರ್ಚು ಉಳಿಯುತ್ತದೆ. ಮಣ್ಣಿನ ವಾಡೆಯಲ್ಲಿ ರಾಗಿಯನ್ನು ಸಂಗ್ರಹಿಸಿಟ್ಟರೆ ರಾಗಿಯ ಬಣ್ಣ ಕೆಡುವುದಿಲ್ಲ. ಆಯಾ ರೈತರ ಸಾಮರ್ಥ್ಯಕ್ಕನುಗುಣವಾಗಿ ವಾಡೆಯ ಗಾತ್ರ ಇರುತ್ತದೆ.

೨ ಮೂಟೆಯ ಸಣ್ಣ ವಾಡೆಯಿಂದ ಹಿಡಿದು, ೨೦ ಮೂಟೆ ಧಾನ್ಯ ಸಂಗ್ರಹಿಸಬಹುದಾದ ಬೃಹತ್ ಗಾತ್ರದ ಮಣ್ಣಿನ ವಾಡೆಗಳಿರುತ್ತವೆ.

ಮಾಲೂರು ಬಳಿಯ ದಾಸೇನಹಳ್ಳಿಯ ಮಣ್ಣು ವಡ್ಡರದ್ದು ಮಣ್ಣಿನ ವಾಡೆ ಮಾಡುವುದರಲ್ಲಿ ಎತ್ತಿದ ಕೈ. ಇಂದಿಗೂ ಅಲ್ಲಿನ ಇಪ್ಪತ್ತು ಕುಟುಂಬಗಳು ಮಣ್ಣಿನ ವಾಡೆ ಮಾಡುತ್ತಲೇ ತಮ್ಮ ಬದುಕು ಸಾಗಿಸುತ್ತಿದ್ದಾರೆ. ಸುಗ್ಗಿಯ ಕಾಲಕ್ಕೆ ಊರು ಬಿಡುವ ಇವರು ಮೈಸೂರು, ಬೆಂಗಳೂರು, ಕೋಲಾರ ಜಿಲ್ಲೆಗಳನ್ನು ಸುತ್ತಿಬರುತ್ತಾರೆ. ಮಣ್ಣಿನ ವಾಡೆ ಸಾಮಾನ್ಯ ರೈತರ ಕೈಗೆಟುಕುತ್ತದೆ ಎಂಬುದು ಮಹತ್ವದ ಸಂಗತಿ.


ನಿಲುವು: ಇಳಿಬಿಟ್ಟ ಹಗ್ಗದಲ್ಲಿ ಮಡಿಕೆ ಇಡುವುದು. ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಎಲೆಯ ಸಮೇತ ಕಟ್ಟಿ ನೇತು ಬಿಡುತ್ತಾರೆ.

ಧಾನ್ಯ ಸಂಗ್ರಹಣಾ ವಿಧಾನಗಳು

ಕಾಣೆಯಾಗುತ್ತಿರುವ 'ತಿರಿ'

'ತಿರಿ' ಭತ್ತದ ಬೀಜ ಸಂಗ್ರಹಣಾ ವಿಧಾನ. ಕೆಲವು ವರ್ಷಗಳ ಹಿಂದೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಮನೆಗೆ ಬೇಟಿ ನೀಡಿದರೆ ಮನೆ ಮುಂದೆ ಕಟ್ಟಿದ 'ತಿರಿ' ಸ್ವಾಗತಿಸುತ್ತಿತ್ತು. ೪೦೦ ಚೀಲ ಭತ್ತವನ್ನು ತಿರಿಮಾಡುತ್ತಿದ್ದರು!. ಆದರೆ ಇಂದು ಅದು ಮಾಯವಾಗುತ್ತಿದೆ.

ಕಾರಣ ಭತ್ತದ ಗದ್ದೆಗಳಲ್ಲಿ ಅಡಿಕೆ ತೋಟ ಬೆಳೆಯುತ್ತಿದೆ. ಮನೆಗೆ ಬೇಕಾದ ಭತ್ತ ಮಾತ್ರ ಇಟ್ಟುಕೊಂಡು, ಉಳಿದ ಭತ್ತವನ್ನು ಕಟಾವು ಸಂದರ್ಭದಲ್ಲೇ ಅಂಗಡಿಗೆ ಮಾರುತ್ತಾರೆ. ಈಗ ಕರಾವಳಿ ಕರ್ನಾಟಕದ ಉಡುಪಿ, ಕುಂದಾಪುರ ತಾಲ್ಲೂಕುಗಳ ಕೆಲವು ಮನೆಗಳಲ್ಲಿ ಮಾತ್ರ ತಿರಿ ಕಾಣಬಹುದು.



ಹಗೇವಿನಲ್ಲಿ ಬಚ್ಚಿಡುವುದು

ಧಾನ್ಯಗಳನ್ನು ಭೂಮಿಯೊಳಗೆ ಬಚ್ಚಿಡುವ ವಿಶಿಷ್ಟ ವಿಧಾನವಿದು. ಇದರಲ್ಲಿ ಶೇಖರಿಸುವ ಧಾನ್ಯ ಬೀಜಕ್ಕೆ ಅಲ್ಲ; ಮನೆ ಬಳಕೆಗೆ ಮಾತ್ರ. ಹಿಂದೆ ಅವಿಭಕ್ತ ಕುಟುಂಬಗಳು ತಾವು

ಬೆಳೆಯುತ್ತಿದ್ದರು. ದೊಡ್ಡ ಪ್ರಮಾಣದ ಧಾನ್ಯಗಳನ್ನು ತುಂಬಲು ಹಗೇವು ಬಳಸುತ್ತಿದ್ದವು. ೫೦ರಿಂದ ೧೦೦ ಕ್ವಿಂಟಲ್ ಪ್ರಮಾಣದಷ್ಟು ಧಾನ್ಯ ತುಂಬಬಹುದಾದ ಹಗೇವುಗಳನ್ನು ಜೇಡಿಮಣ್ಣು, ಜೋಳದ ದಂಟು ಬಳಸಿ ಒಳಗೋಡೆಯಲ್ಲಿ ನೀರು ಜಿನುಗದಂತೆ ಮಾಡಿರುತ್ತಾರೆ. ಇದರೊಳಗೆ ಧಾನ್ಯಗಳನ್ನು ೨-೩ ವರ್ಷದವರೆಗೂ ಸಂರಕ್ಷಿಸಿ ಇಡಬಹುದು.


ಹಗೇವಿನ ಬಾಯಿ ಭೂಮಿ ಮಟ್ಟದಲ್ಲಿ ಇದ್ದು ಧಾನ್ಯ ತೆಗೆಯಲು, ತುಂಬಲು ಅನುಕೂಲಕರವಾಗಿರುತ್ತದೆ. ಹಗೇವಿನ ನಿರ್ಮಾಣ ಹೀಗೆ:

ಮೊದಲು ಮೂರು ಘೂಟು ಆಳ, ಅಗಲದ ಕುಣಿ ತೊಡಲಾಗುತ್ತದೆ. ಬಾಯಿಗೆ ಹಾಸುಗಲ್ಲು ಜೋಡಿಸಿದರೆ ಹಗೇವು ಸಿದ್ಧ. ಹದಿನೈದು ಅಡಿ ಆಳ ಇರುತ್ತದೆ.ತಳಕ್ಕೆ ಅರ್ಧಅಡಿ ದಪ್ಪ ಸುಂಕ ಹಾಕುತ್ತಾರೆ. ಮೇಲೆ ಒಂದು ಪದರ ಜೋಳದ ತರಗು, ಒಣಗಿದ ಜೋಳದ ದಂಟುಗಳನ್ನು ಉದ್ದುದ್ದ ಸೇರಿಸಿ ೩೦-೪೦ ಅಡಿ ಉದ್ದದವರೆಗೆ ಕಟ್ಟಿದ ಸಿವುಡುಗಳಿಗೆ 'ಅರುಷಣಿಗಿ' ಎನ್ನುತ್ತಾರೆ. ಈ ಅರುಷಣಿಗಿಯನ್ನು ತಳದಿಂದ ಹಿಡಿದು, ಒಡಲಿನ ಒಳ ಗೋಡೆಗೆ ಹೊಂದಿಸುತ್ತಾ ಬರುತ್ತಾರೆ. ಒಕ್ಕಣೆ ಮಾಡಿದ ಧಾನ್ಯವನ್ನು ಹಗೇವಿಗೆ ತುಂಬಿ, ಮೇಲೆ ಗೋಣಿ ಚೀಲ ಹಾಕಿ ಬಾಯಿಗೆ ಕಲ್ಲು ಮುಚ್ಚಿ ಮಣ್ಣು ಮುಚ್ಚುತ್ತಾರೆ. ೩ ತಿಂಗಳಿಗೆ, ಆರು ತಿಂಗಳಿಗೆ ಹಗೇವು ತೆಗೆದು ಬೇಕಾದಷ್ಟು ಧಾನ್ಯ ತೆಗೆದುಕೊಂಡು ಮತ್ತೆ ಮುಚ್ಚಿಬಿಡುತ್ತಾರೆ. ಇಳಿಯುವಾಗ ದೀಪ ಇಳಿಬಿಟ್ಟು, ದೀಪ ಉರಿಯುತ್ತಾ, ಗಾಳಿ ಇದೆಯಾ ಎಂದು ಧೃಢೀಕರಿಸಿಕೊಂಡು ಇಳಿಯುತ್ತಿವೆ. ಹಗೇವಿನ ಒಳಗೆ ಇಳಿದು ಧಾನ್ಯ ಹೊರ ತೆಗೆದು ಬಂದ ವ್ಯಕ್ತಿಗೆ ಹಸಿ ಬಿಳಿ ಉಳ್ಳಗೆಡ್ಡೆ, ಬೆಲ್ಲ ತಿನ್ನಿಸುವ ಪರಿಪಾಡ ಇದೆ. ಹೀಗೆ ಮಾಡುವುದರಿಂದ ಉಸಿರಾಟದ ತೊಂದರೆ ಇರದು.

ಕಾಲ ಕಳೆದಂತೆ ಅವಿಭಕ್ತ ಕುಟುಂಬಗಳು ಒಡೆದು ಹೊಲಗದ್ದೆಗಳು ಹಂಚಿಹೋಗಿ ಬೆಳೆಯುವ ಧಾನ್ಯ ಪ್ರಮಾಣ ಕಡಿಮೆಯಾದಾಗ ಚೀಲಗಳಲ್ಲಿ ಅಥವಾ ವಾಡೆ, ಕಣಜಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸುವ ಪದ್ಧತಿ ಪ್ರಾರಂಭವಾಯಿತು. ಇದರಿಂದ ಈ ಅಪರೂಪದ ಪದ್ಧತಿ ಮರೆತು ಹೋದಂತಾಗಿದೆ.

ಮೂಡೆ: ಕಾಳು ಬಚ್ಚಿಡುವ ಖರ್ಚಿಲ್ಲದ ವಿಧಾನ

ಕರಾವಳಿ, ಮಲೆನಾಡುಗಳಲ್ಲಿ ಬತ್ತದ ಹುಲ್ಲು, ಅಡಿಕೆ ಹಾಳೆ, ಸೋಗೆಗಳಿಂದ ಅಚ್ಚುಕಟ್ಟಾಗಿ ಮೂಡೆ ಕಟ್ಟುತ್ತಾರೆ. ದಕ್ಷಿಣದ ಬಯಲು ಸೀಮೆಗಳಲ್ಲಿ ರಾಗಿ, ಅಲಸಂದೆ ಬೆಳೆಯುವವರಿಗೆ ಬತ್ತದ ಹುಲ್ಲೂ ಇಲ್ಲ. ಅಡಿಕೆ ಹಾಳೆಯಂತೂ ದೂರದ ಕನಸು. ಆದರೂ ಅವರು ಅಲ್ಲಲ್ಲಿ ಸಿಗುವ ಹುಲ್ಲನ್ನೇ ಬಳಸಿ 'ಮೂಡೆ ಕಟ್ಟುವ ವಿಧಾನ' ಅತ್ಯಂತ ಪರಿಣಾಮಕಾರಿ.




ಭತ್ತದ ಹುಲ್ಲಿನಂತೆ ಕಾಣುವ ದರ್ಬೆ ಅಥವಾ ಆರಕದ ಹುಲ್ಲನ್ನು ಚೆನ್ನಾಗಿ ನೆನೆಸಿಟ್ಟುಕೊಂಡು ನಾಲ್ಕು ಅಡಿ ಉದ್ದದ ಮೂರು ಕಟ್ಟು (ದಾರ) ಗಳನ್ನು ಒಂದು ಅಡಿ ಅಂತರದಲ್ಲಿ ಒಂದರ ಪಕ್ಕ ಒಂದು ಹಾಸಿ ಅದರ ಮೇಲೆ ಒಂದು ಇಂಚು ದಪ್ಪ ನೆನೆಸಿದ ಹುಲ್ಲನ್ನು ಹರಡಬೇಕು. ಅದರ ಮೇಲೆ ಬಿದಿರಿನ ಸುಂಟ (ಬಿದಿರಿನಲ್ಲಿ ಹೆಣೆದ, ಒಂದು ಅಡಿ ವ್ಯಾಸದ ಮತ್ತು ಎರಡೂವರೆ ಅಡಿ ಉದ್ದದ ಎರಡೂ ಕಡೆ ಬಾಯಿ ಇರುವ ಕೊಳವೆ)ಯನ್ನು ಮಲಗಿಸಿ ಹುಲ್ಲಿನ ಸಮೇತ ಹಾಸಿಗೆಯ ಹಾಗೆ ಸುತ್ತಿ ಸ್ವಲ್ಪ ಸಡಿಲವಾಗಿ ಕಟ್ಟಬೇಕು.

ಒಂದು ಬೋರಲು ಮಂಕರಿಯ ಮೇಲೆ ಹುಲ್ಲನ್ನು ಒಳ ಭಾಗಕ್ಕೆ ಮಡಿಚಿ ಅದರಲ್ಲಿ ನೆನೆಸಿ ಹಂಚಿ ಹುಲ್ಲನ್ನು ಸಮನಾಗಿ ಹರಡಬೇಕು. ಹರಡಿದ ನಂತರ ಮಂಕರಿಯನ್ನು ಉಲ್ಟಾ ಮಾಡಿ ಅದರ ಒಳಕ್ಕೆ ಸ್ವಲ್ಪ ರಾಗಿ ಹೊಟ್ಟನ್ನು ಸುರಿದು ನಂತರ ನಿಧಾನವಾಗಿ ಕಾಳು ಸುರಿಯುತ್ತಾ, ಸುರಿದ ಕಾಳನ್ನು ಒನಕೆಯಿಂದ ಕುಟ್ಟಿ ಬಿಗಿ ಮಾಡುತ್ತಾ ಬರಬೇಕು. ಆ ಕಾಳಿಗೆ ಮೆಣಸಿನಕಾಯಿ ಮತ್ತು ಉಪ್ಪು ನೀರನ್ನು ಬೆರೆಸಿದರೆ ಮತ್ತಷ್ಟು ಒಳ್ಳೆಯದು. ಮೂಡೆ ತುಂಬುತ್ತಾ ಬಂದಂತೆಲ್ಲಾ ಒಳಗಿರುವ ಬಿದಿರಿನ ಸುಂಟವನ್ನು ಸ್ವಲ್ಪ ಸ್ವಲ್ಪವೇ ಈಚೆಗೆ ಎಳೆಯುತ್ತಾ ಬರಬೇಕು. ಮುಕ್ಕಾಲು ಭಾಗ ತುಂಬಿ ಮತ್ತೆ ರಾಗಿ ಹೊಟ್ಟು ಹಾಕಿ ಹುಲ್ಲು ಮತ್ತು ಜೊಂಡನ್ನು ಸೇರಿಸಿ ಬಿಗಿಯಾಗಿ ಬಾಯಿಗೆ ಹೆಣೆಯಬೇಕು.

ನಂತರ ಅದನ್ನು ಮಲಗಿಸಿ ಕಟ್ಟುಗಳನ್ನು ಕೊಡಲಿಯ ಹಿಡಿ ಅಥವಾ ಮರದ ತುಂಡಿನಿಂದ ಹೊಡೆಯುತ್ತಾ ಚೆನ್ನಾಗಿ ಬಿಗಿ ಮಾಡಬೇಕು. ಕಣಿ, ಕಣಿ ಎನ್ನುವವರೆಗೂ ಬಿಗಿ ಮಾಡಬೇಕು. ಮೂಡೆಗೆ ಒಂದೇ ಜಾತಿಯ ಕಾಳನ್ನಾದರೂ ಹಾಕಬಹುದು ಅಥವಾ ಪದರ-ಪದರವಾಗಿ ಎರಡು ಮೂರು ಜಾತಿ ಕಾಳನ್ನಾದರೂ ಹಾಕಬಹುದು.

೨೦ ರಿಂದ ೪೦ ಸೇರಿನವರೆಗೂ ಮೂಡೆ ಕಟ್ಟುತ್ತಾರೆ. ಈ ವಿಧಾನದಲ್ಲಿ ಎರಡು ವರ್ಷಗಳವರೆಗೂ ಕಾಳನ್ನು ಸುರಕ್ಷಿತವಾಗಿಡಬಹುದು. ಬಹುತೇಕ ರೈತರು ಅವರೆ ಕಾಳನ್ನು ಬಚ್ಚಿಡಲು ಈ ವಿಧಾನ ಬಳಸುತ್ತಾರೆ.





೭. ಬೀಜ ಸಂಸ್ಕೃತಿ

ನೇಗಿಲ ಪೂಜೆಯಲ್ಲಿ ಮೊಳಕೆ ಪರೀಕ್ಷೆ

ಮೊಳಕೆ ಪರೀಕ್ಷೆಯನ್ನು ಕರ್ನಾಟಕದ ಕೆಲವು ಭಾಗಗಳಲ್ಲಿ ನೇಗಿಲು ಪೂಜೆಯನ್ನಾಗಿಯೂ ಆಚರಿಸುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕೆಲವು ಕಾಡು ಹಳ್ಳಿಗಳಲ್ಲಿ ಯುಗಾದಿಯ ದಿನ ಮಾಡುವ ನೇಗಿಲು ಪೂಜೆ ಇವತ್ತಿಗೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ಯುಗಾದಿ ಹಬ್ಬದ ದಿನ ಎರಡು ಮರದ ಹೊಸ ನೇಗಿಲುಗಳನ್ನು ಕೆತ್ತಿ, ದೇವಮೂಲೆಯಲ್ಲಿ ನಿಲ್ಲಿಸಿ, ಅಡಕೆ ಪಟ್ಟೆಯ ದೊನ್ನೆ ಮಾಡಿ ನೇಗಿಲುಗಳಿಗೆ ಕಟ್ಟುತ್ತಾರೆ. ಸಮಪ್ರಮಾಣದಲ್ಲಿ ಗೊಬ್ಬರ ಮತ್ತು ಮಣ್ಣು ಮಿಶ್ರಣವನ್ನು ತುಂಬಿ ಮುಂದಿನ ವರ್ಷ ತಾವು ಬಿತ್ತಲಿರುವ ರಾಗಿ, ಭತ್ತ, ಅವರೆ, ಹುರುಳಿ ಮುಂತಾದ ಐದು ಅಥವಾ ಒಂಭತ್ತು ಧಾನ್ಯಗಳನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತಾರೆ. ಒಂಭತ್ತು ದಿನದವರೆಗೆ ನೀರು ಚಿಮುಕಿಸುತ್ತಾ, ಒಂಭತ್ತನೇ ದಿನದಂದು ಎಲ್ಲ ಮನೆಯವರು ಒಂದೆಡೆ ತಂದಿಡುತ್ತಾರೆ. ಅಂದು ಊರ ಹಿರಿಯರೆಲ್ಲರೂ ಸೇರಿ ಯಾವ ಧಾನ್ಯ ಚೆನ್ನಾಗಿ ಮೊಳಕೆ ಬಂದಿದೆಯೋ ಆ ಧಾನ್ಯದ ಫಸಲು ಬರುವ ವರ್ಷ ಹುಲುಸಾಗುತ್ತದೆಂದು ತೀರ್ಮಾನಿಸುತ್ತಾರೆ. ಮೊಳಕೆ ಚೆನ್ನಾಗಿ ಬರದ ಧಾನ್ಯಗಳ ಬಿತ್ತನೆ ಬೀಜ ಸರಿಯಾಗಿಲ್ಲವೆಂದು ತಿಳಿದು ಬದಲಾಯಿಸಿಕೊಳ್ಳುವುದೂ ಉಂಟು. ಈ ಆಚರಣೆಯನ್ನು ಹೊನ್ನೇರು ಪೂಜೆ' ಎಂದೂ ಕರೆಯುತ್ತಾರೆ.

ಬಿತ್ತನೆ ಬೀಜಗಳ ಮೊಳಕೆ ಶಕ್ತಿಯನ್ನು ಪರೀಕ್ಷಿಸುವ ಈ ಆಚರಣೆ ಅತ್ಯಂತ ವಿಶಿಷ್ಟವಾದುದು.

ಇದು ರೈತರ ಜಾಣತನಕ್ಕೆ ನಿದರ್ಶನ. ಈ ಆಚರಣೆ ಈಗ ಜಾಗತೀಕರಣದ ಪ್ರಭಾವಕ್ಕೆ ಸಿಕ್ಕಿಲ್ಲದ ಸೋಂಕದ ಕಾಡುಹಳ್ಳಿಗಳಲ್ಲಿ ಮಾತ್ರ ಜೀವಂತವಾಗಿದೆ.

ಗಡಿ ಕಾರ ಹಬ್ಬ

ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ ತಾಲೂಕಿನ ಶೆಟ್ಟಿಕೆರೆಯಲ್ಲಿ ಪ್ರತಿ ವರ್ಷ ಮುಂಗಾರು ಮಳೆ ಆರಂಭದ ಸಂದರ್ಭದಲ್ಲಿ 'ಗಡಿ ಕಾರ ಹಬ್ಬ' ಮಾಡ್ತಾರೆ. ಈ ಹಬ್ಬದಲ್ಲಿ ಆ ವರ್ಷ ಬಿತ್ತುವ ಎಲ್ಲಾ ಬೀಜಗಳನ್ನು ಹೊಸ ಮಡಿಕೆಯಲ್ಲಿ ತುಂಬಿ ಊರ ಹೆಬ್ಬಾಗಿಲಿನಲ್ಲಿ ಇಟ್ಟು, ಅದರ ಮೇಲೆ ಎತ್ತು ಕಟ್ಟಿದ ನೇಗಿಲಿನಿಂದ ಹೊಡೆಸುತ್ತಾರೆ. ಆಗ ಮಡಿಕೆಯಿಂದ ಚಿಮ್ಮಿದ ಬೀಜಗಳಲ್ಲಿ ಯಾವ ಬೀಜ ದೂರಕ್ಕೆ ಚಿಮ್ಮಿರುತ್ತದೆಯೋ ಅದು ಆ ವರ್ಷದ ಬಂಪರ್ ಬೆಳೆ ಎಂಬ ನಂಬಿಕೆ ರೈತರದ್ದು.

ಮೊಳಕೆ ಪಡುಗ

ಮಾರಮ್ಮನ ಜಾತ್ರೆಯನ್ನು ಊರು ಹಬ್ಬವಾಗಿ ಆಚರಿಸುವುದು ಬಳ್ಳಾರಿ ಭಾಗದಲ್ಲಿ ಸಾಮಾನ್ಯ. ಹಬ್ಬದ ದಿನ ಹರಿಜನರ ಮನೆಯಲ್ಲಿ, ಸುಟ್ಟ ಹೊಸ ಮಣ್ಣಿನ ಸೋರೆ (ಮಡಿಕೆ)ಯಲ್ಲಿ ನವಧಾನ್ಯಗಳನ್ನು ತುಂಬಿ ಪ್ರತಿದಿನ ಪೂಜೆಮಾಡಿ ತೆಂಗಿನ ಕಾಯಿಯ ನೀರು ಹಾಕಿ, ಮೊಳಕೆ ಪರೀಕ್ಷೆ ಮಾಡುತ್ತಾರೆ. ೯ ದಿನದ ನಂತರ, ಊರ ಬಾಗಿಲಲ್ಲಿ ಚೌಕಿಮನೆಯಲ್ಲಿ ದೇವಿ ಮುಂದೆ ಇಡುತ್ತಾರೆ. ಮೊಳಕೆ ಪಡಗ ಮತ್ತು ಪಡಗ ಎರಡನ್ನು ಇಟ್ಟು ಪೂಜೆ ಮಾಡುತ್ತಾರೆ. ಮೊಳಕೆ ನೋಡಿ ಆ ವರ್ಷದ ಮಳೆ ಬೆಳೆ ನಿರ್ಧರಿಸುತ್ತಾರೆ.

ಕೂರಿಗೆ ಪೂಜೆ

ಬಿತ್ತನೆ ಮಾಡುವ ದಿನ ಹೊಲದಲ್ಲಿ ಕೂರಿಗೆ ಪೂಜೆ ಮಾಡುತ್ತಾರೆ. ನಮ್ಮ ಭೂಮಿ, ಬೀಜ, ದನಕರು, ಬೇಸಾಯದ ಉಪಕರಣಗಳನ್ನು ದೇವರೆಂದು ಭಾವಿಸಿ, ಭಕ್ತಿ ಸಮರ್ಪಿಸುವ ಪೂಜೆ ಇದಾಗಿದೆ. ನಾವು ಬಿತ್ತುವ ಬೀಜ ಹುಲುಸಾಗಿ ಬೆಳೆಯಲಿ. ರೈತರ ಹಸಿವು ನೀಗಲಿ ಎಂಬ ಮನಸ್ಸಿನ ಧ್ವನಿ ಈ ಪೂಜೆಯಿಂದ ಹೊರಬೀಳುತ್ತದೆ.

'ನಿಧಿ' ಇಡುವುದು:

ಉತ್ತರ ಕರ್ನಾಟಕದ ಭಾಗದಲ್ಲಿ ಬಿತ್ತನೆಗೆ ಹೋಗುವ ಮುನ್ನ ಊರ ದೇವರ ಮುಂದೆ ಐದು ಸಣ್ಣ ಗುಂಪು ಬೀಜ ಇಟ್ಟು ಪೂಜೆ ಮಾಡುತ್ತಾರೆ. ಅದರಿಂದ ಐದು ಕಾಳು ವಾಪಸ್ ಮನೆ ಬೀಜಕ್ಕೆ ಸೇರಿಸುತ್ತಾರೆ. ಇದನ್ನ 'ನಿಧಿ' ಇಡುವುದು ಎಂದು ಕರೆಯುತ್ತಾರೆ.

ಎಲ್ಲಾ ಬೀಜಗಳನ್ನ (ಹೆಸರು, ಸಜ್ಜೆ, ಜೋಳ, ಎಳ್ಳು, ಪುಂಡೆ) ಕಲಿಸಿ ದೇವರ ಮುಂದೆ ಐದು ಗುಂಪಾಗಿ ಇಟ್ಟು, ಮೊದಲು ಇಟ್ಟವರ ಗುಂಪಿನಿಂದ ಕಾಳು ಎತ್ತಿ ಧೋತ್ರದ ಉಡಿಯಲ್ಲಿನ ಮನೆ ಬೀಜಕ್ಕೆ ಸೇರಿಸುತ್ತಾರೆ.

ಕೂರಿಗೆ ಮುಂದೆಯೂ ಐದು ಗುಂಪು ಇಡುತ್ತಾರೆ, ಉಡಿಚೇಲ ಕೂರಿಗೆ ತಲೆಗೆ ಕಟ್ಟುತ್ತಾರೆ.

ಹೊಲದ ಹೆಚ್ಚು

ರಾಗಿ ಬೆಳೆಯ ಕಟಾವಿನ ಸಮಯದಲ್ಲಿ ರೈತರು ಮಾಡುವ ವಿಶೇಷ ಆಚರಣೆ 'ಹೊಲದ ಹೆಚ್ಚು'. ನಾವು ಬೆಳೆದ ಬೆಳೆ ಹೆಚ್ಚಾಗಲಿ, ಎರಡರಷ್ಟಾಗಲಿ ಎನ್ನುವುದು ಈ ಆಚರಣೆಯ ಹಿನ್ನೆಲೆ. ಈ ಆಚರಣೆಯಲ್ಲಿ ರೈತರು ಕಿಚಡಿಯನ್ನು ಬೆಳೆಗೆ ಎಡೆ ಮಾಡಿ, ಹೊಲದ ಸುತ್ತಲೂ ಎರಚುತ್ತಾರೆ. ಇದಕ್ಕೆ 'ಚರಗ' ಎಸೆಯುವುದು ಎನ್ನುತ್ತಾರೆ. ಈ ಸಂದರ್ಭದಲ್ಲಿ ಅವರೆ, ತೊಗರಿ ಮುಂತಾದ ದ್ವಿದಳ ಧಾನ್ಯಗಳಿಗೆ ಕೀಟ ಬಾಧೆ ಪ್ರಾರಂಭವಾಗುತ್ತಿರುತ್ತದೆ. ಆಗ ಚರಿಗೆಯನ್ನು ತಿನ್ನಲು ಬರುವ ಹಕ್ಕಿಗಳು ಕೀಟವನ್ನು ಹಿಡಿದು ತಿನ್ನುತ್ತವೆ. ಇದು ಈ ಆಚರಣೆಯ ವೈಜ್ಞಾನಿಕ ಹಿನ್ನಲೆ.

ಕದಿರು ತರುವುದು:


ಮಲೆನಾಡಿನಲ್ಲಿ ಸುಬ್ರಮಣ್ಯ ಷಷ್ಟಿಯಲ್ಲಿ ಕದಿರು ತಂದು ದೇವಸ್ಥಾನದಲ್ಲಿ ಪೂಜೆ ಮಾಡಿ. ಮನೆಗೆ ತಂದು ಎಡೆ ಮಾಡಿ ಕಣಜಕ್ಕೆ ನೈವೇದ್ಯ ಮಾಡುತ್ತಾರೆ .ಬತ್ತದ ಕಣಜಕ್ಕೆ ದೃಷ್ಟಿ ತೆಗೆಯುವ ಉದ್ದೇಶ ಇದರಲ್ಲಿ ಅಡಗಿದೆ.

ಮಾವುಳೆ:

ಶಿವಮೊಗ್ಗ, ಹೂಸನಗರಗಳಲ್ಲಿ. ಆಷಾಡ ಮಾಸದಲ್ಲಿ ಬಿತ್ತನೆ ಮಾಡುವ ಮೊದಲು ಪಿತೃಗಳಿಗೆ ಎಡೆ ಇಡುವ ಪದ್ಧತಿ ಇದೆ. ಈ ಪದ್ಧತಿಯನ್ನು ಕೃಷಿ ಕೆಲಸ ಸಾಂಗೋಪ ಸಾಂಗವಾಗಿ ಸಾಗಲಿ ಎಂಬ ನಂಬಿಕೆಯಿಂದ ಮಾಡುತ್ತಾರೆ.

ರಾಶಿ ಪೂಜೆ

ಬೇಸಾಯದ ಪ್ರತಿಯೊಂದು ಹಂತದಲ್ಲೂ ನಡೆಯುವ ಈ ಕೃಷಿ ಆಚರಣೆಗಳಲ್ಲಿ ಕಟ್ಟ ಕಡೆಯದು ಮತ್ತು ಬಹು ವಿಶಿಷ್ಟವಾದುದು ರಾಶಿಪೂಜೆ. ದಕ್ಷಿಣ ಕರ್ನಾಟಕದ ಹಳ್ಳಿಗಳಲ್ಲಿ ತಾಗಿ ಬೆಳೆಯುವ ಎಲ್ಲೆಡೆ ರಾಶಿಪೂಜೆ ಅಥವಾ 'ಕಡಗಣದ ಪೂಜೆ' ಸರ್ವೇಸಾಮಾನ್ಯ. ಫೆಬ್ರವರಿ ಮುಗಿದು ಚಳಿ ನಿಧಾನವಾಗಿ ಕಾಲ್ತೆಗೆದು ಬಿರು ಬಿಸಿಲು ಇಣುಕಿ ನೋಡುವ



ವೇಳೆಗೆ ರೈತರು ಜರೂರಿ ಕೆಲಸಗಳನ್ನು ಮುಗಿಸಿ ಲಕ್ಷ-ಲಕ್ಷ ಚುಕ್ಕಿಗಳ ಮತ್ತು ಪೂಣ ಚಂದಿರನ ಬೆಳಕಲ್ಲಿ ಕಣಕ್ಕೆ ಹುಲ್ಲು ಹಾಕುತ್ತಾರೆ.

ಬಿತ್ತನೆ ಬೀಜದ ಆಚರಣೆಗಳು:

- ಮಹಾನವಮಿಯ ಘಟಸ್ಥಾಪನೆ ದಿನ ಮೊಳಕೆ ಪರೀಕ್ಷೆ ಮಾಡುವ ಪದ್ಧತಿ ಧಾರವಾಡ ಭಾಗದಲ್ಲಿದೆ.
- ಭರತ್ ಹುಣ್ಣಿಮೆ ದಿನ ಮಕೋಟ್ಲ ಚುಕ್ಕಿ ನೋಡುವ ಪದ್ಧತಿ ಆನೇಕಲ್ ಭಾಗದಲ್ಲಿದೆ.
- ಯುಗಾದಿಯ ಸಂಜೆ ಸಂದರ್ಭ ಚಂದ್ರನ ಕೋಡು ನೋಡಿ ಮಳೆ ಬೆಳೆ ನಿರ್ಧರಿಸುತ್ತಾರೆ.
- ಬಿತ್ತನೆ ಪೂರ್ವದಲ್ಲಿ ದೇವಿಗೆ ಹುಡಿ ತುಂಬುವುದು ಉತ್ತರ ಕರ್ನಾಟಕದ ಭಾಗದ ಸಂಪದಾಯ
- ಸೀಗೆ ಹುಣ್ಣಿಮೆ ಮತ್ತು ಎಳ್ಳು ಅಮಾವಾಸ್ಯೆ ದಿನ ಹೊಲಗಳಿಗೆ ಚರಗ ಚೆಲ್ಲಿ ಪೂಜಿಸುವುದು.
- ನಾಗರ ಪಂಚಮಿಯಲ್ಲಿ 'ಸಜ್ಜೆ'ಮೊಳಕೆ ಪರೀಕ್ಷೆ ಇದೆ.
- ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಹಳ್ಳಿಯಲ್ಲಿ ವಿಶೇಷ ಕಾರಬ್ಬ ಆಚರಿಸುತ್ತಾರೆ.
- "ಹುಲುಸು ತರುವುದು" - ಯಲಕುಂದ್ಲಿ ಭಾಗದ ಆಚರಣೆ.
- ದೀಪಾವಳಿ ಸಂದರ್ಭದಲ್ಲಿ ಭತ್ತ ಕೊಯ್ದು ತಂದು, ಊರಬಾಗಿಲಿನಲ್ಲಿ ದೇವಸ್ಥಾನದ ಎದುರು ತೆನೆ ಇರುವಂತೆ ಭತ್ತದ ಚಪ್ಪರ ಮಾಡುತ್ತಾರೆ. ಊರಿನ ಪಟೇಲ ಬಂದು ದೇವಸ್ಥಾನದಲ್ಲಿ ಪೂಜೆಮಾಡಿ, ಕಾಯಿ ತಂದು ಊರ ದೇವಸ್ಥಾನದ ಎದುರು ಈಡುಗಾಯಿ ಹೊಡೆಯುತ್ತಾರೆ. ನೆರೆದ ಜನ ಭತ್ತದ ತೆನೆ ತೆಗೆದುಕೊಂಡು ಹೋಗಲು ಪೈಪೋಟಿ ನಡೆಸುತ್ತಾರೆ. ಪೈಪೋಟಿ ನಡೆಸಿಪಡೆದ ಭತ್ತದ ತೆನೆಯನ್ನು ಹೊಸ್ತಿಲ ಹೆಬ್ಬಾಗಿಲಿಗೆ ಸಿಕ್ಕಿಸಿ ಬಿತ್ತುವಾಗ ಬಿತ್ತನೆ ಬೀಜದ ಜೊತೆ ಈ ತೆನೆಗಳನ್ನು ಮಿಶ್ರಮಾಡುತ್ತಾರೆ.
- ಬನವಾಸಿಯ ಮಧುಕೇಶ್ವರ ದೇವಸ್ಥಾನದ ಜಾತ್ರೆ ಪೂರ್ವದಲ್ಲಿ (ವಾರದ ಮುಂಚೆ) ದೇವಸ್ಥಾನದಲ್ಲಿ ನವಧಾನ್ಯಗಳ ಬಿತ್ತನೆ ನಡೆಯುತ್ತದೆ. ಹೊಸ ಮಡಿಕೆಯೊಂದರಲ್ಲಿ ಮಣ್ಣು, ಗೊಬ್ಬರಹಾಕಿ ಪೂಜೆ ಮಾಡಿ ಧಾನ್ಯ ಬಿತ್ತುತ್ತಾರೆ. ಪೂಜಾರಿಯು ಪ್ರತಿ ದಿನ ನೀರುಹಾಕಿ ಪೂಜೆ ಮಾಡುತ್ತಾರೆ. ರಥೋತ್ಸವ ಮುಗಿದ ಮೇಲೆ ದೇವರು ಸ್ನಾನಕ್ಕೆ ಹೋಗುತ್ತದೆ (ಪಲ್ಲಕ್ಕಿ ಪ್ರದಕ್ಷಣೆ). ಆ ಸಂದರ್ಭದಲ್ಲಿ ಪ್ರತಿ ಮನೆ ಬಾಗಿಲಲ್ಲಿ ಕಾಯಿ ಹೊಡೆದು, ಪ್ರಸಾದವಾಗಿ ಪೈರುನೀಡುತ್ತಾರೆ. ಸುತ್ತಲಿನ ರೈತರು ದೇವಸ್ಥಾನಕ್ಕೆ ಬಂದು ಮೊಳಕೆ ಪರೀಕ್ಷೆಯನ್ನು ಗಮನಿಸುತ್ತಾರೆ. ಆ ವರ್ಷದ ಬೆಳೆ ಭವಿಷ್ಯ ನಿರ್ಧರಿಸುತ್ತಾರೆ.
- ಮಡಿಲು ತುಂಬಿಸುವ ಕಾರ್ಯ(ಮದುವೆ, ಸೀಮಂತ, ಮಗುವಿನ ನಾಮಕರಣ)ದಲ್ಲಿ ಬೀಜ ಪಡೆವ ಪದ್ಧತಿ ಇದೆ.
- **ಮೊಳಕೆಮರ:** ಈ ಸಂಪ್ರಾದಾಯಕ ಪದ್ಧತಿ ದಕ್ಷಿಣ ಕರ್ನಾಟಕದಲ್ಲಿ ಚಾಲ್ತಿಯಾಲ್ಲಿದೆ.

ಯುಗಾದಿ ದಿನದಂದು ನವಧಾನ್ಯಗಳನ್ನು ಗೊಬ್ಬರದೊಂದಿಗೆ ಬೆಳೆಸಿ, ಒಂದು ಪಾತ್ರೆಯಲ್ಲಿ ಇಟ್ಟು ಒಂಭತ್ತು ದಿನ ನೀರು ಹಾಕಲಾಗುತ್ತದೆ. ಮೊಳಕೆ ಪ್ರಮಾಣ ಅನುಸರಿಸಿ ಗ್ರಾಮಾದ ಹಿರಿಯರು ಒಂದು ಸುಗ್ಗಿಯಲ್ಲಿ ಆಗುವ ಬೆಳೆ ಚೆನ್ನಾಗಿ ಇಳುವರಿ ಬರುತ್ತದೆಂದು ಭವಿಷ್ಯ ಹೇಳುತ್ತದೆ. ಬೀಜ ಮೊಳಕೆ ಸರಿಯಾಗಿ ಬರದಿದ್ದರೆ ಬಿತ್ತನೆಗೆ ಬಳಸಬಾರದೆಂಬುದು ನಂಬಿಕೆ. ಕೃಷಿಉಪಕರಣ ಪೂಜೆಗೆ ತೆಗೆಯುವಾಗ ಅವುಗಳಿಗೆ ಆಗಬೇಕಾದ ದುರಸ್ಥಿಯ ಬಗ್ಗೆ ರೈತರಿಗೆ ತಿಳಿಯುತ್ತದೆ.





೮. ಬೀಜಗಳೇ ಮರಳಿ ಬನ್ನಿ...

ಬೀದರ್‌ನಿಂದ ಆರಂಭಿಸಿ ಚಾಮರಾಜನಗರದ ಕಡೆಯ ಹಳ್ಳಿವರೆಗೆ: ಈ ಕಡೆ ಪಾವಗಡದ ಕುಗ್ರಾಮದಿಂದ ಹೊರಟು ಉತ್ತರ ಕನ್ನಡದ ಹಾಡಿಗೆ ನಡೆದು ಬಂದರೂ ತಕ್ಷಣ ಎದುರುಗೊಳ್ಳುವುದು ರೈತನ ಮುಖವೇ ವರ್ಷವಿಡೀ ಆತ ದುಡಿಯುತ್ತಾನೆ, ದಣಿಯುತ್ತಾನೆ. ತನ್ನ ಬಿಡುವಿಲ್ಲದ ಕೆಲಸದ ಮಧ್ಯೆಯೂ ಕೃಷಿಗೆ ಸಂಬಂಧಿಸಿದ ಹಾಡುಗಳೊಂದಿಗೆ ಕುಣಿಯುತ್ತಾನೆ. ಖುಷಿಪಡುತ್ತಾನೆ.

ಇದೆಲ್ಲಕ್ಕಿಂತ ಮುಖ್ಯಸಂಗತಿಯೊಂದಿದೆ. ಏನೆಂದರೆ, ನಮ್ಮ ರೈತರು ತಲೆತಲಾಂತರದಿಂದಲೂ ಅಪರೂಪದ ಬಿತ್ತನೆ ಬೀಜಗಳನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಉತ್ತಮ ಇಳುವರಿಯ ಬೀಜಗಳನ್ನು ಬಂಧುಗಳಿಗೆ ನೀಡುವ ಮೂಲಕ ಅವುಗಳು ಹಾಳಾಗದಂತೆ ಕಣ್ಮರೆಯಾಗದಂತೆ ನೋಡಿಕೊಂಡಿದ್ದಾರೆ. ಯಾವುದಾದರೂ ಹಬ್ಬದ ನೆಪದಲ್ಲಿ; ಇನ್ನಾವುದೋ ಕೌಟುಂಬಿಕ ಕಾರ್ಯಕ್ರಮದ ಹೆಸರಿನಲ್ಲಿ ಬರುವ ಬಂಧುಗಳು–ಕಳೆದ ವರ್ಷ ಬೆಳೆಹಾಳಾಯಿತು ಎಂದರೆ ಸಾಕು– 'ಹೌದು? ಯಾವ ಬೆಳೆ ಹಾಕಿದ್ರಿ? ಗೊಬ್ಬರ ಹಾಕಲಿಲ್ವ? ಎಲ್ಲಿ ತಪ್ಪಾಯಿತು? ಬೆಳೆ ಉಳಿಸಿಕೊಳ್ಳಲು ಏನು ಪ್ರಯತ್ನ ಮಾಡಿದಿರಿ, ಎಂದೆಲ್ಲ ವಿಚಾರಿಸಿಕೊಂಡೇ–ತಮ್ಮ ಬಳಿಯಿದ್ದ ಅಪರೂಪದ ಬೀಜವನ್ನು ಉಚಿತವಾಗಿ ಕೊಟ್ಟು ಈ ಬಾರಿ ಇದನ್ನೇ ಬಿತ್ತನೆ ಮಾಡಿ ನಿಮಗೆ ಲಾಸ್ ಆಗೋಕೆ ಸಾಧ್ಯವೇ ಇಲ್ಲ ಎನ್ನುತ್ತಿದ್ದರು.

ಆ ಅಪರೂಪದ ಬೀಜಗಳು ಕಾಲ ಬದಲಾದ ನಂತರವೂ ಉಳಿದುಕೊಂಡವು. ತಂದೆ ಬೆಳೆದ ಬೀಜಗಳನ್ನೇ ಮುಂದೆ ಮಗ ಬೆಳೆದ ಆ ಬೀಜವನ್ನೇ ಮೊಮ್ಮಗನೂ ಸಂರಕ್ಷಿಸಿಕೊಂಡು ಬಂದ. ಪರಿಣಾಮ, ವರ್ಷವರ್ಷವು ಅದೇ ರಾಶಿ, ಅದೇ ಭತ್ತ, ಅದೇ ನವಣೆ, ಅದೋ

ರಾಗಿ ಬೆಳೆದರೂ ರೈತ ಬಡವಾಗಿರಲಿಲ್ಲ ಮಳೆ ಬೀಳದಿದ್ದರೂ ಬದುಕೆಂಬುದು ಅದು ಹೇಗೊ ನಡೆದು ಬಿಡುತ್ತಿತ್ತು.

ಆದರೆ ೬೦ರ ದಶಕ ಅಧಿಕ ಇಳುವರಿಯ ಆಸೆ ರೈತರನ್ನು ಆವರಿಸಿಕೊಂಡಿತು. ಪೌಷ್ಠಿಕಾಂಶದ ಆಹಾರದ ಬದಲಿಗೆ ಭಾರೀ ಇಳುವರಿ ನೀಡುವಂಥ ಬೆಳೆ ಬೆಳೆದು ಅದನ್ನು ಮಾರಿ ಬೇಗ ಶ್ರೀಮಂತನಾಗಿಬಿಟ್ಟರೆ ಸಾಕೆಂದು ರೈತ ಯಾಚಿಸಿದ. ಇದೇ ವೇಳೆಗೆ ಸರಿಯಾಗಿ, ಬಹುರಾಷ್ಟ್ರೀಯ ಕಂಪನಿಗಳು ರೈತರನ್ನು ದಾರಿ ತಪ್ಪಿಸಲು ತೊಡಗಿದವು. ಅವಧಿಗೂ ಮೊದಲೇ ಇಳುವರಿ ಕೊಡುವ ಬೀಜಗಳನ್ನು ಮಾರುಕಟ್ಟೆಗೆ ಬಿಟ್ಟವು. ಇವುಗಳನ್ನು ಹೊಲದಲ್ಲಿ ಬಿತ್ತಿದರೆ ಮಹಾಕ್ರಾಂತಿಯೇ ಆಗಿಬಿಡುತ್ತದೆ. ಎಂದು ಬೊಬ್ಬೆ ಹೊಡೆದವು. ವಿಪರ್ಯಾಸವೆಂದರೆ ಇಂಥ ಆತಂಕಕಾರಿ ವಿಷಯಕ್ಕೆ ಮಾಧ್ಯಮಗಳಲ್ಲಿ ವಿಪರೀತ ಎಂಬಷ್ಟು ಪ್ರಚಾರವೂ ಸಿಕ್ಕಿತು. ಬಹುರಾಷ್ಟ್ರೀಯ ಕಂಪನಿಗಳ ಎಂಜಲು ಕಾಸಿಗೆ ಆಸೆಪಟ್ಟ, ನಮ್ಮ ರಾಜಕೀಯ ನಾಯಕರು ರೈತರನ್ನು ಎಚ್ಚರಿಸುವ ಗೋಜಿಗೇ ಹೋಗದೆ ತೆಪ್ಪಗೆ ಉಳಿದುಬಿಟ್ಟರು.

ಪರಿಣಾಮ ಎಲ್ಲರೂ ಊಹಿಸಿಕೊಂಡಿದ್ದಕ್ಕಿಂತ ಭಿನ್ನವಾಗಿತ್ತು. ಘೋರವಾಗಿತ್ತು. ಅಧಿಕ ಇಳುವರಿಯ ಆಸೆಯಿಂದ ಮನೆಬೀಜ ಬಿತ್ತಿರಲಿಲ್ಲ, ಹೊಸ ಬೀಜ ಪೊಗದಸ್ತಾಗಿ ಬೆಳೆಯಿತು. ಆದರೆ ಎರಡನೇ ವರ್ಷದ ಬೆಳೆಯ ವೇಳೆಗೆ ಹೊಲಗದ್ದೆಯ ಮಣ್ಣಿನಲ್ಲಿ ಸತ್ವವೇ ಮಾಯವಾಗುತ್ತಾ ಬಂತು. ಅದೆಷ್ಟು ಗೊಬ್ಬರ, ನೀರು ಹಾಕಿದರೂ ಪ್ರಯೋಜನವಾಗಲಿಲ್ಲ. ಈ ಕಡೆ ಅಧಿಕ ಇಳುವರಿ ಬಂತೆಂದು ಅದನ್ನೇ ವರ್ಷಪೂರಾ ತಿಂದು ಮುಂದಿನ ವಾರ್ಷಕ್ಕೂ ಒಂದಷ್ಟು ಉಳಿಸಬಹುದು. ಎಂದುಕೊಂಡಿದ್ದ ರೈತ. ಅದರೆ, ತಿಂದ ಅನ್ನವೇ ವಿಷವಾಯಿತ್ತು. ಒಂದೊಂದೇ ರೋಗಗಳು ಗಂಟುಬೀಳತೊಡಗಿದವು. ಇವೆಲ್ಲಕ್ಕೂ ಜಾಗತೀಕರಣದ ಪರಿಸರ, ಬಹುರಾಷ್ಟ್ರೀಯ ಕಂಪನಿಗಳಿಂದ ಪಡೆದು ತಂದ ಬೀಜವೇ ಕಾರಣ ಎಂದು ತಿಳಿಯುವ ವೇಳೆಗೆ ತಡವಾಗಿತ್ತು. ಈ ಸಂದರ್ಭದಲ್ಲಿ ರೈತರೆಲ್ಲ ತಲೆಮಾರಿನಿಂದ ಕೊಡುಗೆಯಾಗಿ ಬಂದಿದ್ದ ಬೀಜವನ್ನೇ ಮತ್ತೆ ಬಿತ್ತಲು ನೋಡಿದರು ನಿಜ. ಆದರೆ ಆ ವೇಳೆಗೆ ಹೊಲ-ಗದ್ದೆಯ ನೆಲ ಒಂದಿಲಾ ಬರಡಾಗಿ ಹೋಗಿತ್ತು. ಹೊಸ ಬೆಳೆಯನ್ನು ಬೆಳೆಸುವ ಉತ್ಸಾಹವನ್ನೇ ಕಳೆದುಕೊಂಡಿತ್ತು.

ಈಗ ನಾವಿರುವುದು ಅಂಥ ಸಂಕಷ್ಟ ಪರಿಸ್ಥಿತಿಯಲ್ಲಿ ಒಂದೇ ಒಂದು ಸಮಾಧಾನವೆಂದರೆ ಈಗಲೂ ಕಾಲ ಮಿಂಚಿಲ್ಲ. ತಾತನ ಕಾಲದ ಆಚರಣೆ ಎಂದು ಮೂಗು ಮುರಿಯದೆ; ಕಡಿಮೆ ಇಳುವರಿಯ ಬೀಜ ಎಂದು ಕಡೆಗಣಿಸದೆ; ಹಳೆಯದು ಎಂಬ ನಿರ್ಲಕ್ಷ್ಯ ಮಾಡದೆ ಅಪ್ಪನ ಕಾಲದ ಬೀಜಗಳನ್ನೇ ಬಳಸಿದರೆ ರೈತರ ಬದುಕು ಬಂಗಾರವಾಗುತ್ತದೆ ಎಂಬ ಮಾತನ್ನು ಒಪ್ಪದಿರಲು ಸಾಧ್ಯವೇ ಇಲ್ಲ.

ಅಂಥದೊಂದು ಸಮೂಹ ಕ್ರಾಂತಿಗೆ ನಮ್ಮ ರೈತಬಾಂಧವರು ತಮ್ಮನ್ನು ಒಡ್ಡಿಕೊಳ್ಳಲಿ ಎಂಬ ಮಹದಾಸೆಯೊಂದಿಗೆ ಈ ಹಿಂದೆ ಚಾಲ್ತಿಯಲ್ಲಿದ್ದ ಬೀಜಗಳು; ಕೃಷಿ ಬದುಕಿನ ಆಚರಣೆಗಳು; ನಂಬಿಕೆಗಳು, ಮತ್ತು ಆಚಾರ ವಿಚಾರಗಳನ್ನು ಇಲ್ಲಿ ಮತ್ತೊಮ್ಮೆ ವಿವರವಾಗಿ ವಿವರಿಸಲಾಗಿದೆ. ಬನ್ನಿ! ಬೀಜಕ್ರಾಂತಿಗೆ ಮುಂದಾಗಿ...

ಗ್ರಂಥಋಣ

೧. ವ್ಯವಸಾಯ ಭೋಧಿನಿ, ೧೯೨೫(?)

೨. ಬೀಜದ ಬುಟ್ಟಿ – ನಾಟಿತಳಿಗಳ ಲೋಕದಲ್ಲೊಂದು ಸುತ್ತು, ೨೦೦೪, ಗ್ರೀನ್ ಪ್ರತಿಷ್ಠಾನ.

೩. ಕದಿರು–ಭತ್ತದ ನಾಟಿ ತಳಿಗಳ ದಾಖಲೆ ೨೦೦೪, ಕೃಷಿ ಪ್ರಯೋಗ ಪರಿವಾರ, ಶಿವಮೊಗ್ಗ.

೪. ಭತ್ತದ ತಳಿಗಳ ಬಂಧು–ಬಂಗಾರಿ ಕಲ್ಲೂರು ದೇವರಾವ್, ಅಡಿಕೆ, ಪತ್ರಿಕೆ, ನವೆಂಬರ್ ೨೦೦೦

೫. ನೆಟ್ಟಿರಾಗಿ ೨೦೦೫, ಮಲ್ಲಿಕಾರ್ಜುನ ಹೊಸಪಾಳ್ಯ.

೬. ಜೋಳ–ಕಪ್ಪುನೆಲದ ಬಿಳಿಯ ಮುತ್ತು ೨೦೦೪, ಗ್ರೀನ್ ಪ್ರತಿಷ್ಠಾನ.

ಬೀಜಜ್ಞಾನ ದಾಖಲಾತಿಗೆ ನೆರವಾದ ಮಹನೀಯರು:

- ಸಹಜ ಸಮೃದ್ಧ ಬೆಂಗಳೂರು.
- ಗ್ರೀನ್ ಪ್ರತಿಷ್ಠಾನ, ಬೆಂಗಳೂರು.
- ಗ್ರಾಮಚೇತನ, ಸೂರಶೆಟ್ಟಿಕೊಪ್ಪ
- ಶಿವರಾಂ ಪೈಲೂರು, ಧಾರವಾಡ
- ಆರ್.ಬಿ.ಹಿರೇಮಠ್, ಧಾರವಾಡ
- ಮೂಕಪ್ಪ ಪುಂಜಾರ್, ಚೆನ್ನಿಕಟ್ಟಿ
- ಗಂಗಮ್ಮ ರಾ ಗೌಡ್ರ, ಚೆನ್ನಿಕಟ್ಟಿ
- ಬೋರೇಗೌಡ, ಶಿವಳ್ಳಿ ಮಂಡ್ಯ
- ಜಯಪ್ರಸಾದ್, ಬಿ.ಸಿ.ಭೂಮಿ
- ಅಪ್ಪಾಜಿ ಹೊಳೆನರಸೀಪುರ
- ಹಿತ್ತಲಗಿಡ ಬೆಂಗಳೂರು
- ಜಯದೇವಯ್ಯ ಮಾರುಪಲ್ಲಿ
- ರಘುರಾಮ್ ಭಟ್ಟ, ಬನವಾಸಿ.
- ಸಮೂಹ ತಾವರೆಗೆರೆ
- ಬಿ.ಕೆ.ದೇವರಾವ್, ಬೆಳ್ತಂಗಡಿ
- ಸಿದ್ಧಪ್ಪ ಶೆಟ್ಟಿ, ಏಚ್ರೇ
- ಪೂರ್ಣಪ್ರಜ್ಞ ಬೇಳೂರು
- ಸಂಗಪ್ಪ ಉತ್ತಲದಿನ್ನಿ
- ಚಂದ್ರಶೇಖರ ಕಾಡಾದಿ
- ರೇಖಾ ಸಂಪತ್. ಕೆ,,
- ಪ್ರವರ್ಧ ಬಸವಕಲ್ಯಾಣ
- ದೇವೇಂದ್ರಪ್ಪ ಯಲ್ಲಕುಂದ್ಲಿ
- ಕುಮಾರಸ್ವಾಮಿ ಕೆ.ಎನ್.
- ನಾ. ಕಾರಂತ, ಅಡಿಕೆ ಪತ್ರಿಕೆ
- ಹೊಂಬಾಳಮ್ಮ ಥಳಿ
- ವಿಶ್ವನಾಥ್ ಅಣೆಕಟ್ಟೆ

ಬೆಳಗಾಗಿ ನಾನೆದ್ದು ಯಾರ‍್ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ / ಬೂಮ್ತಾಯಿ
ಎದ್ದೊಂದು ಗಳಿಗೆ ನೆನದೇನ

ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಹಸಿರುಕ್ರಾಂತಿಯ ಹೆಸರಿನಲ್ಲಿ ಭೂಮಿಯ ಜೈವಿಕಸತ್ವವನ್ನು ಮನುಷ್ಯ ನಾಶಮಾಡಿದ್ದಾನೆ.

ಆಧುನಿಕತೆಯ ಹೆಸರಿನಲ್ಲಿ ಭೂಮಿಯ ಮೇಲೆ ಅತ್ಯಾಚಾರ ನಡೆದಿದೆ. ಆದರೆ, ನಮ್ಮ ಪೂರ್ವಿಕರು ಎಂದೂ ನಿಸರ್ಗಧರ್ಮಕ್ಕೆ ವಿರುದ್ಧವಾಗಿ ಬದುಕನ್ನು ಕಟ್ಟಿಕೊಂಡವರಲ್ಲ.

ಬಿತ್ತುವ ಬೀಜ, ಬಳಸುವ ಗೊಬ್ಬರ, ಉಪಕರಣ, ಕೃಷಿ ಮಾಡುವ ವಿಧಾನ, ಕಾಲಮಾನ-ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ, ಇದು ದೇಸೀ ವಿಜ್ಞಾನ, ಇದು ಮಾತ್ರ ಜೀವ ಸಂಕುಲವನ್ನು, ನಿಸರ್ಗವನ್ನು ಬಾಳಿಸುವ ಕೃಷಿಪದ್ಧತಿ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ISBN 81-7713-251-2